

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 9 ಬುಧವಾರ 2023

ಸಂಪುಟ: 44 | ಸಂಚಿಕೆ: 115 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕಾಲಮಿತಿಯೊಳಗೆ ಸರ್ಕಾರಿ ಭೂಮಿ ಸರ್ಕಾರದ ವಶಕ್ಕೆ

–ಕಂದಾಯ ಸಚಿವ ಕೃಷ್ಣಭೈರೇಗೌಡರ ಖಡಕ್ ನುಡಿ

● ಮೈಸೂರು, ಬೆಂಗಳೂರು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಒತ್ತುವರಿ, ಅತಿಕ್ರಮಣ, ಕಬಳಿಕೆಯಾಗಿರುವ ಸರ್ಕಾರಿ ಭೂಮಿ ಸಂರಕ್ಷಣೆಗೆ ಶೀಘ್ರ ಕಾರ್ಯಾಚರಣೆ ● ಒತ್ತಡಕ್ಕೆ ಮಣೆಯಲ್ಲ; ಯಾವ ಹಸ್ತಕ್ಷೇಪ ಮಾಡಲ್ಲ ● ಸರ್ಕಾರದ ಒಂದಿಂಚು ಭೂಮಿ ಬಿಡಲ್ಲ ● ಅಧಿಕಾರಿಗಳ ಕಾರ್ಯಾಚರಣೆಗೆ ಮುಕ್ತ ಅವಕಾಶ ● ನೀತಿ ಪಾಠ ಮಾಡದೆ ಫಲಿತಾಂಶ ನೀಡಲು ತಾಕೀತು





ಮೈಸೂರು, ಆ.8(ಬಿಎಲ್‌ಯು)– **ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಖಾಸಗಿಯವರ ವಶದಲ್ಲಿರುವ ಸರ್ಕಾರಿ ಭೂಮಿಯನ್ನು ಕಾಲಮಿತಿಯೊಳಗೆ ತೆರವು ಮಾಡಿ, ಸರ್ಕಾರದ ವಶಕ್ಕೆ ಪಡೆಯಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ತಿಳಿಸಿದರು.**

ಮೈಸೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಖಾಸಗಿಯವರ ವಶದಲ್ಲಿರುವ ಸರ್ಕಾರಿ ಭೂಮಿ ಯಾವ್ಯಾವುದು ಎಂಬುದನ್ನು ಮೊದಲು ಗುರುತಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ತರುವಾಯ ಯಾವ ಕಾಲಮಿತಿಯೊಳಗೆ ತೆರವು ಮಾಡುತ್ತೇವೆ ಎಂಬ ಬಗ್ಗೆ ಶನಿವಾರದೊಳಗೆ ವರದಿ ನೀಡುವಂತೆ ಕೂಡ ತಾಕೀತು ಮಾಡಿದ್ದೇನೆ ಎಂದರು.

ಖಾಸಗಿಯವರ ವಶದಲ್ಲಿರುವ ಸರ್ಕಾರಿ ಭೂಮಿಯನ್ನು ಇಷ್ಟೇ ದಿನದಲ್ಲಿ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಟಾರ್ಗೆಟ್ ನೀಡಿದ್ದೇನೆ. ಈ ಕಾರ್ಯಾಚರಣೆ ಕೈಗೊಳ್ಳಲು ಅಧಿಕಾರಿಗಳಿಗೆ ಮುಕ್ತ ಅವಕಾಶ ನೀಡಲಾಗುವುದು. ಯಾವುದೇ ಒತ್ತಡಕ್ಕೆ ಒಳಗಾಗದೆ ನಾವು ಕೊಟ್ಟಿರುವ ಗುರಿ ಮುಟ್ಟುವಂತೆ ಹೇಳಿದ್ದೇನೆ. ತಿಂಗಳಿಗೆ ನಾವು ಕೊಟ್ಟಿರುವ ಟಾರ್ಗೆಟ್ ತಲುಪಬೇಕೆಂದು ಕಟ್ಟಾಜ್ಞೆ ಮಾಡಿದ್ದೇನೆ ಎಂದು ಸಚಿವ ಕೃಷ್ಣಭೈರೇಗೌಡ ಹೇಳಿದರು.

ಖಾಸಗಿಯವರ ವಶದಲ್ಲಿರುವ ಕೆರೆ, ಕಟ್ಟೆ ನಿವೇಶನ, ಜಮೀನು ಸೇರಿದಂತೆ ಸರ್ಕಾರದ ಯಾವುದೇ ಭೂಮಿ ಬಿಡಬಾರದು, ಎಲ್ಲವನ್ನು ಸರ್ಕಾರದ ವಶಕ್ಕೆ ಪಡೆಯಬೇಕು. ಈ ಮೂಲಕ ಪರಿಣಾಮಕಾರಿ ಕಾರ್ಯಾಚರಣೆ ಕೈಗೊಂಡು ಕೆಲವೇ ತಿಂಗಳಲ್ಲಿ ಖಾಸಗಿಯವರ ವಶದಲ್ಲಿರುವ ಭೂಮಿಯನ್ನು ಸರ್ಕಾರದ ಅಧೀನಕ್ಕೆ ಪಡೆಯಲಾಗುವುದು. ಇದಕ್ಕೂ ● 8ನೇ ಪುಟಕ್ಕೆ

ತಹಸೀಲ್ದಾರ್, ಎಸಿ, ಡಿಸಿ ಕೋರ್ಟ್‌ನಲ್ಲಿರುವ ಪ್ರಕರಣಗಳ ಇತ್ಯರ್ಥಕ್ಕೆ 3 ತಿಂಗಳ ಗಡುವು

● ಕಂದಾಯ ಸಚಿವ ಕೃಷ್ಣಭೈರೇಗೌಡರ ಕಟ್ಟುನಿಟ್ಟಿನ ಕಾಲಮಿತಿ ● ಇನ್ನು ವಾರದಲ್ಲಿ ಎರಡು–ಮೂರು ದಿನ ಕೋರ್ಟ್ ಕಲಾಪ ● ಮೈಸೂರು ವಿಭಾಗದಲ್ಲಿ ಸಾವಿರಾರು ಪ್ರಕರಣಗಳು ನನೆಗುದಿಗೆ

ಮೈಸೂರು, ಆ.8(ಎಂಕೆ)– ಕಂದಾಯ ಇಲಾಖೆಯಲ್ಲಿ ಆರು ತಿಂಗಳಿಂದ ಐದು ವರ್ಷಗಳವರೆಗಿನ ಎಲ್ಲಾ ಅರೆ ನ್ಯಾಯಿಕ ತಕರಾರು ಪ್ರಕರಣಗಳನ್ನು, ತಹಸೀಲ್ದಾರ್, ಎಸಿ ಹಾಗೂ ಡಿಸಿ ನ್ಯಾಯಾಲಯಗಳು ಮೂರು ತಿಂಗಳ ಕಾಲಮಿತಿಯಲ್ಲಿ ಇತ್ಯರ್ಥಪಡಿಸಬೇಕು ಎಂದು ಸಚಿವ ಕೃಷ್ಣಭೈರೇಗೌಡ ಅಧಿಕಾರಿಗಳಿಗೆ ಗಡುವು ನೀಡಿದರು.

ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ಉತ್ತಮ ಆಡಳಿತ ನೀಡುತ್ತೇವೆ ಎಂದು ನಮ್ಮ ಸರ್ಕಾರ ರಾಜ್ಯದ ಜನತೆಗೆ ಭರವಸೆ ನೀಡಿದೆ. ಅಧಿಕಾರಿಗಳ ಸಹಕಾರ ಇಲ್ಲದೆ ನಾವು ಕೊಟ್ಟ ಭರವಸೆ ಈಡೇರಿಸಲು ಸಾಧ್ಯವಿಲ್ಲ. ಆದರೆ, ಅಧಿಕಾರಿಗಳು ಉತ್ತಮ ಆಡಳಿತಕ್ಕೆ ಅನುಗುಣವಾಗಿ ಜನ ಸಾಮಾನ್ಯರ ಸಾವಿರಾರು ತಕರಾರು ಪ್ರಕರಣಗಳನ್ನು ಇತ್ಯರ್ಥಗೊಳಿಸದೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು. ಸರ್ಕಾರಕ್ಕೆ ಕಂದಾಯ ಇಲಾಖೆ ಮಾತೃ ಇಲಾಖೆಯಾಗಿದೆ. ರಾಜ್ಯದ ಬಹುತೇಕ ಜನರು ಹಾಗೂ ಕುಟುಂಬವನ್ನು ಮುಟ್ಟುವ ಕಾರ್ಯವ್ಯಾಪ್ತಿ ಕಂದಾಯ ಇಲಾಖೆಯದ್ದಾಗಿದೆ. ಹಾಗಾಗಿ ಜನಾದೇಶದಂತೆ ಉತ್ತಮ ಆಡಳಿತ ನೀಡಬೇಕಾದರೆ ಕಂದಾಯ ಇಲಾಖೆಯೇ ಮೊದಲ ಹೆಜ್ಜೆಯನ್ನಿಡಬೇಕು. ಇಲಾಖೆಯ ಯಾವುದೇ ಪ್ರಕರಣ ಅಥವಾ ವಿಲೇವಾರಿ ಇನ್ನಿತರೆ ಸೇವೆಗಾಗಿ ಸಲ್ಲಿಸಿದ ಅರ್ಜಿಗಳ ಇತ್ಯರ್ಥ 90 ದಿನಗಳ ಅವಧಿಯಲ್ಲಾಗಬೇಕು ಎಂಬ ನಿಯಮವಿದೆ. ಆದರೆ ಸಾವಿರಾರು ಪ್ರಕರಣಗಳು 90 ದಿನಗಳಿಗೂ ಮೇಲ್ಪಟ್ಟು, 2 ವರ್ಷ, ಮೂರು ವರ್ಷವಾದರೂ ಇತ್ಯರ್ಥವಾಗದೆ ಬಾಕಿ ಉಳಿದಿವೆ. ತಹಸೀಲ್ದಾರ್ ಹಂತದಲ್ಲಿ 6 ತಿಂಗಳಿಂದ 5 ವರ್ಷಗಳವರೆಗಿನ ಒಟ್ಟು 4,362 ತಕರಾರು ಪ್ರಕರಣಗಳು ಈವರೆಗೆ ಇತ್ಯರ್ಥವಾಗದೆ ಬಾಕಿ ಉಳಿದಿವೆ. ಆದ್ದರಿಂದ 6 ತಿಂಗಳಿಗಿಂತ ಹೆಚ್ಚಿನ ದಿನಗಳಿಂದ ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು ಯಾವುದೇ ವಿನಾಯಿತಿ ಇಲ್ಲದೆ ಮುಂದಿನ 3 ತಿಂಗಳ ಒಳಗಾಗಿ ಇತ್ಯರ್ಥಗೊಳಿಸಬೇಕು ಎಂದು ಸೂಚಿಸಿದರು. ● 8ನೇ ಪುಟಕ್ಕೆ

ಆ.15ರಿಂದ ಇ–ಆಫೀಸ್...

"ನವೀನ ತಂತ್ರಜ್ಞಾನ ಬಳಸಿಕೊಂಡು ಆಡಳಿತಕ್ಕೆ ವೇಗ ನೀಡಲು, ಕಡತ ವಿಲೇವಾರಿ ತ್ವರಿತಗೊಳಿಸಲು ಹಾಗೂ ಆಡಳಿತದಲ್ಲಿ ಪಾರದರ್ಶಕತೆ ತರಲು ಆ.15 ರಿಂದ ಜಿಲ್ಲಾಧಿಕಾರಿಗಳು ಇ–ಆಫೀಸ್ ಮುಖಾಂತರವೇ ಕೇಂದ್ರ ಕಚೇರಿಯೊಂದಿಗೆ ವ್ಯವಹರಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿರೋಧಿಗಳ ಷಡ್ಯಂತ್ರಕ್ಕೆ ನಾವು ಬಗ್ಗಲ್ಲ


ಮೈಸೂರು, ಆ.8(ಬಿಎಲ್‌ಯು)– ವಿರೋಧಿಗಳು ನಡೆಸುವ ಯಾವುದೇ ಷಡ್ಯಂತ್ರಕ್ಕೆ ನಾವು ಬಗ್ಗಲ್ಲ, ಅವರಿಗೆ ನಮ್ಮನ್ನು ಬಡಿಯಲು ಆಗಲ್ಲ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ತಿರುಗೇಟು ನೀಡಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದ ನಮ್ಮ ವಿರುದ್ಧ ಒಂದಲ್ಲ ಒಂದು ಷಡ್ಯಂತ್ರ ನಡೆಯುತ್ತಲೇ ಇದೆ. ಆದರೆ ಇಂತಹ ಯಾವುದೇ ಪಿತೂರಿಗಳು ನಡೆದರೂ ನಮ್ಮನ್ನು ಏನೂ ಮಾಡಲು ಆಗಲ್ಲ ಎಂದು ವಿರೋಧಿ ಪಾಳಯಕ್ಕೆ ಪರೋಕ್ಷವಾಗಿ ಎಚ್ಚರಿಕೆ ನೀಡಿದರು. ಸುಳ್ಳು ದಾಖಲೆ ಪತ್ರಗಳನ್ನು ಸೃಷ್ಟಿ ಮಾಡಿ, ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಪ್ರಯತ್ನ ನಡೆಯುತ್ತಿದೆ. ಶಾಸಕರ ಪತ್ರ ಕೂಡ ನಕಲಿ ಮಾಡಿದ್ದರು. ಅದು ನಕಲಿ ಎಂದು ತಿಳಿದರೂ ಅದಕ್ಕೆ ವ್ಯಾಪಕ ಪ್ರಚಾರ ಸಿಕ್ಕಿತು. ಕೃಷಿ ಸಚಿವ ಚಲುವರಾಯಸ್ವಾಮಿ ವಿಚಾರದಲ್ಲೂ ಇದೆ ಆಗಿದೆ. ನಾವು ಯಾವುದೇ ಪತ್ರ ಬರೆದಿಲ್ಲ, ಅದು ನಕಲಿ ಅಂತ ಅಧಿಕಾರಿಗಳೇ ಹೇಳುತ್ತಿದ್ದಾರೆ. ಒಂದು ವೇಳೆ ಅಧಿಕಾರಿಗಳಿಗೆ ತೊಂದರೆ ಆಗಿದ್ದರೆ. ನೇರವಾಗಿ ಲೋಕಾಯುಕ್ತರಿಗೆ ದೂರು ನೀಡಬಹುದು ಎಂದು ಕೃಷ್ಣಭೈರೇಗೌಡ ಸಲಹೆ ನೀಡಿದರು.

ಇದೊಂದು ರಾಜಕೀಯ ಆಟವಾಗಿದ್ದು, ನಾವು ಕೂಡ ರಾಜಕೀಯವಾಗಿಯೇ ಇಂತಹ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತೇವೆ. ವಿರೋಧ ಪಕ್ಷಗಳು ಹಿಟ್ ಅಂಡ್ ರನ್ ಹೇಳಿಕೆಗಳನ್ನು ನೀಡುತ್ತಿವೆಯೇ ಹೊರತು ಅದರಲ್ಲಿ ಯಾವುದೇ ತಿರುಳಿಲ್ಲ. ಕೊಟ್ಟ ಮಾತನ್ನು ಉಳಿಸಿಕೊಂಡಿರುವ ಕಾರಣ ಸರ್ಕಾರದ ಜನಪ್ರಿಯತೆ ಸಹಿಸಲು ಸಾಧ್ಯವಾಗದೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ವಿರೋಧ ಪಕ್ಷಗಳಿಗೆ ಕುಟುಕಿದರು.

ಕರ್ನಾಟಕದಂತೆ ಭಾರತದಲ್ಲೂ ಬದಲಾವಣೆಯ ಗಾಳಿ ಬೀಸುತ್ತಿದೆ. ವಿರೋಧ ಪಕ್ಷಗಳ ಇಂಡಿಯಾ ಒಕ್ಕೂಟ ಪ್ರಬಲವಾಗುತ್ತಿದೆ ಎಂದು ಕೃಷ್ಣಭೈರೇಗೌಡ ಹೇಳಿದರು.

ಬೆಂಗಳೂರು ಮಾದರಿ ಮೈಸೂರು ನಗರಕ್ಕೂ ನಾಲ್ವರು ತಹಸೀಲ್ದಾರ್ ಹುದ್ದೆ ಸೃಷ್ಟಿಸಲು ಕಂದಾಯ ಸಚಿವರಲ್ಲಿ ಶಾಸಕ ಜಿ.ಟಿ.ದೇವೇಗೌಡರ ಮನವಿ



ಮೈಸೂರು, ಆ. 8– ಮೈಸೂರು ನಗರ ವ್ಯಾಪ್ತಿಯಲ್ಲಿ ಚಾಮರಾಜ, ಕೃಷ್ಣರಾಜ, ನರಸಿಂಹರಾಜ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳ ಪ್ರದೇಶಗಳಿದ್ದು, ಅವುಗಳ ನಿರ್ವಹಣೆ ಸುಗಮವಾಗುವಂತೆ ಬೆಂಗಳೂರಿನ ರೀತಿಯಲ್ಲಿ ಮೈಸೂರು ನಗರಕ್ಕೆ ನೂತನವಾಗಿ ನಾಲ್ಕು ತಹಸೀಲ್ದಾರ್ ಹುದ್ದೆಯನ್ನು ಸೃಷ್ಟಿಸುವಂತೆ ಕಂದಾಯ ಸಚಿವರಲ್ಲಿ ಶಾಸಕ ಜಿ.ಟಿ.ದೇವೇಗೌಡ ಮನವಿ ಮಾಡಿದರು.

ಅವರು ಮಂಗಳವಾರ ಮೈಸೂರಿನ ಜಲದರ್ಶಿನಿಯಲ್ಲಿ ಕಂದಾಯ ಸಚಿವ ಕೃಷ್ಣಭೈರೇಗೌಡರನ್ನು ಬೇಟಿ ನೀಡಿ, ಮೈಸೂರು ತಾಲೂಕು ತಹಸೀಲ್ದಾರ್ ವ್ಯಾಪ್ತಿಗೆ ಚಾಮರಾಜ, ಕೃಷ್ಣರಾಜ, ನರಸಿಂಹರಾಜ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳ ಜೊತೆಗೆ ವರುಣಾ ವಿಧಾನಸಭಾ ಕ್ಷೇತ್ರದ ವರುಣಾ ಹೋಬಳಿ ಸಹ ಬರಲಿದ್ದು, ಕಾರ್ಯಭಾರ ಹೆಚ್ಚಿಗೆ ಇರುವುದರಿಂದ ತಹಸೀಲ್ದಾರ್‌ಗೆ ಕೆಲಸ ನಿರ್ವಹಿಸಲು ಕಷ್ಟವಾಗುತ್ತಿದೆ. ಇದರಿಂದ ರೈತರ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸಲು ಸಾಧ್ಯವಾಗುತ್ತಿಲ್ಲ. ತಹಸೀಲ್ದಾರ್‌ಗೆ ಮೈಸೂರು ನಗರದ ಜಮೀನುಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಪ್ರಕರಣಗಳಿದ್ದು, ವಾರಕ್ಕೆ ಮೂರು ದಿನ ಹೈಕೋರ್ಟ್‌ಗೆ ಹೋಗುತ್ತಾರೆ. ಇದರಿಂದ ತಾಲೂಕಿನ ರೈತರಿಗೆ ಕೆಲಸ ಕಾರ್ಯಗಳು ಆಗದೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಮೈಸೂರು ನಗರದ ನಾಲ್ಕು ಭಾಗಗಳಿಗೆ ತಲಾ ಒಬ್ಬರಂತೆ ಹೊಸ ತಹಶೀಲ್ದಾರ್ ಹುದ್ದೆಯನ್ನು ಸೃಷ್ಟಿಸುವಂತೆ ಕೋರಿದರು.

ಸಕ್ರಮಕ್ಕೆ ಆಗ್ರಹ: ಮೈಸೂರು ತಾಲೂಕಿನಲ್ಲಿ ರೈತರು ನೂರಾರು ವರ್ಷಗಳಿಂದ ಜಮೀನುಗಳನ್ನು ● 8ನೇ ಪುಟಕ್ಕೆ



ವರಿಷ್ಠರು 20 ಕ್ಷೇತ್ರ ಗೆಲ್ಲುವ ಟಾರ್ಗೆಟ್ ಕೊಟ್ಟವ್ರೇ... ಒಗ್ಗಟ್ಟಿಂದ ಹೋರಾಡಿ ಅದನ್ನ ಮುಟ್ಟೋಣ...

● ಎರಡನೇ ದಿನವೂ ಸಚಿವರು, ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿತೋಪದೇಶ ● ನಿಮ್ಮಲ್ಲಿನ ಆಂತರಿಕ ಸಮಸ್ಯೆ, ಭಿನ್ನಾಭಿಪ್ರಾಯ ಸದ್ಯಕ್ಕೆ ಬದಿಗಿಡಿ ● ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಗೆ ಇದೇ ಫಲಿತಾಂಶ ನೀಡಬೇಕು ● ಮೊದಲು ನಮ್ಮನ್ನು ನಂಬಿ ಅಧಿಕಾರ ಕೊಟ್ಟ ಜನರಿಗೆ 'ಗ್ಯಾರಂಟಿ' ಕೊಡನಾ...



ಬೆಂಗಳೂರು, ಆ.8(ಕೆಎಂಶಿ)– ಆಂತರಿಕ ಸಮಸ್ಯೆ ಮತ್ತು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಲೋಕಸಭಾ ಚುನಾವಣೆಗೆ ಸಜ್ಜಾಗಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪಕ್ಷದ ಸಚಿವರು ಹಾಗೂ ಶಾಸಕರಿಗೆ ಹಿತೋಪದೇಶ ಮಾಡಿದ್ದಾರೆ.

ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ನಾವು 28 ಕ್ಷೇತ್ರಗಳ ಪೈಕಿ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲ್ಲಬೇಕು. ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸಿದರೆ ಗುರಿ ತಲುಪುತ್ತೇವೆ. ವಿಧಾನಸಭೆ ಚುನಾವಣೆಯಲ್ಲಿ ಸೋತ ಬಿಜೆಪಿ ಚೇತರಿಸಿಕೊಳ್ಳಲು ಇನ್ನೂ ಚಡಪಡಿಸುತ್ತಿದೆ. ಆ ಪಕ್ಷದಲ್ಲಿ ಸದ್ಯಕ್ಕೆ ನಾಯಕತ್ವ ಇಲ್ಲದಂತಾಗಿದೆ. ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಅನೇಕ ಬದಲಾವಣೆಗಳಾಗಲಿವೆ. ನಾವು ಈಗ ರಾಜಕೀಯವಾಗಿ ನಮ್ಮದೇ ಅಸ್ತ್ರ, ತಂತ್ರವನ್ನು ಪ್ರಯೋಗ ಮಾಡಬೇಕು. ಪ್ರತಿಪಕ್ಷಗಳಿಗೆ ಲೋಕಸಭೆ ಚುನಾವಣೆಯಲ್ಲೂ ಇದೇ ಫಲಿತಾಂಶ ದೊರೆಯುವಂತಾಗಬೇಕು. ನಿಮ್ಮ ಆಂತರಿಕ ಸಮಸ್ಯೆಗಳೇನೇ ಇದ್ದರೂ ಬದಿಗಿರಿಸಿ ನಿಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಸೂಕ್ತ ಮತ್ತು ಸಮರ್ಥ ಅಭ್ಯರ್ಥಿಯನ್ನು ಗುರುತಿಸಿ ಪಕ್ಷದ ರಾಜ್ಯ ಘಟಕಕ್ಕೆ ಶಿಫಾರಸ್ಸು ಮಾಡಿ ಎಂದಿದ್ದಾರೆ. ವರಿಷ್ಠರು ನಮಗೆ ಲೋಕಸಭಾ ಚುನಾವಣೆಗೆ ಗುರಿ ನಿಗದಿಪಡಿಸಿದ್ದು, ಆ ಗುರಿ ಮುಟ್ಟಲೇಬೇಕು. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಪ್ರತಿಪಕ್ಷಗಳ ವಿರುದ್ಧ ಒಗ್ಗಟ್ಟಿನಿಂದ ಹೋರಾಡಿ ಅಧಿಕಾರಕ್ಕೆ ಬಂದೆವೋ ಅದೇ ಒಗ್ಗಟ್ಟನ್ನು ಈಗಲೂ ಮುಂದುವರೆಸಿಕೊಂಡು ಹೋಗಬೇಕು ಎಂದಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಎರಡನೇ ದಿನವಾದ ಇಂದು ಕೂಡ ಕೆಲವು ಜಿಲ್ಲೆಗಳ ಪಕ್ಷದ ಶಾಸಕರು ಮತ್ತು ಸಚಿವರೊಂದಿಗೆ ಸಭೆ ನಡೆಸಿ, ಅವರ ದೂರು–ದುಮ್ಮಾನಗಳನ್ನು ಆಲಿಸಿದ ನಂತರ ಚುನಾವಣೆಯ ಮಂತ್ರ ಜಪಿಸಿದ ಮುಖ್ಯಮಂತ್ರಿಗಳು, ಗ್ಯಾರಂಟಿ ಯೋಜನೆ ● 3ನೇ ಪುಟಕ್ಕೆ

ಚಲುವರಾಯಸ್ವಾಮಿ ವಿರುದ್ಧ ಲಂಚಕ್ಕೆ ಬೇಡಿಕೆ ಆರೋಪ ಸಿಐಡಿ ತನಿಖೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ

ಬೆಂಗಳೂರು, ಆ.8(ಕೆಎಂಶಿ)–ಮಂಡ್ಯ ಜಿಲ್ಲೆ ಕೃಷಿ ಅಧಿಕಾರಿಗಳು ಇಲಾಖಾ ಸಚಿವರ ವಿರುದ್ಧವೇ ಬರೆದಿದ್ದಾರೆನ್ನಲಾದ ಪತ್ರದ ಕುರಿತು ಮುಖ್ಯಮಂತ್ರಿ ಅವರು ಸಿಐಡಿ ತನಿಖೆ ನಡೆಸಲು ಆದೇಶ ಮಾಡಿದ್ದಾರೆ.

ಕೃಷಿ ಸಚಿವ ಚಲುವರಾಯಸ್ವಾಮಿ ವರ್ಗಾವರ್ಗಿಗೆ ಹಿರಿಯ ಅಧಿಕಾರಿಗಳ ಮೂಲಕ 6ರಿಂದ 8 ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದಾರೆಂದು ಮಂಡ್ಯ ಜಿಲ್ಲೆಯ 7 ಕೃಷಿ ಅಧಿಕಾರಿಗಳು ರಾಜ್ಯಪಾಲರಿಗೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ರಾಜಭವನ ಮುಖ್ಯ ಕಾರ್ಯದರ್ಶಿ ಅವರಿಗೆ ಆದೇಶ ಮಾಡಿತ್ತು ರಾಜಭವನದ ಆದೇಶದ ಮೇರೆಗೆ ಮುಖ್ಯಮಂತ್ರಿ ಅವರು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿ ಪ್ರಕರಣವನ್ನು ಇಲಾಖಾ ಮಟ್ಟದಲ್ಲಿ ತನಿಖೆ ನಡೆಸುವ ಬದಲು ಸಿಐಡಿ ತನಿಖೆಗೆ ಆದೇಶ ಮಾಡಿದ್ದಾರೆ. ಅಧಿಕಾರಿಗಳ ಪತ್ರ ರಾಜಕೀಯ ದುರುದ್ದೇಶದಿಂದ ಕೂಡಿದೆ. ಇದರಲ್ಲಿ ನನ್ನ ಪಾತ್ರವಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ ನೀಡಿದ್ದಲ್ಲದೆ, ಉನ್ನತ ಮಟ್ಟದ ತನಿಖೆ ನಡೆಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ● 3ನೇ ಪುಟಕ್ಕೆ



ದಸರಾ ಗಜಪಡೆಯ ಮೊದಲ ತಂಡದ ಪಟ್ಟಿ ಬಿಡುಗಡೆ

● ಸೆ.1ರಂದು ಒಂಭತ್ತು ಆನೆ ಮೈಸೂರಿನತ್ತ ● ಎರಡನೇ ತಂಡದಲ್ಲಿ ಐದು ಆನೆ ಕರೆತರಲು ತೀರ್ಮಾನ ● ಮೊದಲ ತಂಡದಲ್ಲಿ ಹೊಸ ಆನೆಗಳಿಗಿಲ್ಲ ಅವಕಾಶ

ಮೈಸೂರು,ಆ.8(ಎಂಟಿವೈ)– ನಾಡಹಬ್ಬದ ದಸರಾದಲ್ಲಿ ಪಾಲ್ಗೊಳ್ಳುವ ಗಜಪಡೆಯ ಮೊದಲ ತಂಡದ ಒಂಭತ್ತು ಆನೆಗಳ ಪಟ್ಟಿ ಪ್ರಕಟಗೊಂಡಿದ್ದು, ಸೆ.1ರಂದು ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ 7 ಗಂಡಾನೆ ಹಾಗೂ ಎರಡು ಹೆಣ್ಣಾನೆ ಮೈಸೂರಿಗೆ ಆಗಮಿಸಲಿವೆ. ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗಜಪಡೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಹೆಣ್ಣಾನೆಗಳ ಪ್ರೆಗ್ನೆನ್ಸಿ ಟೆಸ್ಟ್ ವರದಿ ಬಾರದ ಕಾರಣ ಗಜಪಡೆ ಆಯ್ಕೆ ವಿಳಂಬವಾಗಿತ್ತು. ಸೋಮವಾರ ವರದಿ ಬಂದ ಹಿನ್ನೆಲೆಯಲ್ಲಿ ಮೊದಲ ತಂಡದಲ್ಲಿ 9 ಆನೆಗಳ ಪಟ್ಟಿಯನ್ನು ಬಿಡುಗಡೆಗೊಳಿಸಲಾಗಿದೆ. ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಹುಲಿ ಯೋಜನೆ) ಜಿ.ವಿ. ರಂಗರಾವ್ ಅಧ್ಯಕ್ಷತೆಯಲ್ಲಿ ನಡೆದ ಅರಣ್ಯಾಧಿಕಾರಿಗಳ ಸಭೆಯಲ್ಲಿ ಗುರುತಿಸಲ್ಪಟ್ಟ ಆನೆಗಳು ಹಾಗೂ ಈ ಹಿಂದೆ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಅನುಭವವಿರುವ ಆನೆಗಳ ಮಾಹಿತಿ ಪರಿಶೀಲಿಸಿದ ಬಳಿಕ 9 ಆನೆಗಳನ್ನು ಸೆ.1 ರಂದು ಮೊದಲ ತಂಡದಲ್ಲಿ ವಿವಿಧ ಕ್ಯಾಂಪ್‌ಗಳಿಂದ ಮೈಸೂರಿಗೆ ಕರೆತರಲು ನಿರ್ಧರಿಸಲಾಯಿತು.

ಮೊದಲ ತಂಡದಲ್ಲಿ ಬರುವ ಆನೆಗಳು: ಈ ಸಾಲಿನ ದಸರಾ ● 3ನೇ ಪುಟಕ್ಕೆ

ಮೊದಲ ತಂಡದ ಗಜಪಡೆ

- ಅಭಿಮನ್ಯು
- ಭೀಮ
- ಮಹೇಂದ್ರ
- ಅರ್ಜುನ
- ಧನಂಜಯ
- ಗೋಪಿ
- ಪಾರ್ಥಸಾರಥಿ
- ವಿಜಯ
- ವರಲಕ್ಷ್ಮಿ



ಪಕ್ಷ ಸೂಚಿಸಿದರೆ ಲೋಕಸಭೆಗೆ ಸ್ಪರ್ಧೆ



ಮೈಸೂರು, ಆ.8– ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರ, ಚುನಾವಣೆಗೆ ಯಾರು ಅಭ್ಯರ್ಥಿಯಾಗಬೇಕು ಎಂಬುದನ್ನು ಪಕ್ಷದ ವರಿಷ್ಠರು ನಿರ್ಧಾರ ಮಾಡುತ್ತಾರೆ. ಪಕ್ಷ ಸೂಚಿಸಿದರೆ ನಾನೇ ಅಭ್ಯರ್ಥಿಯಾಗುತ್ತೇನೆ ಎಂದು ಮೈಸೂರಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರು ಹೇಳಿದರು. ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಲೋಕಸಭೆಗೆ 7 ರಿಂದ 8 ತಿಂಗಳು ಬಾಕಿ ಇದೆ. ಇದಕ್ಕಾಗಿ ಪಕ್ಷವನ್ನು ಸಜ್ಜುಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಕುಮಾರಸ್ವಾಮಿ ಮಾಡಿದ ಕೆಲಸಗಳು ಹಾಗೂ ಪಂಚರತ್ನ ಯೋಜನೆಯನ್ನು ಜನರಿಗೆ ತಿಳಿಸುವ ಮೂಲಕ ಪಕ್ಷ ಸಂಘಟನೆ ಮಾಡುತ್ತೇವೆ ಎಂದರು.

ರಾಜ್ಯದ ಜನರು ಬುದ್ಧಿವಂತರು, ಅಧಿಕಾರವನ್ನು ಕಾಂಗ್ರೆಸ್‌ಗೆ ಕೊಟ್ಟಿದ್ದಾರೆ. ದೇಶದ ಅಧಿಕಾರವನ್ನು ಮುಂದಿನ ಚುನಾವಣೆಯಲ್ಲಿ ಸಮರ್ಥ ನಾಯಕರ ಕೈಗೆ ಕೊಡಲಿದ್ದಾರೆ. ಮೈಸೂರು–ಕೊಡಗು ಲೋಕಸಭೆ ಕ್ಷೇತ್ರದ ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ವರಿಷ್ಠರು ನಿರ್ಧರಿಸುತ್ತಾರೆ ಎಂದು ತಿಳಿಸಿದರು.

ಜೆಡಿಎಸ್ ಪಕ್ಷಕ್ಕೆ ಸೋಲು, ಗೆಲುವು ಹೊಸದಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲಾಗಿದೆ. ಮುಂದಿನ ಲೋಕಸಭಾ ಚುನಾವಣೆ ಹಾಗೂ ಇತರ ಚುನಾವಣೆಗಳಿಗೆ ರಾಜ್ಯ ಪ್ರವಾಸ ಮಾಡಿ, ಪಕ್ಷ ಕಟ್ಟುತ್ತೇವೆ. ಇದಕ್ಕಾಗಿ ರಾಷ್ಟ್ರೀಯ ಅಧ್ಯಕ್ಷರು 20 ಸದಸ್ಯರ ಕೋರ್ ಕಮಿಟಿ ರಚಿಸಿದ್ದು, ನನ್ನನ್ನು ಕಮಿಟಿಗೆ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಇದಕ್ಕಾಗಿ ದೇವೇಗೌಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನೊಂದಿಗೆ ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ್, ವೈಎಸ್.ವಿ.ದತ್ತ ಇರುತ್ತಾರೆ. ಆಗಸ್ಟ್ 15ರಂದು ದೇವೇಗೌಡರು, ಕುಮಾರಸ್ವಾಮಿ ಹಾಗೂ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಸದಸ್ಯರು ಸಭೆ ಸೇರಿ, ಪಕ್ಷ ಸಂಘಟನೆಯ ರೂಪುರೇಷೆಗಳನ್ನು ತಯಾರು ಮಾಡಲಾಗುತ್ತದೆ ಎಂದು ಜಿ.ಟಿ.ದೇವೇಗೌಡರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೇವಲ ಐದೇ ದಿನದಲ್ಲಿ ತೀರ್ಪು

ದೇಶದ ಎರಡನೇ ಅತೀ ವೇಗದ ತೀರ್ಪು ನೀಡಿದ ಮೈಸೂರು ಪೋಕ್ಸೋ ತ್ವರಿತಗತಿ ನ್ಯಾಯಾಲಯ

ಮೈಸೂರು, ಆ.8(ಬಿಸಿಟಿ/ಪಿಎಂ)– ಅಪ್ರಾಪ್ತರ ಮೇಲಿನ ಅತ್ಯಾಚಾರ ಪ್ರಕರಣಗಳ ವಿಚಾರಣೆಗಾಗಿ ಮೈಸೂರಿನಲ್ಲಿ ಸ್ಥಾಪಿಸಲಾದ ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ವಿಶೇಷ ತ್ವರಿತಗತಿ ನ್ಯಾಯಾಲಯವು ಭಾರತದಲ್ಲೇ ಎರಡನೇ ತ್ವರಿತ ತೀರ್ಪು ನೀಡಿದ್ದು, ಇದು ಕರ್ನಾಟಕದ ಮೊಟ್ಟ ಮೊದಲ ಅತೀ ವೇಗವಾಗಿ ಹೊರಬಂದ ತೀರ್ಪು ಎಂಬ ಹೆಗ್ಗಳಿಕೆಗೆ ಭಾಜನವಾಗಿದೆ.

ಆರೋಪ, ಸಾಕ್ಷಿಗಳ ವಿಚಾರಣೆ, ವಾದ, ಪ್ರತಿವಾದ ಮತ್ತು ಆರೋಪಿಯ ಖುಲಾಸೆ ಕೇವಲ ಐದೇ ದಿನದಲ್ಲಿ ಆಗಿದೆ. 2021ರಲ್ಲಿ ಬಿಹಾರದ ಅರಾರಿಯಾ ಪೋಕ್ಸೋ ನ್ಯಾಯಾಲಯವು ಎಂಟು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದ ವ್ಯಕ್ತಿಯೊಬ್ಬನಿಗೆ ಕೇವಲ ಒಂದೇ ದಿನದಲ್ಲಿ ವಿಚಾರಣೆ ನಡೆಸಿ, ಜೀವಾವಧಿ ಶಿಕ್ಷೆ ವಿಧಿಸಿತ್ತು.

ಇದೀಗ ಮೈಸೂರಿನ ಪೋಕ್ಸೋ ತ್ವರಿತ ನ್ಯಾಯಾಲಯ ಕೇವಲ ಐದು ದಿನಗಳಲ್ಲಿ ವಿಚಾರಣೆ ಪ್ರಕ್ರಿಯೆ ಪೂರ್ಣಗೊಳಿಸಿ, ತೀರ್ಪು ಸಹ ನೀಡಿದೆ. ಇದೇ ಆ.1ರಂದು ಪ್ರಕರಣ ಸಂಬಂಧ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು. ಅಂದೇ ವಿಚಾರಣೆ ಪ್ರಕ್ರಿಯೆಗೂ ಚಾಲನೆ ನೀಡಲಾಯಿತು. ಆ.2 ಮತ್ತು 3ರಂದು ಸಾಕ್ಷಿಗಳನ್ನು ಪರೀಕ್ಷೆಗೆ ಒಳಪಡಿಸಲಾಯಿತು. ಆ.4ರಂದು ವಾದ ಮತ್ತು ಪ್ರತಿವಾದ ನಡೆಸಲಾಯಿತು. ಆ.5ರಂದು ಸದರಿ ತ್ವರಿತಗತಿ ನ್ಯಾಯಾಲಯದ ನ್ಯಾಯಾಧೀಶ ಶ್ಯಾಮ ಕಾವ್ರೋಜ್ ತೀರ್ಪು ನೀಡಿದರು.

ವಿಜಯನಗರ ಪೊಲೀಸರು 17 ವರ್ಷ, 11 ತಿಂಗಳ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ 23 ವರ್ಷದ ಯುವಕನ (ಪೋಕ್ಸೋ ಪ್ರಕರಣವಾದ ಹಿನ್ನೆಲೆಯಲ್ಲಿ ಆರೋಪಿ ಹಾಗೂ ಸಂತ್ರಸ್ತೆ ಹೆಸರಿನಲ್ಲಿ ಗೌಪ್ಯತೆ ಕಾಯ್ದುಕೊಳ್ಳಲಾಗಿದೆ) ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ತನ್ನ ಮೇಲೆ ಕೆಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಯು ತನ್ನ ಹಳ್ಳಿಯಲ್ಲಿ ಮದುವೆಯಾಗಿ ಮೈಸೂರಿಗೆ ಕರೆ ತಂದಿದ್ದಾನೆ ಎಂದು ಈ ಪ್ರಕರಣದ ಸಂತ್ರಸ್ತೆಯು ಪೊಲೀಸರಲ್ಲಿ ಹೇಳಿಕೆ ನೀಡಿದ್ದಳು.

ಮದುವೆ ನಂತರ ಇಬ್ಬರು ಒಟ್ಟಾಗಿ ದಾಂಪತ್ಯ ಜೀವನ ನಡೆಸುತ್ತಿದ್ದೆವು. ಈ ನಡುವೆ ಇಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು ಎಂದು ಸಂತ್ರಸ್ತೆ ಪೊಲೀಸರಿಗೆ ಹೇಳಿಕೆಯಲ್ಲಿ ತಿಳಿಸಿದ್ದಳು. ಆರೋಪಿಯು ಮನೆಯಲ್ಲಿ ಇಲ್ಲದೇ ಇದ್ದಾಗ ಈಕೆ ಆತನನ್ನು ಹೆದರಿಸಲು ಹೇರ್‌ಡೈ ಸೇವಿಸಿದ್ದಳು. ಇದರಿಂದ ಕೆಲವೇ ನಿಮಿಷಗಳಲ್ಲಿ ಆಕೆಗೆ ಹೊಟ್ಟೆ ನೋವು ಕಾಣಿಸಿಕೊಂಡಿತು. ನೋವಿನಿಂದ ನರಳುತ್ತಿದ್ದ ಆಕೆಯನ್ನು ಆರೋಪಿಯು ಆಸ್ಪತ್ರೆಗೆ ದಾಖಲಿಸಿದ್ದ. ಆಕೆ ಅಪ್ರಾಪ್ತೆ ಆದ ಹಿನ್ನೆಲೆಯಲ್ಲಿ ಪೊಲೀಸರು, ಆಸ್ಪತ್ರೆಯಲ್ಲಿ ಬಾಲಕಿಯ ಹೇಳಿಕೆ ದಾಖಲಿಸಿಕೊಂಡಿದ್ದರು. ಬಳಿಕ ಎಫ್‌ಐಆರ್ ಮಾಡಿ, ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಪ್ರಕರಣದ ಸತ್ಯಾಸತ್ಯತೆ ಮತ್ತು ಸಂದರ್ಭಗಳನ್ನು ಪರಿಗಣಿಸಿ, ಸಿಆರ್.ಪಿಸಿ (ಸಂತ್ರಸ್ತರ ಪರಿಹಾರ) ಸೆಕ್ಷನ್ 357–ಎ(3) ಅಡಿಯಲ್ಲಿ ಯಾವುದೇ ಆದೇಶ ಹೊರಡಿಸುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ, ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಯನ್ನು ಕೂಡಲೇ ಬಿಡುಗಡೆ ಮಾಡುವಂತೆ ತೀರ್ಪು ನೀಡಿತು.

ಸಿಆರ್.ಪಿಸಿ (ಜಾಮೀನು) ಯು/ಸೆಕ್ಷನ್ 437–ಎ ಅಡಿಯಲ್ಲಿ ಆರೋಪಿಯು, 50 ಸಾವಿರ ರೂಗಳ ವೈಯಕ್ತಿಕ ಬಾಂಡ್ ಸಲ್ಲಿಸಬೇಕೆಂದು ಆದೇಶಿಸಿದ ನ್ಯಾಯಾಧೀಶರು, ಆರೋಪಿಯನ್ನು ಖುಲಾಸೆಗೊಳಿಸಿದರು. ಆರೋಪಿ ಪರವಾಗಿ ಮೈಸೂರಿನ ಮುಖ್ಯ ಕಾನೂನು ನೆರವು ರಕ್ಷಣಾ ವಕೀಲ ಎಂ.ಎಸ್.ನವೀನ್ ಮಾಚಂಗಡ ವಾದ ಮಂಡಿಸಿದರು.

ಬೆಂಗಳೂರು ತಲುಪಿದ ಸ್ಪಂದನಾ ಪಾರ್ಥಿವ ಶರೀರ; ಇಂದು ಅಂತ್ಯಕ್ರಿಯೆ



ಬೆಂಗಳೂರು, ಆ. 8 – ಬ್ಯಾಂಕಾಕ್‌ನಲ್ಲಿ ಹೃದಯಾಘಾತದಿಂದ ನಿಧನರಾದ ಸ್ಪಂದನಾ ವಿಜಯ್ ರಾಘವೇಂದ್ರ ಪಾರ್ಥಿವ ಶರೀರ ಮಂಗಳವಾರ ಮಧ್ಯರಾತ್ರಿ ಬೆಂಗಳೂರು ತಲುಪಿದ್ದು, ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ.

ಕನ್ನಡದ ಖ್ಯಾತ ನಟ ವಿಜಯ್ ರಾಘವೇಂದ್ರ ಪತ್ನಿ ಸ್ಪಂದನಾ ಭಾನುವಾರ ಮಧ್ಯರಾತ್ರಿ ಬ್ಯಾಂಕಾಕ್‌ನಲ್ಲಿ ನಿದ್ರೆಯಲ್ಲೇ ಹಠಾತ್ ಹೃದಯಾಘಾತಕ್ಕೊಳಗಾಗಿ ಮೃತಪಟ್ಟಿದ್ದರು. ಸೋಮವಾರ ಮತ್ತು ಮಂಗಳವಾರ ವೈದ್ಯಕೀಯ ವಿಧಿ ವಿಧಾನ (ಪೋಸ್ಟ್ ಮಾರ್ಟಂ) ಹಾಗೂ ಕಾನೂನು ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ವಿಮಾನದ ಮೂಲಕ ಬೆಂಗಳೂರಿಗೆ ತರಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಯಿತು. ದಾಖಲೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಮೃತದೇಹವನ್ನು ಪರೀಕ್ಷೆಗೊಳಪಡಿಸಿ ವಿಮಾನದಲ್ಲಿ ಇರಿಸಲಾಯಿತು. ರಾತ್ರಿ ಇದೇ ವಿಮಾನದಲ್ಲಿ ಪತಿ ವಿಜಯ್ ರಾಘವೇಂದ್ರ ಹಾಗೂ ಸ್ಪಂದನಾ ಸಂಬಂಧಿಕರೂ ಆಗಮಿಸಿದರು. ಬೆಂಗಳೂರಿಗೆ ಮಧ್ಯರಾತ್ರಿ ಆಗಮಿಸಿದ ನಂತರ ಕುಟುಂಬ ಸದಸ್ಯರು ಕಾರ್ಗೋ ವಿಭಾಗದಲ್ಲಿ ಮೃತದೇಹವನ್ನು ಆಂಬ್ಯುಲೆನ್ಸ್ ಮೂಲಕ ಮಲ್ಲೇಶ್ವರಂನಲ್ಲಿರುವ ಸ್ಪಂದನಾ ತಂದೆ ಬಿ.ಕೆ. ಶಿವರಾಮ್ ನಿವಾಸಕ್ಕೆ ಕೊಂಡೊಯ್ಯಲಾಯಿತು. ವಿಜಯ್ ರಾಘವೇಂದ್ರ ಸಹೋದರ ಶ್ರೀಮುರಳಿ, ಸ್ಪಂದನಾ ಚಿಕ್ಕಪ್ಪ ಬಿ.ಕೆ. ಹರಿಪ್ರಸಾದ್, ಶಾಸಕ ಮುನಿರತ್ನ, ಸ್ನೇಹಿತರು ಹಾಗೂ ಕುಟುಂಬ ಸದಸ್ಯರು ಇದ್ದರು.

ಬುಧವಾರ ಮಧ್ಯಾಹ್ನ 2 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ನಂತರ ಬೆಂಗಳೂರು ಶ್ರೀರಾಂಪುರದ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಕೆ.ಆರ್.ಆಸ್ಪತ್ರೆ ಒಪಿಡಿ ನಿರ್ಮಾಣಕ್ಕೆ ಅನುದಾನ: ಕೇಂದ್ರ ಸಚಿವರಿಗೆ ಸಂಸದ ಪ್ರತಾಪ್ ಸಿಂಹ ಮನವಿ



ಮೈಸೂರು, ಆ.8–ಸಾಂಸ್ಕೃತಿಕ ನಗರಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಹೊಸ ಹೊರ ರೋಗಿಗಳ ವಿಭಾಗ (ಒಪಿಡಿ ಬ್ಲಾಕ್) ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಬೇಕೆಂದು ಕೇಂದ್ರ ಆರೋಗ್ಯ ಸಚಿವರಾದ ಡಾ. ಮನ್ಸುಖ್ ಮಾಂಡವಿಯಾ ಅವರಿಗೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ಆರೋಗ್ಯ ಸಚಿವರನ್ನು ಭೇಟಿ ಮಾಡಿದ ಸಂಸದರು ಮೈಸೂರು, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಕೆಲವು ಯೋಜನೆಗಳ ಸಂಬಂಧವೂ ಮನವಿ ಸಲ್ಲಿಸಿದ್ದಾರೆ. ಮೈಸೂರು ವೈದ್ಯಕೀಯ ಕಾಲೇಜು ವ್ಯಾಪ್ತಿಗೆ ಒಳಪಡುವ ಕೆಆರ್ ಆಸ್ಪತ್ರೆಗೆ ಹೊಸ ಒಪಿಡಿ ಬ್ಲಾಕ್ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಬೇಕೆಂದು ಇದೇ ಸಂದರ್ಭದಲ್ಲಿ ಮನವಿ ಮಾಡಿದರು. ಅತ್ಯಂತ ಪ್ರತಿಷ್ಠಿತ ಹಾಗೂ ಐತಿಹಾಸಿಕ ಕೆ.ಆರ್. ಆಸ್ಪತ್ರೆಗೆ ಮುಂದಿನ ವರ್ಷ ಶತಮಾನೋತ್ಸವ ಸಂಭ್ರಮ. 2024ರಲ್ಲಿ ಆಯೋಜಿಸಲು ಉದ್ದೇಶಿಸಲಾಗಿರುವ ಶತಮಾನೋತ್ಸವ ಸಮಾರಂಭಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಅನುದಾನ ಬಿಡುಗಡೆ ಮಾಡಬೇಕೆಂದು ಸಂಸದರು ಮನವಿ ಮಾಡಿದ್ದಾರೆ,.

ಕೊಡಗು ಆಸ್ಪತ್ರೆಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ: ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವನ್ನು ಮಂಜೂರು ಮಾಡಬೇಕೆಂದು ಇದೇ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ ಮನವಿ ಸಲ್ಲಿಸಿದ್ದಾರೆ.

ಜಿಲ್ಲೆಯಲ್ಲಿ ಈ ಆಸ್ಪತ್ರೆಗೆ ಸುತ್ತಮುತ್ತಲ ಗ್ರಾಮಗಳ ಹಲವಾರು ಮಂದಿ ಇಲ್ಲಿಗೆ ಆಗಮಿಸುತ್ತಾರೆ. ಇಲ್ಲಿ ಯಾವುದೇ ಖಾಸಗಿ ಆಸ್ಪತ್ರೆಯೂ ಇಲ್ಲ. ಈ ನಿಟ್ಟಿನಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಮೆಷಿನ್ ಅಳವಡಿಸಲು ಅನುದಾನ ನೀಡಬೇಕೆಂದು ಕೋರಿದ್ದಾರೆ.

ಆಸ್ಪತ್ರೆಯ ಒಂದು ಭಾಗವನ್ನು ಕೋವಿಡ್ ಸಂದರ್ಭದಲ್ಲಿ ಕೋವಿಡ್ ವಿಭಾಗವಾಗಿ ಅಭಿವೃದ್ಧಿಪಡಿಸಲಾಗಿತ್ತು. ಆಸ್ಪತ್ರೆಯ ಅಭಿವೃದ್ಧಿಗೂ ಆದ್ಯತೆ ನೀಡಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್‌ನಿಂದ ಡಾ.ಮರೀಗೌಡರ ಜನ್ಮ ಜಯಂತಿ



ಮೈಸೂರು, ಆ.8(ಎಸ್‌ಬಿಡಿ)– ಮೈಸೂರಿನ ತೋಟಗಾರಿಕೆ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಪಿತಾಮಹ ಡಾ.ಹೆಚ್.ಎಂ.ಮರೀಗೌಡರ 107ನೇ ಜನ್ಮ ಜಯಂತಿ ಆಚರಿಸಲಾಯಿತು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಬಳಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ನಮ್ಮೊಡನೆ ಭೌತಿಕವಾಗಿ ಇಲ್ಲವಾದರೂ ತಮ್ಮ ಸಾಧನೆಗಳ ಮೂಲಕ ಮರೀಗೌಡರು ಸದಾ ಜೀವಂತವಾಗಿರುತ್ತಾರೆ. ತೋಟಗಾರಿಕೆ ಪಿತಾಮಹರಾದ ಇವರು, ದವಸ ಧಾನ್ಯಕ್ಕೆ ಸೀಮಿತವಾಗಿದ್ದ ರೈತಾಪಿ ವರ್ಗಕ್ಕೆ ಫಲಪುಷ್ಪ ಬೆಳೆಯ ಮಾರ್ಗ ತೋರಿಸಿ, ಅವರ ಆರ್ಥಿಕ ಸ್ಥಿತಿ ಸುಧಾರಣೆಗೆ ನೆರವಾದರು. ದೇಶದ 'ತೋಟಗಾರಿಕೆ ಬೀಡು' ಖ್ಯಾತಿಗೆ ಕರ್ನಾಟಕ ಪಾತ್ರವಾಗುವುದಕ್ಕೂ ಇವರೇ ಕಾರಣ ಎಂದು ಸ್ಮರಿಸಿಕೊಂಡರು. ಬನ್ನೂರು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಮರೀಗೌಡರು, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿ, ಲಖನೌ ವಿವಿಯಲ್ಲಿ ಸ್ನಾತಕೋತ್ತರ ಪದವಿ ಪೂರೈಸಿ, ಅಮೆರಿಕಾದಲ್ಲಿ ಡಾಕ್ಟರೇಟ್ ಪಡೆದರು. ಸ್ವಾತಂತ್ರ್ಯ ಪೂರ್ವದಲ್ಲೇ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಸಹಾಯಕ ಸೂಪರಿಂಡೆಂಟ್ ನಂತರ ಸೂಪರಿಂಡೆಂಟ್ ಕಾರ್ಯ ನಿರ್ವಹಿಸಿದರು. ನೂರು ಎಕರೆಗಳಷ್ಟಿರುವ ಕೆಂಪು ತೋಟವನ್ನು 240 ಎಕರೆಗೆ ವಿಸ್ತರಿಸಿ, ಫಲಪುಷ್ಪ ಪ್ರದರ್ಶನಗಳಿಗೆ ಮೆರಗು ನೀಡಿ, ಸಸ್ಯ ಸಂತೆಗಳನ್ನು ಸಂಘಟಿಸಿದರು. ರಾಜ್ಯದ 1,800 ಎಕರೆಯಲ್ಲಿ 394 ತೋಟಗಾರಿಕಾ ಕ್ಷೇತ್ರಗಳನ್ನು ಕಟ್ಟಿಕೊಟ್ಟರು. ಸಹಕಾರಿ ತತ್ವದ ಆಧಾರದ ಮೇಲೆ ಹಾಪ್‌ಕಾಮ್ಸ್ ಮೂಲಕ ನಿತ್ಯೋಪಯೋಗಿ ಪದಾರ್ಥಗಳ ಮಾರಾಟ ಜಾಲವನ್ನು ನಾಡಿನೆಲ್ಲೆಡೆ ವಿಸ್ತರಿಸಿದರು ಎಂದು ಬಣ್ಣಿಸಿದರು.

ತೋಟಗಾರಿಕಾ ವಲಯದಲ್ಲಿ ಮರೀಗೌಡರ ಸಾಧನೆಯನ್ನು ಕುವೆಂಪು ತಮ್ಮ ಜೀವನ ವೃತ್ತಾಂತ 'ನೆನಪಿನ ದೋಣಿ'ಯಲ್ಲಿ ಉಲ್ಲೇಖಿಸಿದ್ದಾರೆ. ಲಾಲ್‌ಬಾಗ್ ಉದ್ಯಾನವನದಲ್ಲಿ ಮರೀಗೌಡರ ಪ್ರತಿಮೆಯನ್ನು ನಿರ್ಮಿಸಿದ್ದು, ತವರು ಜಿಲ್ಲೆ ಮೈಸೂರಿನ ಹಾಪ್‌ಕಾಮ್ಸ್ ಆವರಣದಲ್ಲೂ ಪ್ರತಿಮೆ ಸಿದ್ಧವಾಗಿದೆ. ಎಲ್ಲಾ ಸಮಾಜಗಳ ಹಿತ ಚಿಂತಕರಾದ ಮರೀಗೌಡರು ಎರಡು ಅವಧಿಗೆ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸರ್ಕಾರದ ಮೇಲೆ ಒತ್ತಡ ತಂದು ಕೆಂಪೇಗೌಡ ವೈದ್ಯಕೀಯ ಕಾಲೇಜು–ಆಸ್ಪತ್ರೆ ಹಾಗೂ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಅನುಮತಿ ಪಡೆದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಒಕ್ಕಲಿಗರ ಯುವ ವೇದಿಕೆಯ ರಾಜಕುಮಾರ್, ಒಕ್ಕಲಿಗರ ಮಹಾಸಭಾದ ಬೆಟ್ಟೇಗೌಡ, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ರವಿ, ವಿಕ್ರಾಂತ್ ದೇವೇಗೌಡ, ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಹಾಪ್‌ಕಾಮ್ಸ್ ನಿರ್ದೇಶಕ ಶ್ರೀನಿವಾಸ್, ಉಮೇಶ್, ಕಾರ್ತಿಕ್ ಗೌಡ, ಅಭಿಷೇಕ್ ಗೌಡ, ಬಸವರಾಜು, ನೇಹಾ ಮತ್ತಿತರರು ಉಪಸ್ಥಿತರಿದ್ದರು.

ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಆ.8(ಪಿಎಂ)–ಈಶಾನ್ಯ ರಾಜ್ಯ ಮಣಿಪುರದಲ್ಲಿ ಶಾಂತಿ ಮರುಸ್ಥಾಪಿಸುವ ನಿಟ್ಟಿನಲ್ಲಿ ರಾಷ್ಟ್ರಪತಿಗಳ ಆಡಳಿತ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಕ್ರೈಸ್ತರ ಪ್ರಗತಿಪರ ಸಂಸ್ಥೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನಜರ್‌ಬಾದಿನ ಮಲೆ ಮಹದೇಶ್ವರ ರಸ್ತೆಯ ನಂದಿನಿ ಹಾಲಿನ ಕೇಂದ್ರದ ಬಳಿಯ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಮಣಿಪುರದಲ್ಲಿ ಅಲ್ಪಸಂಖ್ಯಾತ ಕ್ರೈಸ್ತರ ಮೇಲೆ ಹಾಗೂ ಚರ್ಚ್‌ಗಳ ಮೇಲೆ ದಾಳಿ ನಡೆಸಲಾಗಿದೆ. ಅಲ್ಪಸಂಖ್ಯಾತ ಬುಡಕಟ್ಟು ಕುಕಿ ಸಮುದಾಯದವರ ಮೇಲೆ ಹಿಂಸಾಚಾರ ನಡೆಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಕಿ ಸಮುದಾಯದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದು, 150ಕ್ಕೂ ಹೆಚ್ಚು ಜನ ಈ ಹಿಂಸಾಚಾರದಲ್ಲಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಮಣಿಪುರದಲ್ಲಿ ಸುಮಾರು 250ಕ್ಕೂ ಹೆಚ್ಚು ಚರ್ಚ್‌ಗಳನ್ನು ಧ್ವಂಸ ಮಾಡಲಾಗಿದೆ ಎಂದು ಕಿಡಿಕಾರಿದರು. ಕೋಮುವಾದಿ ಸಂಘಟನೆಗಳು ಬಿತ್ತಿದ ವಿಷದ ಬೀಜದಿಂದ ಕಳೆದ 4 ತಿಂಗಳಲ್ಲಿ ಮಣಿಪುರದಲ್ಲಿ ನಡೆದ ಘಟನಾವಳಿಗಳು ಇಡೀ ದೇಶವೇ ತಲೆ ತಗ್ಗಿಸುವಂತೆ ಮಾಡಿದೆ. ಅಲ್ಪಸಂಖ್ಯಾತ ಕ್ರೈಸ್ತ ಹಾಗೂ ದಲಿತರ ಮೇಲಿನ ದಾಳಿಗಳು ನಿರಂತರವಾಗಿ ನಡೆಯುತ್ತಿದ್ದರೂ ಸರ್ಕಾರಗಳು ಮೌನವಾಗಿವೆ ಎಂದು ದೂರಿದರು.

ಕ್ರೈಸ್ತರ ಪ್ರಗತಿಪರ ಸಂಸ್ಥೆ ಅಧ್ಯಕ್ಷ ಜ್ಞಾನ ಪ್ರಕಾಶ್, ಗೌರವಾಧ್ಯಕ್ಷ ವಿನೋದ್ ಚಾಕೋ, ಪೋಷಕ ಪುರುಷೋತ್ತಮ್, ಉಪಾಧ್ಯಕ್ಷರಾದ ಪಾಲ್‌ಬಲ್ಲಿ ಗ್ರಹಾಂ, ರಜನಿಕಾಂತ್, ಜಂಟಿ ಕಾರ್ಯದರ್ಶಿ ವಿನೋದ್, ಸಂಘಟಕ ಚಂದ್ರಶೇಖರ್, ಎಸ್‌ಡಿಪಿಐ ಮುಖಂಡರಾದ ರಫತ್ ಉಲ್ಲಾ ಖಾನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಗೂಡಿನಲ್ಲಿದ್ದ 24 ಹಕ್ಕಿ ಮರಿಗಳ ಕೊಂದ ಪಾಪಿ ಬಂಧನ



ಮೈಸೂರು, ಆ.8(ಎಂಟಿವೈ)– ಅರಳಿಮರದಲ್ಲಿ ಗೂಡು ಕಟ್ಟಿ ಮರಿ ಮಾಡಿದ್ದ ಕಾರ್ಮೋರೆಂಟ್ ಹಾಗೂ ಈಗ್ರೇಟ್ ಪಕ್ಷಿಗಳ 24 ಮರಿಗಳನ್ನು ವ್ಯಕ್ತಿಯೊಬ್ಬ ನಿರ್ದಾಕ್ಷಿಣ್ಯವಾಗಿ ಕೊಂದಿರುವ ಘಟನೆ ಮೈಸೂರು ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ನಡೆದಿದ್ದು, ಈ ಸಂಬಂಧ ಆರೋಪಿಯನ್ನು ಅರಣ್ಯ ಸಿಬ್ಬಂದಿಗಳು ಬಂಧಿಸಿದ್ದಾರೆ.

ಸಿಂಧುವಳ್ಳಿ ಗ್ರಾಮದ ಅರಳಿಕಟ್ಟೆಯಲ್ಲಿನ ಮರದಲ್ಲಿ ಕಾರ್ಮೋರೆಂಟ್ ಹಾಗೂ ಈಗ್ರೇಟ್ ಪಕ್ಷಿಗಳು ಗೂಡು ಕಟ್ಟಿ ಮರಿ ಮಾಡಿದ್ದವು. ಸುರಕ್ಷಿತ ಜಾಗವೆಂದು ಸಿಂಧುವಳ್ಳಿ ಗ್ರಾಮದ ಅರಳಿಮರವನ್ನೇ ಆರಿಸಿಕೊಂಡು ಗೂಡುಕಟ್ಟಿಕೊಂಡಿದ್ದ ಪಕ್ಷಿಗಳಿಗೆ ಅದೇ ಗ್ರಾಮದ ವ್ಯಕ್ತಿ ದುಸ್ವಪ್ನವಾಗಿದ್ದಾನೆ.

ಚಿಕ್ಕ ಚಿಕ್ಕ 24 ಮರಿಗಳನ್ನು ನೆಲಕ್ಕೆ ಬೀಳಿಸಿ ಕೊಂದಿದ್ದಾನೆ. 7 ಮರಿಗಳು ಚಿಂತಾಜನಕ ಸ್ಥಿತಿಯಲ್ಲಿವೆ. ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯಾಧಿಕಾರಿಗಳು ಪಕ್ಷಿ ಮರಿಗಳನ್ನು ಹತ್ಯೆ ಮಾಡಿದ ಸಿಂಧುವಳ್ಳಿ ಗ್ರಾಮದ ರವಿ ಬಿನ್ ದೇವಣ್ಣ ಎಂಬಾತನನ್ನು ಬಂಧಿಸಿದ್ದಾರೆ. ಮರದಲ್ಲಿ ಗೂಡು ಕಟ್ಟಿದ್ದ ಪಕ್ಷಿಗಳು ಪಿಕ್ಕೆ (ಹಿಕ್ಕೆ) ಹಾಕುತ್ತಿದ್ದುದ್ದರಿಂದ ಗೂಡನ್ನು ಕಿತ್ತು ಹಾಕಿರುವುದಾಗಿ ತಿಳಿಸಿದ್ದಾನೆ.

ಸುರಕ್ಷಿತ ತಾಣ : ಆರೋಪಿ ರವಿ ಜಲವೆ (ಹುಕ್ಕು, ಕೊಕ್ಕೆ) ಬಳಸಿ ಅರಳಿಮರದ ಮೇಲಿದ್ದ ಕಾರ್ಮೋರೆಂಟ್ ಹಾಗೂ ಈಗ್ರೇಟ್ ಪಕ್ಷಿಗಳ ಗೂಡನ್ನು ಕಿತ್ತಿದ್ದಾನೆ. ಈ ವೇಳೆ ತಾಯಿ ಪಕ್ಷಿಗಳು ಗಾಬರಿಯಿಂದ ಗೂಡಿನಿಂದ ಹಾರಿವೆ. ಆದರೆ, ಅವುಗಳ ಕರುಳ ಬಳ್ಳಿಗಳು (ಮರಿಗಳು) ಕೊಕ್ಕೆಯೊಂದಿಗೆ ಮರದ ಮೇಲಿಂದ ನೆಲಕ್ಕೆ ಬಿದ್ದು ಮೃತಪಟ್ಟಿವೆ. ವಿಷಯ ತಿಳಿದು ಅರಣ್ಯ ಸಿಬ್ಬಂದಿಗಳು ಆಗಮಿಸುವಷ್ಟರಲ್ಲೇ 24 ಮರಿಗಳು ಇಹಲೋಕ ತ್ಯಜಿಸಿದ್ದವು. 7 ಮರಿಗಳು ಸಾವು–ಬದುಕಿನ ಹೋರಾಟ ನಡೆಸುತ್ತಿದ್ದವು.

ಮಾಹಿತಿ ನೀಡಿ: ಯಾವುದೇ ಪ್ರದೇಶದಲ್ಲಾದರೂ ವನ್ಯಜೀವಿ, ಪ್ರಾಣಿ–ಪಕ್ಷಿಗಳಿಗೆ ತೊಂದರೆ ನೀಡಲು ಮುಂದಾದರೆ, ಅರಣ್ಯ ಸಿಬ್ಬಂದಿಗಳಿಗೆ ಮಾಹಿತಿ ನೀಡಬೇಕು. ಭೂಮಿಯಲ್ಲಿ ಜೀವಿಸುವ ಎಲ್ಲಾ ಪ್ರಾಣಿ, ಪಕ್ಷಿಗಳಿಗೆ ಬದುಕುವ ಹಕ್ಕಿದೆ. ಸಂವಿಧಾನದಲ್ಲೂ ಪ್ರಾಣಿ–ಪಕ್ಷಿಗಳ ರಕ್ಷಣೆಗೆ ಅವಕಾಶ ನೀಡಲಾಗಿದೆ. ಇಂತಹ ಸಂದರ್ಭದಲ್ಲಿ ಸಣ್ಣಪುಟ್ಟ ಕಾರಣವನ್ನು ಮುಂದಿಟ್ಟುಕೊಂಡು ಈ ರೀತಿಯ ಕೃತ್ಯಗಳನ್ನು ಎಸಗಬಾರದು. ಭೂಮಿಯಲ್ಲಿ ಪ್ರಾಣಿ–ಪಕ್ಷಿಗಳು ಅಗತ್ಯಕ್ಕೆ ಅನುಗುಣವಾಗಿದ್ದರೆ, ಪರಿಸರದಲ್ಲಿ ಸಮತೋಲನ ಸಾಧ್ಯ ಎಂದು ಜಾಗೃತಿ ಮೂಡಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ಸುರೇಂದ್ರ, ಕೆ, ಡಿಆರ್‌ಎಫ್‌ಓ ಮೋಹನ್‌ಕುಮಾರ್, ಗಸ್ತು ಪಾಲಕ ರಾಜೇಗೌಡ, ಚಾಲಕ ಗಣೇಶ ಭಾಗವಹಿಸಿದ್ದರು.

ಮಣಿಪುರ ಸರ್ಕಾರ ವಜಾಗೊಳಿಸಿ: ಪ್ರತಿಭಟನೆ



ಮೈಸೂರು,ಆ.8(ಪಿಎಂ)– ಹಿಂಸಾಚಾರದ ಹಿನ್ನೆಲೆಯಲ್ಲಿ ಮಣಿಪುರ ಸರ್ಕಾರ ವಜಾಗೊಳಿಸಲು ಒತ್ತಾಯಿಸಿ ಹಾಗೂ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೆಲ ತಿಂಗಳಿಂದ ಮಣಿಪುರದಲ್ಲಿ ಹಿಂಸಾಚಾರ ನಿರಂತರವಾಗಿ ನಡೆಯುತ್ತಿದೆ. ಈ ನಡುವೆ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆಸಿ ಅವರಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ. ಇಂತಹ ಕೃತ್ಯದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಮಾನ ಹರಾಜಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆಗೆ ಸರ್ಕಾರ ಆದೇಶಿಸಬೇಕು. ಆ ಮೂಲಕ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಸೌಜನ್ಯಳ ಕುಟುಂಬಕ್ಕೆ ಶೀಘ್ರವೇ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು. ವೇದಿಕೆ ಅಧ್ಯಕ್ಷ ರಾಜಶೇಖರ್, ಮುಖಂಡರಾದ ಲಯನ್ಸ್ ಕುಮಾರ್, ಕಿಕ್ಕೇರಿ ಕಿರಣ್, ಲೋಕೇಶ್, ಪ್ರದೀಪ್, ನಂಜುಂಡ, ಗೋಲ್ಡ್ ಸುರೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.8.2023 ಬುಧವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023 ರಿಂದ 16.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಡಿಸಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಮೈಸೂರು ಜಿಲ್ಲಾ ಅರ್ಚಕರ ಸಂಘ :** ಮೈಸೂರು ಜಿಲ್ಲಾ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಸಂಘದ ಸಭೆ, ಉಪಸ್ಥಿತರು : ಸಂಘದ ರಾಜ್ಯಾಧ್ಯಕ್ಷ ಶ್ರೀವತ್ಸ, ಶಾಸಕ ಟಿ.ಎಸ್. ಶ್ರೀವತ್ಸ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಇಳೈ ಆಳ್ವಾರ್ ಸ್ವಾಮೀಜಿ, ರಘುರಾಂ ವಾಜಪೇಯಿ, ಚಾಮುಂಡಿಬೆಟ್ಟದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್, ಪ್ರೊ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಜಿಲ್ಲಾ ಅಧ್ಯಕ್ಷ ಎಸ್. ಕೃಷ್ಣಮೂರ್ತಿ, ಸ್ಥಳ:ಶ್ರೀ ಶಾಂತೇಶ್ವರಸ್ವಾಮಿ ದಿಗಂಬರ ಜೈನ ಬಸದಿ, ಶ್ರೀ ಬನುಮಯ್ಯ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಪಪೆಟ್ ಹೌಸ್ ಧಾರವಾಡ, ಸಂಚಲನ, ಮೈಸೂರು :** ಅದ್ಭುತ ರಾಮಾಯಣ ಛಾಯಾಚಲನೆ ಪ್ರದರ್ಶನ, ಚಾಲನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರು : ರಂಗಾಯಣ ಉಪನಿರ್ದೇಶಕರಾದ ಶ್ರೀಮತಿ ನಿರ್ಮಲ ಮಠಪತಿ, ಧ್ವನ್ಯಾಲೋಕ ನಿರ್ದೇಶಕರಾದ ಶ್ರೀಮತಿ ಜಯಶ್ರೀ ಸಂಜಯ್, ರಂಗ ನಿರ್ದೇಶಕರಾದ ಶ್ರೀಮತಿ ರಜನಿ ಗರುಡ, ದೀಪಕ್ ಮೈಸೂರು, ಸ್ಥಳ: ಧ್ವನ್ಯಾಲೋಕ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಗ್ರಂಥಪಾಲಕರ ದಿನಾಚರಣೆ ಅಂಗವಾಗಿ ರಂಗನಾಥನ್ ಅವರ ಸೂತ್ರಗಳ ಮರುಕ್ರಮಣಿಕೆ ಬಗ್ಗೆ ಪ್ರತಿಫಲನ ಕುರಿತು ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಜಿ. ಸತೀಶ್ ಅವರಿಂದ ಉಪನ್ಯಾಸ, ಗೌರವ ಅತಿಥಿಗಳು : ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ. ಎಂ.ಎಸ್. ಸಪ್ನ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜ, ಸ್ಥಳ : ಡಾ.ಎಸ್.ಆರ್. ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ :** ಕ್ವಿಟ್ ಇಂಡಿಯಾ ದಿನಾಚರಣೆ ಅಂಗವಾಗಿ ಬಹಿರಂಗ ಸಭೆ, ಉಪಸ್ಥಿತರು : ರಂಗಾಯಣ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ, ಸ್ಥಳ: ಗಾಂಧಿಚೌಕ, ಬೆಳಗ್ಗೆ 11 ರಿಂದ.

■ **ಸರ್ಕಾರಿ ಪ್ರೌಢಶಾಲೆ ಒಂಟಿಕೊಪ್ಪಲು, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ವಿ.ಕೃ. ಗೋಕಾಕ್ ಜನ್ಮದಿನಾಚರಣೆ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಮುಖ್ಯ ಶಿಕ್ಷಕ ಕೆ.ಜಿ. ಮಹೇಶ್, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪ್ರತಿಭಾ ಪುರಸ್ಕಾರ : ಶ್ರೀಮತಿ ಕೆ.ಎನ್. ಕಲ್ಪನಾ, ಅಭಿನಂದನಾ ಭಾಷಣ : ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಪ್ರಾಸ್ತಾವಿಕ ನುಡಿ : ಸಂಪನ್ಮೂಲ ವ್ಯಕ್ತಿ ಡಾ. ವಿಜಿ, ಉಪಸ್ಥಿತರು : ಕಾವೇರಿ ಬಳಗದ ಅಧ್ಯಕ್ಷರಾದ ಎನ್.ಕೆ. ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ:ಸರ್ಕಾರಿ ಪ್ರೌಢಶಾಲೆ, ಒಂಟಿಕೊಪ್ಪಲು, ಮಧ್ಯಾಹ್ನ 2.30ಕ್ಕೆ

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** ಆಡಿ ಕೃತ್ತಿಕಾ ಪೂಜಾ ಮಹೋತ್ಸವ, ಬೆಳಗ್ಗೆ 4.30ಕ್ಕೆ ಸಂಕಲ್ಪ, ಪಂಚಾಮೃತ ಅಭಿಷೇಕ, ಶ್ರೀ ಸುಬ್ರಹ್ಮಣ್ಯಸ್ವಾಮಿ ಅವರಿಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀವಲ್ಲಿ ದೇವಾಸೇನ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ ಅವರಿಗೆ ಬೆಳ್ಳಿರಥದಲ್ಲಿ ಪ್ರಾಕಾರೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ವಿಶ್ವೇಶ್ವರನಗರ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಆದ್ಯಗೋವಿಂದಾಚಾರ್ಯ ಅವರಿಂದ ಭಾಗವತ ಸಪ್ತಾಹ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 4.45ರಿಂದ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಮಾಧವಚಾರ್ಯ ಅವರಿಂದ ಕಿಷ್ಕಿಂದಾ ಕಾಂಡ ಕುರಿತು ಪ್ರವಚನ, ಸ್ಥಳ:ವಿದ್ಯಾಪೀಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ 7ರವರೆಗೆ.

■ **ರಂಗವಲ್ಲಿ :** ರಂಗಸಂಭ್ರಮ, ಉದ್ಘಾಟನೆ: ಚಲನಚಿತ್ರ ನಟ ಡಾಲಿ ಧನಂಜಯ, ಅಧ್ಯಕ್ಷತೆ: ಜಾನಪದ ವಿದ್ವಾಂಸ ಡಾ.ಪುರುಷೋತ್ತಮ ಬಿಳಿಮಲೆ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕರಾದ ನಿರ್ಮಲ ಮಠಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಉಪಸ್ಥಿತರು: ರಂಗವಲ್ಲಿ ಸಂಚಾಲಕ ಹೆಚ್.ಆರ್. ರವಿಪ್ರಸಾದ್, ಸ್ಥಳ: ಕಿರುರಂಗ ಮಂದಿರ, ರಂಗಾಯಣ ಆವರಣ, ಸಂಜೆ 5.30ಕ್ಕೆ.

■ **ಸುಶಿರ :** 21ನೇ ವಾರ್ಷಿಕ ಸಂಗೀತ ಸಂಭ್ರಮ, ವಿದ್ವಾನ್ ಎಸ್. ಹಿರಣ್ಮಯಿ ಅವರಿಂದ ಗಾಯನ, ವಿದ್ವಾನ್ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಘಟ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಲಕ್ಷ್ಮಿಪುರಂ, ಸಂಜೆ 6ಕ್ಕೆ.

■ **ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ :** ಬೆಳಗ್ಗೆ 10.30ಕ್ಕೆ 58ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್, ಹಿನ್ನೆಲೆ ಗಾಯಕ ಶ್ರೀಹರ್ಷ, ಅಧ್ಯಕ್ಷತೆ: ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ.ಎಂ.ಪುಷ್ಪಾವತಿ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣಸಿಂಗ್, ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ವ್ಯವಸ್ಥಾಪಕ ನಿರ್ದೇಶಕ ನರೇಂದ್ರ ನಾರಾಯಣ್, ಅಧ್ಯಕ್ಷತೆ : ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ.ಎಂ.ಪುಷ್ಪಾವತಿ, ಸ್ಥಳ:ಸೆಮಿನಾರ್ ಹಾಲ್, ನಾಲೆಡ್ಜ್ ಪಾರ್ಕ್, ಆಯುಷ್ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ. ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, 7.15 ಭಾವಗೀತೆಗಳು–ರಮೇಶ್ಚಂದ್ರ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ವೃತ್ತಿ ಮಾರ್ಗದರ್ಶನ– ಪಶು ವೈದ್ಯಕೀಯ ಶಿಕ್ಷಣದ ಪ್ರಾಮುಖ್ಯತೆ ಕುರಿತು ಡಾ.ಎ.ಸಿ. ಶಿವಕುಮಾರ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ– ಬೇದ್ರೆ ಮಂಜುನಾಥ್, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ–ವಿ.ಜಿ. ಜೋಗ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಆರ್. ಗಿರೀಶ್, 12.45 ಜನಪದ ಸಂಗೀತ–ರಾಚಪ್ಪಾಜಿ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀಚೇತನ–ಭಾಗವಹಿಸುವರು ರಂಗಭೂಮಿ ಕಲಾವಿದೆ ಜಾಹಿರಾ, 4.45 ಹಿಂದಿ ಪಾಠ –ಡಾ. ಸ್ಮಿತಾ ಚಿಪ್ಳೂಣ್‌ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಸಾವಯುವ ಸಂಪದ–ಸಾವಯುವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ. ಹಸಿರು ಗೊಬ್ಬರದ ಮಹತ್ವ ಕುರಿತು ಸಂವಾದದಲ್ಲಿ ಭಾಗವಹಿಸುವವರು ರವೀಂದ್ರ ಆರ್. ಕಟ್ಟಿ ಹಾಗೂ ಹೆಚ್.ಕೆ. ದೊಡ್ಡಲಿಂಗಯ್ಯ, ಪರಿಕಲ್ಪನೆ ಹಾಗೂ ನಿರ್ಮಾಣ–ಎನ್. ಕೇಶವಮೂರ್ತಿ, 8.00 ಸಂಸದ್ ಸಮೀಕ್ಷಾ, 9.30 ಹಿಂದೂಸ್ಥಾನಿ ಸಂಗೀತ–ಪಂಡಿತ್ ಕುಮಾರ್ ಗಂಧರ್ವ–ಗಾಯನ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

15 ದಿನದೊಳಗೆ ಪುರಭವನ ಆವರಣದಲ್ಲಿ ವಾಹನ ನಿಲುಗಡೆ ವ್ಯವಸ್ಥೆ

ಮಲ್ಟಿಲೆವೆಲ್ ಪಾರ್ಕಿಂಗ್ ಕಾಮಗಾರಿ ಪರಿಶೀಲಿಸಿದ ನಂತರ ಮೇಯರ್ ಶಿವಕುಮಾರ್ ವಿವರಣೆ



ಮೈಸೂರು, ಆ. 8(ಆರ್‌ಕೆ)– ಬಾಕಿ ಇರುವ ಕಾಮಗಾರಿಯನ್ನು ಪೂರ್ಣಗೊಳಿಸಿ 15 ದಿನದೊಳಗಾಗಿ ಮೈಸೂರಿನ ಪುರಭವನದ ಆವರಣದ ಮಲ್ಟಿಲೆವೆಲ್ ಪಾರ್ಕಿಂಗ್‌ನಲ್ಲಿ ಸಾರ್ವಜನಿಕರ ವಾಹನ ನಿಲುಗಡೆಗೆ ಅವಕಾಶ ನೀಡಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮಂಗಳವಾರ ಮಧ್ಯಾಹ್ನ ಟೌನ್‌ಹಾಲ್‌ಗೆ ತೆರಳಿ ಪಾರ್ಕಿಂಗ್ ಕಟ್ಟಡದ ಕಾಮಗಾರಿಗಳನ್ನು ಪರಿಶೀಲಿಸಿದ ಅವರು, 15 ದಿನದೊಳಗಾಗಿ ಬಾಕಿ ಉಳಿದಿರುವ ಕೆಲಸ ಪೂರ್ಣಗೊಳಿಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು. ದಸರಾ ಸಮೀಪಿಸುತ್ತಿದೆ. ಪ್ರವಾಸಿಗರು, ಸಾರ್ವಜನಿಕರ ವಾಹನ ನಿಲುಗಡೆಗೆ ನಗರದ ಹೃದಯ ಭಾಗದಲ್ಲಿ ವಾಹನ ನಿಲ್ಲಿಸಲು ಸ್ಥಳಾಭಾವವಿರುವುದರಿಂದ ಅತೀ ಶೀಘ್ರ ಟೌನ್‌ಹಾಲ್‌ನಲ್ಲಿ ಅವಕಾಶ ಕಲ್ಪಿಸಬೇಕಾಗಿದೆ ಎಂದ ಅವರು, 15 ದಿನದೊಳಗೆ ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆ ಆರಂಭಿಸಬೇಕೆಂದು ತಾಕೀತು ಮಾಡಿದರು.

ಪೇ ಅಂಡ್ ಪಾರ್ಕಿಂಗ್, ಭದ್ರತಾ ವ್ಯವಸ್ಥೆ, ಪ್ರವೇಶ, ನಿರ್ಗಮನಕ್ಕೆ ಸೌಲಭ್ಯ ಒದಗಿಸಿ, ಮಳೆ ನೀರು ಸೆಲ್ಲರ್‌ನಲ್ಲಿ ನಿಲ್ಲದಂತೆ ಸೌಲಭ್ಯ ಒದಗಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಸಣ್ಣಪುಟ್ಟ ಕೆಲಸಗಳನ್ನು ತೀವ್ರಗತಿಯಲ್ಲಿ ಕೈಗೊಂಡು ಮುಗಿಸುವಂತೆ ಅಧಿಕಾರಿಗಳಿಗೆ ಮೇಯರ್ ತಾಕೀತು ಮಾಡಿದರು. ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೋಹನ ಹಾಗೂ ಇತರರು ಸ್ಥಳ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಮುಂದಿನ ವಾರ ಮೈಸೂರಲ್ಲಿ ನೀರಿನ ಬಿಲ್ ಪಾವತಿಗೆ ಡೈನಾಮಿಕ್ QR ಕೋಡ್ ಚಾಲನೆ



ಮೈಸೂರು, ಆ. 8(ಆರ್‌ಕೆ)– ನೀರಿನ ಮಾಸಿಕ ಬಿಲ್ ಪಾವತಿಸಲು ಸಹಕಾರಿಯಾಗುವಂತೆ ಮುಂದಿನ ವಾರ ಡೈನಾಮಿಕ್ QR ಕೋಡ್‌ಗೆ ಮೈಸೂರು ಮಹಾ ನಗರ ಪಾಲಿಕೆಯು ಚಾಲನೆ ನೀಡಲಿದೆ. ಕುಳಿತಲ್ಲೇ ಮೊಬೈಲ್‌ನಿಂದ ಬಿಲ್‌ನಲ್ಲಿ ಮುದ್ರಿತವಾಗುವ ಡೈನಾಮಿಕ್ QR ಕೋಡ್ ಸ್ಕ್ಯಾನ್ ಮಾಡಿ, ಬಿಲ್‌ನಲ್ಲಿ ನಮೂದಾಗಿರುವ ಮೊತ್ತವನ್ನು ಟೈಪ್ ಮಾಡಿ ಓಕೆ ಕೊಟ್ಟರೆ ಸಾಕು, ಗೂಗಲ್ ಪೇ ಅಥವಾ ಫೋನ್ ಪೇ ಮಾದರಿ ನೀರಿನ ಶುಲ್ಕವು ಮೈಸೂರು ಮಹಾ ನಗರಪಾಲಿಕೆ ಬ್ಯಾಂಕ್ ಖಾತೆಗೆ ಹಣ ಜಮಾ ಆಗಲಿದೆ. ಮುಂದಿನ ಸೋಮವಾರ ಅಥವಾ ಮಂಗಳವಾರ ಮೇಯರ್, ಪಾಲಿಕೆ ಆಯುಕ್ತರು QR ಕೋಡ್ ಉಳ್ಳ ಗ್ರಾಹಕರ ನೀರಿನ ಬಿಲ್ ಬಿಡುಗಡೆಗೊಳಿಸುವ ಮೂಲಕ ಈ ವ್ಯವಸ್ಥೆಗೆ ಚಾಲನೆ ನೀಡುವರು. ಮೈಸೂರು ನಗರದಾದ್ಯಂತ ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ವಾಣಿ ವಿಲಾಸ ನೀರು ಸರಬರಾಜು ವಿಭಾಗದ ಕೌಂಟರ್, ಪಾಲಿಕೆ ವಲಯ ಕಚೇರಿ ಕೌಂಟರ್‌ಗಳಿಗೆ ಹೋಗಿ ನೀರಿನ ಬಿಲ್ ಪಾವತಿಸುವ ಅಗತ್ಯವಿಲ್ಲ. ಕುಳಿತಲ್ಲೇ ಹಣ ಪಾವತಿಸುವ ಸೌಲಭ್ಯವನ್ನು ಇದೀಗ ಪಾಲಿಕೆ ಕಲ್ಪಿಸುತ್ತಿದೆ.

ಸಚಿವರ ಸುಲಿಗೆಯ ಸಮರ್ಥನೆ ಮಾಡಿಕೊಳ್ಳುವ 'ಸಿದ್ದ ಕಲೆ'

ಸಿಎಂ ಸಿದ್ದರಾಮಯ್ಯ ವಿರುದ್ಧ ಮಾಜಿ ಸಿಎಂ ಕುಮಾರಸ್ವಾಮಿ ಟ್ವೀಟಾಸ್ತ್ರ ಪ್ರಯೋಗ



ಬೆಂಗಳೂರು, ಆ.8(ಕೆಎಂಶಿ)– ಅಧಿಕಾರಿಗಳಿಂದ ವಸೂಲಿ ಆರೋಪ ಎದುರಿಸುತ್ತಿರುವ ಕೃಷಿ ಸಚಿವ ಚಲುವರಾಯಸ್ವಾಮಿ ಅವರ ವಿರುದ್ಧ ರಾಜ್ಯಪಾಲರಿಗೆ 7 ಅಧಿಕಾರಿಗಳು ಬರೆದಿರುವ ದೂರಿನ ಪತ್ರದ ಸೃಷ್ಟಿಕರ್ತರು "ನಿಮ್ಮ ಬ್ರದರ್ರೋ"? ಎಂದು ಕೆಣಕಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಮಾಜಿ ಮುಖ್ಯಮಂತ್ರಿಗಳು; ಸಿದ್ದರಾಮಯ್ಯ ಅವರನ್ನು ಟಿಕ್ ಟಿಕ್ ಸಿದ್ದರಾಮಯ್ಯ ಎಂದು ಕಾಲೆಳೆದಿದ್ದಾರೆ. ಅಲ್ಲದೆ, #YstTax #CashForPosting ಹ್ಯಾಷ್ ಟ್ಯಾಗ್ ಹಾಕಿ ಟಾಂಗ್ ನೀಡಿದ್ದಾರೆ. ಮಂತ್ರಿಗಳ ಮಾನಗೇಡಿ ಕೃತ್ಯಗಳನ್ನೂ ಸಮರ್ಥನೆ ಮಾಡಿಕೊಳ್ಳುವ ಲಜ್ಜೆಗೇಡಿ ಮುಖ್ಯಮಂತ್ರಿ ಈ ರಾಜ್ಯಕ್ಕೆ ವಕ್ಕರಿಸಿದ್ದಾರೆ!! ಸಚಿವರ ಸುಲಿಗೆಯನ್ನೇ ಸಿಗ್ಗಿಲ್ಲದೆ ಸಮರ್ಥನೆ ಮಾಡಿಕೊಳ್ಳುವ 'ಸಿದ್ದಕಲೆ' ಅಸಹ್ಯ ಮತ್ತು ವಾಕರಿಕೆ ತರಿಸುತ್ತಿದೆ ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಸನ್ಮಾನ್ಯ @hd_kumaraswamy ಅವರೇ,
> ಇತ್ತೀಚೆಗೆ ನೀವು ನನ್ನ ವಿರುದ್ಧ ಮಾಡುತ್ತಿರುವ ವೈಯಕ್ತಿಕ ಮಟ್ಟದ ಆರೋಪಗಳು ಮತ್ತು ಬಳಸುತ್ತಿರುವ ಭಾಷೆಯನ್ನು ಗಮನಿಸಿದರೆ ಚುನಾವಣಾ ಸೋಲಿನ ಆಘಾತದಿಂದಾಗಿ ನೀವು ಮಾನಸಿಕ ಸ್ಥಿಮಿತತೆಯನ್ನು ಕಳೆದು ಕೊಂಡಂತೆ ಕಾಣುತ್ತಿದೆ. ಶೀಘ್ರವಾಗಿ ಗುಣಮುಖರಾಗಿ ಎಂದಷ್ಟೇ ನಾನು ಹಾರೈಸ ಬಲ್ಲೆ. ಇನ್ನು ನೀವು ಪ್ರಸ್ತಾಪಿಸಿರುವ ಶಾಸಕರ ಪತ್ರದ ನಕಲಿ–ಅಸಲಿ ವಿಚಾರ ಶೀಘ್ರದಲ್ಲಿಯೇ ತನಿಖೆಯಿಂದ ಹೊರಬೀಳಲಿದೆ. –ಮುಖ್ಯಮಂತ್ರಿ ಸಿದ್ದರಾಮಯ್ಯ



ನಕಲಿ ಪತ್ರ ಎಂದಾದರೆ ರಾಜ್ಯಪಾಲರ ಕಾರ್ಯಾಲಯ ನಕಲಿ(?) ಪತ್ರದ ಮೇರೆಗೆ ಕ್ರಮ ಜರುಗಿಸಿ ಎಂದು ಷರಾ ಬರೆದಿದೆಯೇ? ಸುಳ್ಳಿನ ಪತ್ರಕ್ಕೆ ಮಾನ್ಯ ರಾಜ್ಯಪಾಲರು ಸ್ಪಂದಿಸಿದ್ದಾರೆಯೇ? ರಾಜಧರ್ಮದ ಪ್ರವಚನಕಾರರೇ ರಾಜಭವನದ ಪಾವಿತ್ರ್ಯವನ್ನೇ ಶಂಕಿಸುವುದು ತರವೇ? ಸ್ವಯಂ ಘೋಷಿತ ನಕಲಿ ಸಂವಿಧಾನ ತಜ್ಞನಿಗೆ ಇದು ಭೂಷಣವಲ್ಲ ಎಂದು ಹಾಲಿ ಮುಖ್ಯಮಂತ್ರಿಗೆ ಮಾಜಿ ಮುಖ್ಯ ಮಂತ್ರಿ ಅವರು ಚಾಟಿ ಬೀಸಿದ್ದಾರೆ.

ಕಂಡೋರ ಭುಜದ ಮೇಲೆ ಬಂದೂಕಿಟ್ಟು ಇನ್ನೊಬ್ಬರ ರಾಜಕೀಯ ಜೀವನ ಎತ್ತಿಬಿಡುವ ನಿಮ್ಮಂಥ 'ಎತ್ತುವಳಿ ಗಿರಾಕಿ'ಗೆ ನಕಲಿಪತ್ರಗಳ ಸೃಷ್ಟಿ ಬೆಣ್ಣೆ ಕಡಿದಷ್ಟೇ ಸಲೀಸು.

ಮತ್ತೊಬ್ಬರ ಶ್ರಮದ ಬೆವರೇ ನಿಮ್ಮ ಸ್ವಾರ್ಥ ರಾಜಕಾರಣಕ್ಕೆ ಹವಿಸ್ಸು ಎಂದು ಹೇಳಿರುವ ಕುಮಾರಸ್ವಾಮಿ ಅವರು; ನಿಮ್ಮ ಸಚಿವರ ವಿರುದ್ಧ ನಿಮ್ಮ ಕಾಂಗ್ರೆಸ್ ಶಾಸಕರೇ ಬರೆದ ಪತ್ರವನ್ನೇ ನಕಲಿ ಎಂದು ಬಿಂಬಿಸಿದ 'ನಕಲಿರಾಮ'ನ ಉಪ್ಪು ಹುಳಿ ಖಾರದ ಬಗ್ಗೆ ನನಗೆ ಗೊತ್ತಿಲ್ಲದ್ದೇನಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರು ಉಗಿದು ಉಪ್ಪಾಕಿದ ಮೇಲೆ ಆ ನಕಲಿ ಪತ್ರ 'ಅಸಲಿ'ಯಾದ ಕಥೆಯ ಹಕೀಕತ್ತು ಏನಿರಬಹುದು ಸಿಎಂ ಸಾಹೇಬರೇ? ಎಂದು ಪ್ರಶ್ನಿಸಿದ್ದಾರೆ.

ನಿಮ್ಮ ರಾಜಕೀಯ ಬದುಕಿಗೆ ಬ್ಲ್ಯಾಕ್ ಮೇಲೇ ಬಂಡವಾಳ. ಗೃಹ ಸಚಿವರು, ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ 'ಅಪ್ಪಯ್ಯ ಮತ್ತು ಅತೀಂದ್ರನ ಆಟಾಟೋಪ' ಕಂಡು ಹೌಹಾರಿದವರು ಯಾರು? ವರ್ಗಾವಣೆ ಪಟ್ಟಿಗೆ ಅಲ್ಲಿ ಬಿದ್ದ ಟಿಕ್ಕುಗಳ ಲೆಕ್ಕ ಹೇಳಬೇಕಾ ಟಿಕ್ ಟಿಕ್ ಸಿದ್ದರಾಮಯ್ಯ? ಎಂದು ಎಚ್ಚರಿಕೆ ನೀಡಿದ್ದಾರೆ.

ಕಾಂಬೋಡಿಯಾದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ



ಕಾಂಬೋಡಿಯಾ ಒಳಾಡಳಿತ ಸಚಿವಾಲಯದ ಅಧಿಕೃತ ಆಹ್ವಾನದ ಮೇರೆಗೆ ಫ್ನೋಮ್ ಪೆನ್ (ಕಾಂಬೋಡಿಯಾ ರಾಜಧಾನಿ) ನಗರಕ್ಕೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಅಲ್ಲಿನ ಒಳಾಡಳಿತ ಸಚಿವಾಲಯದ ಕಾರ್ಯದರ್ಶಿ–ಜನರಲ್ ಡಾ. ಕೆಮ್ ಚೀಟ್ ಅವರು ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬೆಳಗ್ಗೆ ಸ್ವಾಗತಿಸಿದರು. ಡಾ. ಕೆಮ್ ಚೀಟ್ ಅವರ ಸಲಹೆಗಾರ ಡಾ. ಎಸ್.ಸರ್ಜುದ್ದಿನ್ ಈ ವೇಳೆ ಹಾಜರಿದ್ದರು. ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮಾಜಿ ಶಾಸಕ ಮಂಜುನಾಥ್, ಹೆಚ್.ಎಂ.ರಮೇಶ್ ಗೌಡ, ತೂಪಲ್ಲಿ ಚೌಡರೆಡ್ಡಿ ಇನ್ನಿತರರು ಮಾಜಿ ಮುಖ್ಯಮಂತ್ರಿಗಳ ಜತೆಯಲ್ಲಿದ್ದಾರೆ.

ಒಂದನೇ ಪುಟದಿಂದ

ಅಧಿಕಾರಿಗಳ ಪತ್ರ ಸಂಬಂಧ ಸಿಐಡಿ ತನಿಖೆ

ಮಾಡಿದ್ದರು. ಮೊದಲು ಪೊಲೀಸ್ ತನಿಖೆ ಎಂದಿದ್ದ ಮುಖ್ಯಮಂತ್ರಿಗಳು ನಂತರ ಪ್ರಕರಣದ ತನಿಖೆಯನ್ನು ಸಿಐಡಿಯಿಂದ ಮಾಡಿಸುವ ತೀರ್ಮಾನ ಕೈಗೊಂಡಿದ್ದಾರೆ. ಕೃಷಿ ಸಚಿವರ ವಿರುದ್ಧ ಲಂಚದ ಸುಳ್ಳು ಆರೋಪ ಮಾಡಿ ಅವರ ಹಾಗೂ ಕಾಂಗ್ರೆಸ್ ಪಕ್ಷದ ತೇಜೋವಧೆಗೆ ಕೆಲವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಕೆಲವು ಸದಸ್ಯರು, ಗೃಹಸಚಿವರಿಗೆ ದೂರು ನೀಡಿ, ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿದ್ದರು. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ಪತ್ರ ಅಸಲಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಟ್ವೀಟ್ ಮಾಡಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ರಾಮನಗರದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಕುಮಾರ್ ಅವರು ಪತ್ರವನ್ನು ಅಧಿಕಾರಿಗಳು ಬರೆದಿಲ್ಲ ಎಂದು ದೂರು ನೀಡಿದ್ದಾರೆ. ಇದರ ಬಗ್ಗೆ ಪೊಲೀಸರು ತನಿಖೆ ಮಾಡಿ ಸತ್ಯ ಬಯಲಿಗೆಳೆಯಲು ಸೂಚಿಸಲಾಗಿದೆ ಎಂದರು. ಬಿಬಿಎಂಪಿ ಗುತ್ತಿಗೆದಾರರು ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಕೆಲಸ ನಿಲ್ಲಿಸಿ ರಾಜ್ಯಪಾಲರನ್ನು ಭೇಟಿ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಕೆಲಸ ನಿಲ್ಲಿಸಿಲ್ಲ. ತನಿಖೆಯಾಗಬೇಕೆಂದು ರಾಜ್ಯಪಾಲರನ್ನು ಭೇಟಿ ಮಾಡುತ್ತಿದ್ದಾರೆ. ಬಿಬಿಎಂಪಿ, ಬಿಡಿಎನಲ್ಲಿ ಕೆಲಸಗಳಾಗಿರುವ ಬಗ್ಗೆ ಸತ್ಯಾಸತ್ಯತೆ ತಿಳಿಯಲು ತನಿಖೆ ಮಾಡಿಸಲಾಗುತ್ತಿದೆ. ಈ ಬಗ್ಗೆ ಸಮಿತಿ ರಚನೆ ಮಾಡಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಹೇಳಿದರು.

ಉಡುಪಿ ವೀಡಿಯೋ ಪ್ರಕರಣ ಸಿಐಡಿಗೆ : ಉಡುಪಿ ವೀಡಿಯೋ ಪ್ರಕರಣವನ್ನು ಸಿಐಡಿಗೆ ವಹಿಸಿದ್ದು, ನಿನ್ನೆ ಆದೇಶವಾಗಿದೆ. ಡಿವೈಎಸ್ಪಿ ಮಟ್ಟದ ಅಧಿಕಾರಿಗೆ ತನಿಖೆ ಮಾಡಲು ಸೂಚಿಸಲಾಗಿತ್ತು. ಆದರೆ ಇನ್ನೂ ಉನ್ನತ ಮಟ್ಟದ ತನಿಖೆ ಮಾಡಬೇಕೆಂದು ಸಿಐಡಿಗೆ ವಹಿಸಲಾಗಿದೆ. ಶಾಸಕ ಯಶ್‌ಪಾಲ್ ಸುವರ್ಣ ಅವರು ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನ ಮಾಡಿದ್ದಾರೆ ಎಂದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಸಿಐಡಿಗೆ ಕೊಟ್ಟರೂ ಬೇಡ ಎನ್ನುತ್ತಾರೆ. ಅವರ ಕಾಲದಲ್ಲಿ ಸಿಐಡಿಗೆ ಕೊಟ್ಟಿದ್ದ ಪ್ರಕರಣಗಳು ಮುಚ್ಚಿಹೋಗಿವೆಯೇ ಎಂದು ತಿರುಗೇಟು ನೀಡಿದರು.

ಒಗ್ಗಟ್ಟಿಂದ ಹೋರಾಡಿ ಅದನ್ನ ಮುಟ್ಟೋಣ...

ಅನುಷ್ಠಾನದ ವಿಚಾರಕ್ಕೆ ಇಂದೂ ಒತ್ತುಕೊಟ್ಟರು. ರಾಜ್ಯದ ಜನತೆ ನಮ್ಮನ್ನು ನಂಬಿ ಅಧಿಕಾರ ನೀಡಿದ್ದಾರೆ. ನಿಮ್ಮಲ್ಲಿ ಎಷ್ಟೋ ಮಂದಿಗೆ ಸರ್ಕಾರದಲ್ಲಿ ಭಾಗಿಯಾಗುವ ಅರ್ಹತೆ ಇದೆ. ಆದರೆ, ಕೆಲವು ಇತಿಮಿತಿ ಇರುವುದರಿಂದ ಒಂದೇ ಬಾರಿ ಎಲ್ಲರಿಗೂ ಅವಕಾಶ ದೊರೆಯುವುದಿಲ್ಲ. ಮುಂದೆ ನಿಮಗೂ ಅವಕಾಶ ದೊರೆಯುತ್ತದೆ.

ಅಧಿಕಾರ ದೊರೆಯಲಿಲ್ಲವೆಂದು ದೂರ ಉಳಿಯಬೇಡಿ. ಪಕ್ಷವನ್ನು ಸಂಘಟಿಸಿ. ನಿಮಗೆ ಫಲ ಸಿಗಲಿಲ್ಲವೆಂದು ಕೊರಗುವುದು ಬೇಡ. ತಾಳ್ಮೆಯಿಂದ ಇದ್ದರೆ ನಿರೀಕ್ಷೆಯಂತೆ ಮುಂದಿನ ದಿನಗಳಲ್ಲಿ ಪ್ರತಿಫಲ ದೊರೆಯಲಿದೆ.

ಚುನಾವಣೆಗೂ ಮುನ್ನ ರಾಜ್ಯದ ಜನತೆಗೆ ನೀಡಿದ್ದ ಭರವಸೆಗಳನ್ನು ನಿಗದಿತ ಸಮಯದಲ್ಲಿ ಈಡೇರಿಸುತ್ತಿರುವುದರಿಂದ ರಾಜ್ಯದ ಬೊಕ್ಕಸದ ಮೇಲೆ ಹೊರೆ ಬೀಳುತ್ತಿದೆ. ಇದನ್ನು ಮುಂದಿನ ದಿನಗಳಲ್ಲಿ ಸರಿಪಡಿಸಲಾಗುವುದು. ಅಲ್ಲಿಯವರೆಗೂ ದುಂದುವೆಚ್ಚಕ್ಕೆ ಸ್ವಯಂ ಕಡಿವಾಣ ಹಾಕಬೇಕಾದ್ದು, ನಮ್ಮ–ನಿಮ್ಮೆಲ್ಲರ ಕರ್ತವ್ಯ.

ನಿನ್ನೆ ಹೇಳಿದಂತೆ ಇಂದೂ ಹೇಳುತ್ತಿದ್ದೇನೆ. ತುರ್ತು ಅಭಿವೃದ್ಧಿ ಕಾರ್ಯವನ್ನಷ್ಟೇ ಕೈಗೆತ್ತಿಕೊಳ್ಳಿ. ಲೋಕಸಭೆ ಚುನಾವಣೆ ನಂತರ ಒಂದಷ್ಟು ಬದಲಾಗಲಿದೆ. ಅಷ್ಟರಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯು ಸುಧಾರಿಸಲಿದೆ. ಕೇಂದ್ರದಲ್ಲಿ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬಂದರೆ, ಅನುದಾನಕ್ಕೆ ಕೊರತೆಯಾಗದು. ನಿಮ್ಮ ನಿರೀಕ್ಷೆಗೂ ಮೀರಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬಹುದು. ನಿಮ್ಮ ಕ್ಷೇತ್ರ ಮತ್ತು ತಾಲೂಕಿನ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯ ಅಗತ್ಯವಿದ್ದರೆ, ಅದನ್ನು ನಾನೇ ಮಾಡಿಕೊಡುತ್ತೇನೆ. ನೀವು ರಾಜಧಾನಿ ಕಡೆ ತಿರುಗಾಡುವುದನ್ನು ತಪ್ಪಿಸಿ ನಿಮ್ಮ ಜಿಲ್ಲೆ ಮತ್ತು ಕ್ಷೇತ್ರದಲ್ಲೇ ಉಳಿದು ಚುನಾವಣೆಗೆ ಸಿದ್ಧತೆ ನಡೆಸಿ. ಉಸ್ತುವಾರಿ ಸಚಿವರುಗಳು ಇನ್ನೂ ಮುಂದೆ ನಿಮ್ಮೆಲ್ಲಾ ಬೇಡಿಕೆ ಮತ್ತು ಆಗುಹೋಗುಗಳನ್ನು ಈಡೇರಿಸುತ್ತಾರೆ. ಅಲ್ಲಿ ಲೋಪ ಕಂಡರೆ ನೇರವಾಗಿ ನನ್ನನ್ನೇ ಭೇಟಿಯಾಗಿ. ಎಲ್ಲಿಯೂ ಒಬ್ಬರನ್ನೊಬ್ಬರು ಕಾಲೆಳೆಯುವುದು ಬೇಡ ಎಂದು ಖಡಕ್ಕಾಗಿ ತಿಳಿಸಿದ್ದಾರೆ.

ಮೊದಲ ತಂಡದ ಪಟ್ಟಿ ಬಿಡುಗಡೆ

ಉತ್ಸವ ಅ.15ರಿಂದ 24 (ಜಂಬೂಸವಾರಿ) ರವರೆಗೆ ಜರುಗಲಿದ್ದು, ನಿಯಮಾನುಸಾರ ಜಂಬೂಸವಾರಿಗೆ 50–55 ದಿನ ಮುನ್ನವೇ ಮೊದಲ ತಂಡದ ಗಜಪಡೆಯನ್ನು ಕರೆತರುವ ಸಂಪ್ರದಾಯವಿದೆ. ಮೊದಲ ತಂಡದಲ್ಲಿ ಬರುವ ಆನೆಗಳಿಗೆ ಹೆಚ್ಚಿನ ಜವಾಬ್ದಾರಿ ಇರುವುದರಿಂದ ತರಬೇತಿ, ವಿವಿಧ ತಾಲೀಮು ನಡೆಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸೆ.1ರಂದು ಮೊದಲ ತಂಡ ಮೈಸೂರಿಗೆ ಆಗಮಿಸಲಿದೆ. ಅಂಬಾರಿ ಆನೆ, ಗಜಪಡೆಯ ನಾಯಕ ಅಭಿಮನ್ಯು (ಮತ್ತಿಗೂಡು) ನೇತೃತ್ವದಲ್ಲಿ ಮತ್ತಿಗೂಡಿನಿಂದ ಭೀಮ, ಮಹೇಂದ್ರ, ಬಳ್ಳೆ ಶಿಬಿರದಿಂದ ಮಾಜಿ ನಾಯಕ ಅರ್ಜುನ, ದುಬಾರೆಯಿಂದ ಧನಂಜಯ, ಗೋಪಿ, ರಾಂಪುರ ಕ್ಯಾಂಪ್‌ನಿಂದ ಪಾರ್ಥಸಾರಥಿ, ಹೆಣ್ಣಾನೆಗಳಾದ ವಿಜಯ (ದುಬಾರೆ) ಹಾಗೂ ಭೀಮನಕಟ್ಟೆಯಿಂದ ವರಲಕ್ಷ್ಮೀ ಆನೆ ಮೈಸೂರಿಗೆ ಆಗಮಿಸಲಿವೆ.

ಸೆ.4ಕ್ಕೆ ಅರಮನೆ ಅಂಗಳಕ್ಕೆ: ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಸೆ.4ರವರೆಗೂ ಮೊದಲ ತಂಡದ ಆನೆಗಳು ಬೀಡು ಬಿಡಲಿವೆ. ಅರಮನೆಯಿಂದ ರಾಜವಂಶಸ್ಥರು ನೀಡುವ ಸೂಕ್ತ ಸಮಯಕ್ಕೆ ಸರಿಯಾಗಿ ಸೆ.4ರಂದು ಅರಣ್ಯ ಭವನದಿಂದ ಬಲ್ಲಾಳ್ ವೃತ್ತ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ ಮೂಲಕ ಜಯಮಾರ್ತಾಂಡ ದ್ವಾರದಿಂದ ಅರಮನೆ ಅಂಗಳಕ್ಕೆ ಗಜಪಡೆ ಸಾಗುತ್ತವೆ. ಸೆ.6ರಂದು ಆನೆಗಳ ತೂಕ ಮಾಡಿಸಿ, ಸೆ.7ರಿಂದ ತಾಲೀಮು ಆರಂಭಿಸಲಾಗುತ್ತದೆ. ಸಭೆಯಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್‌ಕುಮಾರ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಪಾಲ್ಗೊಂಡಿದ್ದರು.

ಕರಿಮುದ್ದನಹಳ್ಳಿಯಲ್ಲಿ ಅತಿಯಾದ ಮೊಬೈಲ್ ಬಳಕೆಯಿಂದಾಗುವ ದುಷ್ಪರಿಣಾಮದ ಬಗ್ಗೆ ಅರಿವು

ಮೈಸೂರು, ಆ.8–ಮೈಸೂರಿನ ವಿದ್ಯಾವರ್ಧಕ ಸ್ನಾತಕೋತ್ತರ ಕೇಂದ್ರದ ವತಿಯಿಂದ ಔಟ್‌ರೀಚ್ ಕಾರ್ಯಕ್ರಮದ ಅಂಗವಾಗಿ ಮೈಸೂರು ತಾಲೂಕಿನ ಕರಿಮುದ್ದನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ 'ಅತಿಯಾದ ಮೊಬೈಲ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ' ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಕರಿಮುದ್ದನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಯೋಗಣ್ಣ ಹಾಗೂ ಗ್ರಾಮ ಪಂಚಾಯತಿಯ ಅಧಿಕಾರಿ ಎಂ.ಸಿ.ರಾಘವೇಂದ್ರ, ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ಎನ್.ದೇವರಾಜು, ವಿದ್ಯಾರ್ಥಿಗಳಿಗೆ ಮೊಬೈಲ್ ಫೋನಿನಿಂದಾಗುವ ಉಪಯೋಗಗಳ ಬಗ್ಗೆ ತಿಳಿಸಿ ಮೊಬೈಲ್ ಫೋನಿನ ಅತೀಯಾದ ಬಳಕೆಯಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡಿದರು.

ವಿದ್ಯಾವರ್ಧಕ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರಾದ ಡಾ.ಎಸ್.ಪೂರ್ಣಿಮಾ, ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಎಂ.ಸಿ. ಅನೂಷಾ, ಪ್ರಶಾಂತ್ ಕುಮಾರ್, ಸ್ನಾತಕೋತ್ತರ ಕೇಂದ್ರದ 50 ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಬೈಲಕುಪ್ಪೆ ಪೊಲೀಸರಿಂದ 29 ಕೆಜಿ ಗಾಂಜಾ ಸೊಪ್ಪು ವಶ

ಮೈಸೂರು, ಆ.8(ಆರ್‌ಕೆ)– ಐವರನ್ನು ಬಂಧಿಸಿರುವ ಬೈಲಕುಪ್ಪೆ ಠಾಣೆ ಪೊಲೀಸರು, 29.103 ಕೆಜಿ ಗಾಂಜಾ ಸೊಪ್ಪು ಹಾಗೂ ಮಾರಾಟಕ್ಕೆ ಬಳಸುತ್ತಿದ್ದ ಮಾರುತಿ ಸ್ವಿಫ್ಟ್ ಕಾರನ್ನು ವಶಪಡಿಸಿಕೊಂಡಿದ್ದಾರೆ.

ಅಕ್ರಮವಾಗಿ ಗಾಂಜಾ ಸೊಪ್ಪು ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿಯನ್ವಯ ಬೆಳಗ್ಗೆ 7 ಗಂಟೆ ವೇಳೆಗೆ ದಾಳಿ ನಡೆಸಿದ ಹುಣಸೂರು ಉಪ ವಿಭಾಗದ ಡಿವೈಎಸ್ಪಿ ಮಹೇಶ್, ಬೈಲಕುಪ್ಪೆ ಸರ್ಕಲ್ ಇನ್ಸ್‌ಪೆಕ್ಟರ್ ಪ್ರಕಾಶ, ಸಬ್ ಇನ್ಸ್‌ಪೆಕ್ಟರ್ ಅಜಯ್‌ಕುಮಾರ್ ಹಾಗೂ ಸಿಬ್ಬಂದಿ, 1ನೇ ಟಿಬೆಟ್ ಕ್ಯಾಂಪ್‌ನಲ್ಲಿರುವ ಟಿಸಿಎಸ್ ಕಾಂಪ್ಲೆಕ್ಸ್ ಆವರಣದಲ್ಲಿ ಗಾಂಜಾ ಸೊಪ್ಪು ಮಾರಾಟ ಮಾಡುತ್ತಿದ್ದ ಐವರನ್ನು ಬಂಧಿಸಿದರು. ಅವರಿಂದ 29.103 ಕೆಜಿ ತೂಕದ ಗಾಂಜಾ ಸೊಪ್ಪು ಹಾಗೂ ಮಾರುತಿ ಸ್ವಿಫ್ಟ್ (ಕೆಎಲ್ 58–ಬಿ 2983) ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಪತ್ತೆ ಕಾರ್ಯಾಚರಣೆಯಲ್ಲಿ ಬೈಲಕುಪ್ಪೆ ಠಾಣೆ ಸಿಬ್ಬಂದಿಗಳಾದ ಕುಮಾರಸ್ವಾಮಿ, ವೀರೇಂದ್ರಕುಮಾರ್, ಮಹದೇವಪ್ಪ, ಮುದ್ದುರಾಜ್, ಚೇತನ್ ಕುಮಾರ್, ಸುರೇಶ್, ರಾಜೇಶ್, ಗೋಪಾಲ, ಪ್ರದೀಪ್ ಪಾಲ್ಗೊಂಡಿದ್ದರು.

ನಕಲಿ ದಾಖಲೆ ಸೃಷ್ಟಿಸಿ ವಂಚನೆ ಬಯಲಾದರೆ ನೋಂದಣಿ ರದ್ದು ಅಧಿಕಾರ ಜಿಲ್ಲಾ ನೋಂದಣಾಧಿಕಾರಿಗೆ

● ಕಂದಾಯ ಸಚಿವ ಕೃಷ್ಣಭೈರೇಗೌಡ ● ಸದ್ಯದಲ್ಲೇ ಕಾನೂನಿಗೆ ತಿದ್ದುಪಡಿ ನಿರ್ಧಾರ



ಮೈಸೂರು, ಆ.8(ಎಂಕೆ)– ನಕಲಿ ದಾಖಲೆ ಸೃಷ್ಟಿಸಿ ವಂಚನೆ ಮಾಡುವವರಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ತಂದು ಜಿಲ್ಲಾ ನೋಂದಣಾಧಿಕಾರಿಗಳಿಗೆ ರಿಜಿಸ್ಟ್ರೇಷನ್ ರದ್ದುಗೊಳಿಸುವ ಅಧಿಕಾರ ನೀಡಲಾಗುವುದು. ಈ ತಿದ್ದುಪಡಿಯು ರಾಷ್ಟ್ರಪತಿಗಳ ಅಂಕಿತವಾದ ನಂತರ ಜಾರಿಯಾಗಲಿದೆ ಎಂದು ಕಂದಾಯ ಇಲಾಖೆ ಸಚಿವ ಕೃಷ್ಣಭೈರೇಗೌಡ ತಿಳಿಸಿದರು.

ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ, ಅವುಗಳ ಆಧಾರದ ಮೇಲೆ ಆಸ್ತಿ ನೋಂದಣಿ ಹಾಗೂ ಖಾತೆಯನ್ನೇ ನಕಲು ಮಾಡಿ ರಿಜಿಸ್ಟ್ರೇಷನ್ ಮಾಡಿರುವ ಉದಾಹರಣೆಗಳು ಇವೆ. ಈ ರೀತಿ ನಕಲಿ ದಾಖಲೆಗಳ ಮೂಲಕ ಆಗಿರುವ

> **ಬೀಟ್ ಸಿಸ್ಟಂ ಅಳವಡಿಕೆ...**
>
> ಸರ್ಕಾರಿ ಭೂಮಿ ಒತ್ತುವರಿ ತಡೆಗಟ್ಟುವ ನಿಟ್ಟಿನಲ್ಲಿ ಬೀಟ್ ಸಿಸ್ಟಂ ಅಳವಡಿಸಲು ಚಿಂತನೆ ನಡೆಸಲಾಗಿದೆ. ಗ್ರಾಮ ಲೆಕ್ಕಿಗರು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಮೀನಿನ ಮಾಹಿತಿಯನ್ನು ಇಟ್ಟುಕೊಂಡಿರಬೇಕು. ಅವರಿಗೆ ಒಂದು ಆ್ಯಪ್ ನೀಡಲಿದ್ದು, ಜಮೀನಿನ ಸ್ಥಳಕ್ಕೆ ಹೋಗಿ ಅಲ್ಲಿಂದ ಫೋಟೋ ಅಥವಾ ವಿಡಿಯೋ ಮಾಡಿ ಅಪ್‌ಲೋಡ್ ಮಾಡಬೇಕು. ಹಾಗೆಯೇ ಅಲ್ಲಿನ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಲ್ಲ ಎಂದು ಆ್ಯಪ್ ಮೂಲವೇ ದೃಢೀಕರಿಸಬೇಕು. ಇದನ್ನು ಬೀಟ್ ಸಿಸ್ಟಂ ಅಥವಾ ಕಾವಲು ವ್ಯವಸ್ಥೆ ಎಂದು ಹೇಳಲಾಗಿದ್ದು, ಜಾರಿಗೊಳಿಸುವ ಚಿಂತನೆಯಲ್ಲಿದ್ದೇವೆ.
> – ಕೃಷ್ಣಭೈರೇಗೌಡ, ಕಂದಾಯ ಸಚಿವ

ರಿಜಿಸ್ಟ್ರೇಷನ್‌ಗಳನ್ನು ವಜಾ ಮಾಡಬೇಕು ಎಂದರೆ ನೊಂದವರು ಕೋರ್ಟ್‌ಗೆ ಐದಾರು ವರ್ಷ ಅಲೆದಾಡಬೇಕಾಗುತ್ತದೆ. ಆದ್ದರಿಂದ ನಕಲಿ ದಾಖಲೆ ಸೃಷ್ಟಿಸಿ ವಂಚನೆ ಮಾಡುವವರಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ಮಾಡಿ, ಜಿಲ್ಲಾ ನೋಂದಣಿ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಅವರು, ನಕಲಿ ದಾಖಲೆಗಳ ರಿಜಿಸ್ಟ್ರೇಷನ್ ಆಗಿದೆ ಎಂಬುದು ಅವರ ಗಮನಕ್ಕೆ ಬಂದಲ್ಲಿ ಕೂಡಲೇ ಅದನ್ನು ವಜಾ ಮಾಡುವ ಅಧಿಕಾರವನ್ನು ನೀಡಲಾಗಿದೆ. ಇದರಿಂದ ದುರ್ಬಳಕೆ ಮಾಡಿಕೊಳ್ಳುವವರಿಗೆ ಕಡಿವಾಣ ಬೀಳಲಿದ್ದು, ರಾಷ್ಟ್ರಪತಿಗಳ ಅಂಕಿತವಾದ ನಂತರ ಜಾರಿಯಾಗಲಿದೆ ಎಂದರು.


ಎಲ್ಲವೂ ಆನ್‌ಲೈನ್: ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ನೋಂದಣಿ ಸಂಬಂಧ ಕಾವೇರಿ 2ನೇ ಹಂತದ (ಸಾಫ್ಟ್‌ವೇರ್) ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿದೆ. ಈ ಮೊದಲು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಗಂಟೆಗಟ್ಟಲೇ ಕಾಯಬೇಕಾಗಿತ್ತು. ಆದರೀಗ ಆನ್‌ಲೈನ್ ಮೂಲಕ ಅರ್ಜಿ ಅಪ್‌ಲೋಡ್ ಮಾಡಬಹುದು. ಸಲ್ಲಿಕೆಯಾದ ಅರ್ಜಿ ಪರಿಶೀಲಿಸುವ ಸಬ್ ರಿಜಿಸ್ಟ್ರಾರ್ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲನೆ ಮಾಡಿ ಒಪ್ಪಿಗೆ ನೀಡುತ್ತಾರೆ. ನಂತರ ಆನ್‌ಲೈನ್ ಮೂಲಕವೇ ನೋಂದಣಿ ಶುಲ್ಕ ಎಷ್ಟೆಂಬುದು ಸಂದೇಶದ ಮೂಲಕ ಅರ್ಜಿದಾರರಿಗೆ ರವಾನೆಯಾಗುತ್ತದೆ. ಬಳಿಕ ಅರ್ಜಿದಾರರು ಯಾವಾಗಬೇಕಾದರೂ ಸಬ್ ರಿಜಿಸ್ಟರ್ ಕಚೇರಿಗೆ ತೆರಳಿ ರಿಜಿಸ್ಟರ್ ಪ್ರಕ್ರಿಯೆಯಲ್ಲಿ ಸಹಕರಿಸಿದರೆ ಕೇವಲ 30–40 ನಿಮಿಷದಲ್ಲಿ ನೋಂದಣಿ ಸಂಪೂರ್ಣವಾಗಲಿದೆ ಎಂದರು.

ಭೂ ಪರಿವರ್ತನೆ ರದ್ದು: ಹಾಗೆಯೇ ನಗರ ಪ್ರದೇಶಗಳಲ್ಲಿ ಭೂ ಪರಿವರ್ತನೆ ಸಂಬಂಧ ಇದ್ದಂತಹ ತೊಡಕುಗಳಿಗೆ ಕಾನೂನು ತಿದ್ದುಪಡಿ ಮಾಡಲಾಗಿದ್ದು, ಮಾಸ್ಟರ್ ಪ್ಲಾನ್ ಆಗಿರುವ ಭೂಮಿಯನ್ನು ಪ್ಲಾನ್ ಅನುಸಾರ ಉಪಯೋಗಿಸಲು ಭೂ ಪರಿವರ್ತನೆ ಅಗತ್ಯವಿಲ್ಲವೆಂದು ಎಂದು ಭೂ ಪರಿವರ್ತನೆಯನ್ನು ತೆಗೆದು ಹಾಕಿದ್ದೇವೆ. ಫಲಾನುಭವಿಗಳು ನೇರವಾಗಿ ನಗರ ಯೋಜನೆ(ಟೌನ್ ಪ್ಲಾನಿಂಗ್) ವಿಭಾಗಕ್ಕೆ ಹೋಗಿ ಶುಲ್ಕ ಪಾವತಿಸಿ, ಅನುಮತಿ ಪಡೆಯಬಹುದು ಎಂದು ತಿಳಿಸಿದರು.

ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ: ಹಾಗೆಯೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರಿಗೆ ಸರ್ಕಾರದಿಂದ ಮಂಜೂರಾದ ಜಮೀನುಗಳನ್ನು ಅನುಮತಿ ಇಲ್ಲದೆ ಮಾರಾಟ ಮಾಡುವುದನ್ನು ನಿರ್ಬಂಧಿಸಲಾಗಿತ್ತು. ಆದರೆ, ಅಕ್ರಮ ಪರಭಾರೆಯನ್ನು ಪ್ರಶ್ನಿಸಿ ಮನವಿ ಸಲ್ಲಿಸುವುದಕ್ಕೆ ಪಿಟಿಸಿಎಲ್ ಕಾಯ್ದೆಯಲ್ಲಿ ಕಾಲಮಿತಿ ನಿಗದಿಪಡಿಸಿರಲಿಲ್ಲ. ಕಾಯ್ದೆಯಲ್ಲಿ ಮೇಲ್ಮನವಿ ಸಲ್ಲಿಸುವುದಕ್ಕೆ ಕಾಲಮಿತಿ ನಿಗದಿಪಡಿಸಿದಿದ್ದರೆ ಅರ್ಜಿಗಳು ಮಾನ್ಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಇದರಿಂದ ದುರ್ಬಲವಾಗಿದ್ದ ಪಿಟಿಸಿಎಲ್ ಕಾಯ್ದೆಗೆ ತಿದ್ದಪಡಿ ಮಾಡುತ್ತೇವೆ ಎಂದು ಕಳೆದ ಸರ್ಕಾರ ಹೇಳಿಕೊಂಡು ಬಂದಿತ್ತೇ ಹೊರತು ಮಾಡಿರಲಿಲ್ಲ. ಬಜೆಟ್‌ನಲ್ಲಿ ಘೋಷಣೆ ಮಾಡಿ ಅಲ್ಲಿಗೆಯೇ ಮುಗಿಸಿದ್ದರು. ಆದರೆ, ನಾವು ಅಧಿಕಾರಕ್ಕೆ ಬಂದ ಕೂಡಲೇ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ಮಾಡುತ್ತೇವೆ ಎಂದು ಭರವಸೆ ನೀಡಿದ್ದೆವು. ಅದರಂತೆ ಕಳೆದ ಅಧಿವೇಶನದಲ್ಲಿಯೇ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವರ್ಗಕ್ಕೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಿದ್ದೇವೆ ಎಂದರು.

ಸರ್ವರ್ ಡೌನ್: ಇಸಿ ಸೇರಿದಂತೆ ಇನ್ನಿತರೆ ದಾಖಲೆಗಳನ್ನು ಪಡೆದುಕೊಳ್ಳಲು ಸರ್ವರ್ ಡೌನ್ ಸಮಸ್ಯೆ ಹೆಚ್ಚಾಗಿರುವ ಸಂಬಂಧ ಸರ್ವರ್ ಡೌನ್ ಎಂಬುದು ಆಯಾ ಜಿಲ್ಲೆಯಲ್ಲಿನ ಸಂಪರ್ಕದಲ್ಲಿ ಉಂಟಾಗುವ ಸಮಸ್ಯೆಯಾಗಿದೆ. ಇದರ ಬಗ್ಗೆ ಗಮನ ಹರಿಸಲಾಗುವುದು ಎಂದರು.

ಕಂದಾಯ ಸಚಿವರಿಗೆ ಅಭಿನಂದನೆ; ರೆವಿನ್ಯೂ ಬಡಾವಣೆ ಸಕ್ರಮಕ್ಕೆ ಮನವಿ



ಮೈಸೂರು, ಆ.8(ಎಂಕೆ)– ವಿಭಾಗೀಯ ಮಟ್ಟದ ಅಧಿಕಾರಿಗಳ ಸಭೆ ಹಿನ್ನೆಲೆ ಮೈಸೂರಿಗೆ ಆಗಮಿಸಿದ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರನ್ನು ಇಂದಿರಾ ಗಾಂಧಿ ಬ್ಲಾಕ್ ವತಿಯಿಂದ ಸನ್ಮಾನಿಸಲಾಯಿತು. ಇದೇ ವೇಳೆ ಮೈಸೂರು ನಗರದಲ್ಲಿರುವ ರೆವಿನ್ಯೂ ಬಡಾವಣೆಗಳನ್ನು ಸಕ್ರಮಗೊಳಿಸಿ, ನಿವೇಶನದಾರರಿಗೆ ಆಗುತ್ತಿರುವ ತೊಂದರೆಗಳ ನಿವಾರಿಸುವಂತೆ ಮನವಿ ಸಲ್ಲಿಸಲಾಯಿತು. ಇಂದಿರಾ ಬ್ಲಾಕ್ ಪ್ರಧಾನ ಕಾರ್ಯದರ್ಶಿ ಎನ್.ರವಿ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಲೋಕನಾಯಕನಗರ ವಾರ್ಡ್ ಅಧ್ಯಕ್ಷ ಕೇಬಲ್ ನಾಗರಾಜು ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ರೋಗಿ : ಚೀಟಿಯಲ್ಲಿದ್ದ ಎಲ್ಲಾ ಮಾತ್ರೆ ಸಿಕ್ಕಿತು. ಆದ್ರೆ ಚೀಟಿ ಹಿಂದೆ ಬರ್ದಿದ್ದು, ಎಲ್ಲೂ ಸಿಗಲಿಲ್ಲ ಸಾರ್.

ಡಾಕ್ಟರ್ : ರೀ ಅದು ಮಾತ್ರೆ ಹೆಸರು ಅಲ್ಲ ಮಾರಾಯ, ಪೆನ್ನು ಬರೀಲಿಲ್ಲ ಅಂತ ಗೀಚಿದ್ದು.

ಮೈಸೂರು ಮಿತ್ರ
ಬುಧವಾರ, 9 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿ:!! ನಹಿ ಸತ್ಯಾತ್ಪರೋ ಧರ್ಮ:!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಗೆಲುವು ದ್ವೇಷಕ್ಕೆ ಕಾರಣವಾಗುವುದು. ಸೋತವನು ದುಃಖಕ್ಕೊಳಗಾಗುವನು. ಶಾಂತಿಯಿಂದ ಕೂಡಿರುವವನು ಸೋಲು–ಗೆಲುವುಗಳನ್ನು ತ್ಯಜಿಸಿ ಆನಂದದಿಂದ ಜೀವಿಸುವನು. –ಭಗವಾನ್ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೇಸರಿಸಬಾರದು, ಅವಸರ ಮಾಡಬಾರದು

ನಿಮ್ಮ ಪತ್ರಗಳು

ಗ್ರಾಮ ನ್ಯಾಯಾಲಯಗಳು ಸ್ಥಾಪನೆಯಾಗಲಿ

ಮಾನ್ಯರೆ,

ಪ್ರಾಚೀನ ಗಾದೆಯ ಪ್ರಕಾರ ಗೆದ್ದವರು ಸೋತಂತೆ, ಸೋತವರು ಸತ್ತಂತೆ ಎನ್ನುವುದು ನ್ಯಾಯಾಲಯಗಳಿಗೆ ಸಂಬಂಧಿಸಿದ್ದಾಗಿದೆ. ಯಾವುದೇ ಅಪರಾಧಕ್ಕೆ ತಕ್ಕ ಶಿಕ್ಷೆಯಾಗಬೇಕೆಂದರೆ ಆ ಅಪರಾಧಗಳನ್ನು ಪ್ರಶ್ನಿಸಲು ವೇದಿಕೆ ಬೇಕಾಗುತ್ತದೆ. ಈ ವೇದಿಕೆಯನ್ನು ನ್ಯಾಯಾಲಯ ಎಂದೂ ಕರೆಯಲಾಗುತ್ತದೆ.

ಭಾರತದಲ್ಲಿ ತಾಲೂಕು, ಜಿಲ್ಲಾ, ರಾಜ್ಯ ಮತ್ತು ದೇಶದಲ್ಲಿ ಜಿಲ್ಲಾ ಕೋರ್ಟ್, ಹೈಕೋರ್ಟ್, ಸುಪ್ರೀಂಕೋರ್ಟ್‌ಗಳಿವೆ. ಪ್ರಕರಣಗಳ ತೀವ್ರತೆಗನುಗುಣವಾಗಿ ಮತ್ತು ತೀರ್ಪನ್ನು ಪ್ರಶ್ನಿಸಲು ಮೇಲಿನ ನ್ಯಾಯಾಲಯಗಳು ಅವಕಾಶ ಮಾಡಿಕೊಡುತ್ತವೆ.

ಪ್ರಾಚೀನ ಕಾಲದಲ್ಲಿ ಗ್ರಾಮದ ಮುಖ್ಯಸ್ಥರು, ಶಾನುಭೋಗರು, ಪಟೇಲರು, ಗೌಡರು ಪಂಚಾಯಿತಿ ನಡೆಸುವ ಮೂಲಕ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು. ಈ ವ್ಯವಸ್ಥೆ ಕೆಲವು ಹಳ್ಳಿಗಳಲ್ಲಿ ಈಗಲೂ ಇದೆ. ಆದರೆ ಬದಲಾದ ಕಾಲಘಟ್ಟದಲ್ಲಿ ಸಣ್ಣಪುಟ್ಟ ಜಗಳಗಳಿಗೆ ನ್ಯಾಯಾಲಯದ ಮೆಟ್ಟಿಲೇರುತ್ತಿರುವುದು ಜನರನ್ನು ಆರ್ಥಿಕವಾಗಿ ಕುಗ್ಗಿಸುತ್ತಿದೆ. ಗ್ರಾಮಗಳ ಜನರ ಅನುಕೂಲಕ್ಕಾಗಿ ಭಾರತೀಯ ಕಾನೂನು ಆಯೋಗವು ತನ್ನ 114ನೇ ವರದಿಯಲ್ಲಿ ನಾಗರಿಕರಿಗೆ ಅವರ ಮನೆ ಬಾಗಿಲಿಗೆ ನ್ಯಾಯವನ್ನು ಕೈಗೆಟುಕುವ ಮತ್ತು ತ್ವರಿತ ಪ್ರವೇಶವನ್ನು ಒದಗಿಸಲು ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ಸೂಚಿಸಿದ್ದರೂ, ಗ್ರಾಮ ನ್ಯಾಯಾಲಯಗಳ ಸ್ಥಾಪನೆ ಆಮೆಗತಿಯಲ್ಲಿ ಸಾಗಿದೆ.

ರಾಜ್ಯದಲ್ಲಿ 6000ಕ್ಕೂ ಅಧಿಕ ಗ್ರಾಮ ಪಂಚಾಯತಿಗಳಿದ್ದು, ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಗ್ರಾಮ ನ್ಯಾಯಾಲಯಗಳು ಸ್ಥಾಪನೆಯಾದರೆ ಗ್ರಾಮೀಣ ಮಟ್ಟದಲ್ಲೇ ಪ್ರಕರಣಗಳ ಇತ್ಯರ್ಥವಾಗುತ್ತದೆ ಮತ್ತು ಮೇಲಿನ ನ್ಯಾಯಾಲಯಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ.

ಈಗಾಗಲೇ ಲಕ್ಷಾಂತರ ಪ್ರಕರಣಗಳು ಇತ್ಯರ್ಥವಾಗದೆ ಉಳಿದಿದ್ದು, ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವ ಮೂಲಕ ಮೇಲಿನ ಪ್ರಕರಣಗಳನ್ನು ಬಗೆಹರಿಸಲು ನ್ಯಾಯಾಲಯಗಳಿಗೆ ಹೆಚ್ಚಿನ ಸಮಯ ದೊರಕಿದಂತಾಗುತ್ತದೆ. ಗ್ರಾಮ ನ್ಯಾಯಾಲಯಗಳ ಮುಖ್ಯ ಪ್ರಯೋಜನವೆಂದರೆ ಸಾಮಾನ್ಯ ಜನರು ಲಕ್ಷಾಂತರ ಹಣವನ್ನು ಕೋರ್ಟ್‌ಗೆ ವ್ಯಯಿಸುವುದು ಉಳಿತಾಯವಾಗುತ್ತದೆ.

ರಾಜ್ಯ ಸರ್ಕಾರ ಶೀಘ್ರವಾಗಿ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ರಾಜ್ಯದ ಜನತೆಯ ಪರವಾಗಿ ಆಗ್ರಹಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ವ್ಹೀಲಿಂಗ್‌ಗೆ ಕಡಿವಾಣ ಹಾಕಿ

ಮಾನ್ಯರೆ,

ಮೈಸೂರಿನ ಕುವೆಂಪುನಗರ ಮತ್ತು ಮೈಸೂರು ಸುತ್ತಲಿನ ರಿಂಗ್ ರೋಡ್‌ಗಳಲ್ಲಿ ಕೆಲವು ಪಡ್ಡೆ ಹುಡುಗರು ಮತ್ತು ಕಾಲೇಜು ವಿದ್ಯಾರ್ಥಿಗಳು ದ್ವಿಚಕ್ರ ವಾಹನಗಳಲ್ಲಿ ವ್ಹೀಲಿಂಗ್ ಮಾಡುವುದು ಸರ್ವೇ ಸಾಮಾನ್ಯವಾಗಿದೆ.

ಸಂಜೆ ಐದರಿಂದ ಏಳು ಗಂಟೆಯ ಸಮಯದಲ್ಲಿ ಕಾಲೇಜು ಮುಗಿದ ನಂತರ ರಿಂಗ್ ರೋಡ್‌ಗಳಲ್ಲಿ 16 ರಿಂದ 20 ವರ್ಷ ವಯಸ್ಸಿನ ಕೆಲವು ಬೇಜವಾಬ್ದಾರಿ ಹುಡುಗರು ತಮ್ಮ ಪ್ರಾಣ ಭಯವೂ ಇಲ್ಲದೇ ಬೈಕ್ ವ್ಹೀಲಿಂಗ್ ಮಾಡುವುದರಲ್ಲಿ ತಮ್ಮ ಚಾಕಚಕ್ಯತೆ ಪ್ರದರ್ಶನ ಮಾಡುತ್ತಿರುತ್ತಾರೆ.

ಈ ರೀತಿ ಬೈಕ್ ವ್ಹೀಲಿಂಗ್ ಮಾಡುವವರನ್ನು, ನಾಲ್ಕೈದು ಜನ ಆತನ ಸ್ನೇಹಿತರು ಕೇಕೆ, ಶಿಳ್ಳೆ ಹಾಕಿ ಪ್ರಚೋದಿಸುತ್ತಾರೆ. ಜೊತೆಗೆ ಇದನ್ನು ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ ಮಾಡಿ, ಅವರ ಸ್ನೇಹಿತರ ಮೊಬೈಲ್‌ಗಳಿಗೆ, ವಾಟ್ಸಾಪ್ ಮತ್ತು ಫೇಸ್‌ಬುಕ್‌ನಲ್ಲಿ ಹಾಕಿ ಖುಷಿ ಪಡುತ್ತಾರೆ. ಬೈಕ್ ವ್ಹೀಲಿಂಗ್ ಮಾಡುವ ಸಮಯದಲ್ಲಿ ಈ ರಸ್ತೆಗಳಲ್ಲಿ ಸಾರ್ವಜನಿಕರು ಓಡಾಡಲು ಭಯ ಪಡುತ್ತಾರೆ, ಪೊಲೀಸರಿಗೆ ದೂರು ನೀಡಲು ಈ ಬೈಕ್‌ಗಳಿಗೆ ನಂಬರ್ ಪ್ಲೇಟ್‌ಗಳೇ ಇರುವುದಿಲ್ಲ. ಈ ಬಗ್ಗೆ ಪೊಲೀಸರು ಗಮನ ಹರಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ತಂಗುದಾಣಕ್ಕೆ ಬೆಳಕಿನ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಆಕಾಶವಾಣಿಯ ಪಕ್ಕದಲ್ಲಿರುವ, ಅಂಚೆ ಕಚೇರಿಯ ಎಡಭಾಗ ಮತ್ತು ಎದುರುಗಡೆ ಎರಡು ತಂಗುದಾಣಗಳಿರುತ್ತವೆ. ಈ ಎರಡೂ ತಂಗುದಾಣಗಳಲ್ಲಿ ಬೆಳಕಿನ ಸೌಲಭ್ಯವಿರುವುದಿಲ್ಲ. ಈ ಕಾರಣದಿಂದಾಗಿ ಪ್ರಯಾಣಿಕರು ಪ್ರತಿದಿನವೂ ಕತ್ತಲಿನಲ್ಲೇ ಬಸ್ಸಿಗಾಗಿ ಕಾಯಬೇಕಾಗಿದೆ. ಈ ಪ್ರದೇಶದ ಸುತ್ತಮುತ್ತ ಅನೇಕ ಕಚೇರಿ ಮತ್ತು ಕಾರ್ಖಾನೆಗಳಿದ್ದು, ಮಹಿಳಾ ಪ್ರಯಾಣಿಕರನ್ನೊಳಗೊಂಡಂತೆ ಸಾಕಷ್ಟು ಸಂಖ್ಯೆಯ ಪ್ರಯಾಣಿಕರು ಈ ತಂಗುದಾಣ ಅವಲಂಬಿತರಾಗಿದ್ದಾರೆ. ಆದ ಕಾರಣ ಸಂಬಂಧಪಟ್ಟ ಕ್ಷೇತ್ರದ ಶಾಸಕರು, ನಗರ ಪಾಲಿಕೆ ಸದಸ್ಯರು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಈ ಎರಡೂ ತಂಗುದಾಣಗಳಿಗೆ ಬೆಳಕಿನ ಸೌಲಭ್ಯ ಕಲ್ಪಿಸಬೇಕೆಂದು ಮನವಿ.

– ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ಕೌರವ!

ಮಾನ್ಯರೆ,

ಅತ್ಯಾಚಾರಮಯವಾಯಿತೇ ದೇಶ! ('ಅತ್ಯಾಚಾರ ಭಾರತ' ಎನ್ನಬಹುದೆ?) ಹಾಡು–ಹಗಲೇ ಹೆಣ್ಣನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡುವುದು, ಸಾಲದ್ದಕ್ಕೆ ಅತ್ಯಾಚರಿಸುವುದು (ಕೆಲವೊಮ್ಮೆ ಹತ್ಯೆಗೈಯುವುದು) ಈಗಿನ ಘೋರ ಧಾರುಣ ಸಂಗತಿಗಳು! ಪುರುಷ ನಗ್ನತೆಯನ್ನು ಎಲ್ಲರೂ ನೋಡಬಹುದು : ಗೊಮ್ಮಟನನ್ನು ಲೋಕವೆಲ್ಲ ನೋಡುವುದಿಲ್ಲವೆ? ಆದರೆ ಸ್ತ್ರೀ ನಗ್ನತೆಯ ನೋಟ ಅಸಹನೀಯ, ಶೋಚ್ಯ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" (ಎಲ್ಲಿ ನಾರಿಯರಿಗೆ ಗೌರವವೋ ಅಲ್ಲಿ ದೇವತೆಗಳು ನಲಿಯುತ್ತಾರೆ). ಈಗ ಗೌರವವಿಲ್ಲ, ಬರಿಯ ಕೌರವ! ದೆವ್ವಗಳ ನಲಿತ; ಕುಣಿತ. ಅಂತೂ ಹೆಣ್ಣ ಬಲಾತ್ಕಾರ ಬೆತ್ತಲೆಯಿಂದ ಮತ್ತೆ 'ಕತ್ತಲ ಯುಗ'ದ ನಿರ್ಮಾಣವೆ?

ಪಟ್ಟಿಗಳು : ಈಗ ಬಹುಪಾಲು ಕಾರ್ಯಕ್ರಮ, ಸಮಾರಂಭಗಳ ಪತ್ರಿಕಾ ವರದಿಗಳಲ್ಲಿ ಒಂದು ವಿಶೇಷ ಕಂಡುಬರುತ್ತದೆ. ವರದಿಯ ಮೊದಲರ್ಧ (ಅಥವಾ ಕಾಲುಭಾಗ) ಮಾತ್ರ ಮುಖ್ಯ ಭಾಷಣಕಾರರ ಮಾತು, (ಕೆಲವೊಮ್ಮೆ ಅದೇ ತಲೆಬರಹ); ಉಳಿದರ್ಧ ಎಲ್ಲ ಉಪಸ್ಥಿತರ ಹೆಸರುಗಳ ಉದ್ದ ಪಟ್ಟಿ! ಪ್ರಾಶಸ್ತ್ಯವಿರಲಿ ಪಟ್ಟಿಗಳ ಬದಲು (ಅಥವಾ ಜೊತೆಗೆ) 'ಪಟ್ಟ'ಕ್ಕೆ ಉಸಿರು ಮುಖ್ಯ, ಹೆಸರುಗಳಲ್ಲ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.




ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಪ್ರಸಿದ್ಧ ಗೋಕಾಕ ವರದಿಯ ರೂವಾರಿ ಡಾ.ವಿ.ಕೃ.ಗೋಕಾಕ್

ಆಗಸ್ಟ್ 9 ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ವಿ.ಕೃ.ಗೋಕಾಕ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ವಿನಾಯಕ ಕೃಷ್ಣ ಗೋಕಾಕರು
ವಿದ್ವತ್ ಪ್ರಪಂಚದ ಮೇರು
ವಿ.ಕೃ.ಗೋಕಾಕರೆಂದೇ ಪ್ರಸಿದ್ಧರು
ವೀಣಾ ಪಾಣಿಯ ಸಿರಿ ಪುತ್ರರು
ವಿವಿಧ ಸಾಹಿತ್ಯ ಸೃಷ್ಟಿಕರ್ತರು
ವಿಶ್ವದೆತ್ತರ ಕನ್ನಡ ಕಟ್ಟಿದವರು!



ವಿನಾಯಕ ಕೃಷ್ಣ ಗೋಕಾಕ್ ಎಂದು ಹೇಳಿದರೆ ಸುಲಭಕ್ಕೆ ಎಲ್ಲರಿಗೂ ಗೊತ್ತಾಗದೇ ಇರಬಹುದು. ಆದರೆ 'ಗೋಕಾಕ್ ವರದಿ' ಎಂದರೆ ಅಥವಾ 'ಗೋಕಾಕ್ ಚಳವಳಿ' ಎಂದರೆ ಇಡೀ ನಾಡಿಗೆ ಅವರು ಗೊತ್ತಾಗುತ್ತಾರೆ. ಏಕೆಂದರೆ ಗೋಕಾಕ್ ವರದಿಯ ರೂವಾರಿಯೇ ವಿನಾಯಕ ಕೃಷ್ಣ ಗೋಕಾಕರು. ಅವರು ವಿ.ಕೃ. ಗೋಕಾಕ್ ಎಂದೇ ಪ್ರಸಿದ್ಧರು. ಅಂದ ಹಾಗೆ 'ವಿನಾಯಕ' ಎಂಬುದು ಅವರ ಕಾವ್ಯನಾಮ. ಕರ್ನಾಟಕ ಸರ್ಕಾರ 1980 ರಲ್ಲಿ ಪ್ರೌಢಶಾಲಾ ವ್ಯಾಸಂಗದಲ್ಲಿ ಭಾಷೆಗಳ ಸ್ಥಾನಮಾನ ಕುರಿತು ವರದಿ ನೀಡಲು ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತ್ತು. ಆಗ ಗೋಕಾಕರ ಕನ್ನಡ ಭಾಷಾಭಿಮಾನದ ಪ್ರತೀಕವಾಗಿ ಈ ಸಮಿತಿ ನೀಡಿದ ವರದಿ ಕನ್ನಡ ಭಾಷೆ ಮತ್ತು ಶಿಕ್ಷಣದ ಪರವಾಗಿತ್ತು. ಈ ವರದಿಯನ್ನು ಅಂಗೀಕರಿಸಲು ಸರ್ಕಾರ ಹಿಂದೆ ಮುಂದೆ ನೋಡಿ ಮೀನಾಮೇಷ ಎಣಿಸುತ್ತಾ ಕನ್ನಡ ಭಾಷಾ ಶಿಕ್ಷಣಕ್ಕೆ ಪೂರಕವಾದ ಗೋಕಾಕ್ ವರದಿಯನ್ನು ಜಾರಿಗೊಳಿಸದೇ ಹೋದಾಗ ಈ ವರದಿಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಸಮಸ್ತ ಕನ್ನಡ ಜನತೆ ಒಕ್ಕೊರಲಿನಿಂದ ಬೀದಿಗಿಳಿದು ಚಳವಳಿ ನಡೆಸಿತು. ಕನ್ನಡನಾಡಿನ ಇತಿಹಾಸದಲ್ಲಿಂದು 'ಗೋಕಾಕ್ ಚಳವಳಿ' ಎಂದೇ ದಾಖಲಾಗಿದೆ.

ವರನಟ, ನಟಸಾರ್ವಭೌಮ ಡಾ. ರಾಜಕುಮಾರ್ ಅವರಂತಹ ಮೇರು ವ್ಯಕ್ತಿಗಳ ನೇತೃತ್ವದಲ್ಲಿ ನಡೆದ ಗೋಕಾಕ್ ಚಳವಳಿಯನ್ನು ಕನ್ನಡ ನಾಡು ಯಾವತ್ತೂ ಮರೆಯುವಂತೆಯೇ ಇಲ್ಲ. ಕನ್ನಡಿಗರನ್ನು ಬಡಿದೆಬ್ಬಿಸಿದ ಅಂಥಾ ಶಕ್ತಿಯುತ ಚಳವಳಿ ಇದು. ಇದಕ್ಕೆ ಧೀಶಕ್ತಿಯೇ ಗೋಕಾಕರು. ಗೋಕಾಕ್ ಚಳವಳಿ ಕನ್ನಡಿಗರಲ್ಲಿ ಭಾಷಾಭಿಮಾನದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಕನ್ನಡದ ಕಿಚ್ಚನ್ನು, ಕೆಚ್ಚನ್ನು ಹೆಚ್ಚಿಸಿತು. ಹಾಗೆಯೇ ಗೋಕಾಕರು ಸ್ವತಃ ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿ ಕನ್ನಡದ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಅವರು ತಮ್ಮ ಕನ್ನಡಪರ ಹೋರಾಟ ಹಾಗೂ ಬರಹ ಮತ್ತು ಬೋಧನೆಗಳಿಂದ ಕನ್ನಡದ ಘನತೆಯನ್ನು ಹೆಚ್ಚಿಸಿದವರು. ಹಾಗೆಯೇ ಗೋಕಾಕ್ ವರದಿಯಲ್ಲಿ ಕನ್ನಡಕ್ಕೆ ಶಾಲಾ ಶಿಕ್ಷಣದಲ್ಲಿ ಸಲ್ಲಬೇಕಾದ ಸ್ಥಾನವನ್ನು, ಗೌರವವನ್ನು ಹಾಗೂ ಘನತೆಯನ್ನು ತಂದುಕೊಟ್ಟವರು. ಇದು ಅವರಿಗಿದ್ದ ಕನ್ನಡದ ಮೇಲಿನ ಎಣೆಯಿಲ್ಲದ ಪ್ರೀತಿಗೆ ಒಂದು ಸಣ್ಣ ಸಾಕ್ಷಿಯಷ್ಟೇ.

ಹೋರಾಟಕ್ಕೂ ಸೈ, ಬರಹಕ್ಕೂ ಸೈ, ಭಾಷಣಕ್ಕೂ ಸೈ, ಬೋಧನೆಗೂ ಸೈ, ಸಂಶೋಧನೆಗೂ ಸೈ ಎನ್ನುವಂತಿದ್ದ ವಿನಾಯಕ ಕೃಷ್ಣ ಗೋಕಾಕರು ಕನ್ನಡಕ್ಕೆ ಐದನೆಯ ಜ್ಞಾನಪೀಠ ಪ್ರಶಸ್ತಿಯನ್ನು 1996ರಲ್ಲಿ ತಂದುಕೊಟ್ಟವರು. ತನ್ಮೂಲಕ ಕನ್ನಡದ ಹಿರಿಮೆಯನ್ನು ರಾಷ್ಟ್ರ ಮಟ್ಟದಲ್ಲಿ ಮೆರೆಸಿದವರು. ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವ ಪಡೆದಿದ್ದ ಅವರು ತಮ್ಮ ಜೀವಿತ ಕಾಲದಲ್ಲೇ ಒಬ್ಬ ಪ್ರತಿಭಾವಂತ ಸಾಹಿತಿಗೆ ದೊರಕಬೇಕಾದ ಎಲ್ಲ ಸಿದ್ಧಿ–ಪ್ರಸಿದ್ಧಿಗಳನ್ನು ಪಡೆದು ಎಲ್ಲಾ ರೀತಿಯ ಕೀರ್ತಿ ಕಳಸ ಗಳಿಂದ ಕನ್ನಡಮ್ಮನ ಮಡಿಲನ್ನು ತುಂಬಿದವರು ಗೋಕಾಕರು. ಇದಕ್ಕೂ ಮೊದಲು ಪ್ರತಿಷ್ಠಿತ ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿದ್ದ ಅವರು ಅಲ್ಲೂ ಕೂಡ ತಮ್ಮ ಛಾಪನ್ನು ಮೂಡಿಸಿದ್ದರು.

ವಿನಾಯಕ ಕೃಷ್ಣ ಗೋಕಾಕರು 1909 ಆಗಸ್ಟ್ 9ರಂದು ಅವಿಭಜಿತ ಧಾರವಾಡ ಜಿಲ್ಲೆಯ (ಇಂದಿನ ಹಾವೇರಿ ಜಿಲ್ಲೆ) ಸವಣೂರಿನಲ್ಲಿ ಜನಿಸಿದರು. ಅವತ್ತಿನ ಕಾಲಕ್ಕೆ ಅವರ ತಂದೆ ಕೃಷ್ಣರಾಯರು ಆ ಭಾಗದಲ್ಲಿ ಖ್ಯಾತ ವಕೀಲರಾಗಿದ್ದರು. ವಿನಾಯಕ ಗೋಕಾಕರು ಹುಟ್ಟಿದ ಕಾಲಕ್ಕೆ ಸವಣೂರು ಒಂದು ಸಣ್ಣ ಸಂಸ್ಥಾನವಾಗಿದ್ದು ಓರ್ವ ನವಾಬನ ಆಡಳಿತಕ್ಕೆ ಒಳಪಟ್ಟಿತ್ತು. ವಿನಾಯಕ ಗೋಕಾಕರ ವಿದ್ಯಾಭ್ಯಾಸ ಸವಣೂರು , ಧಾರವಾಡಗಳಲ್ಲಿ ನಡೆಯಿತು. ಅವರಿಗೆ ಸುಕೃತವೆಂಬಂತೆ ಕನ್ನಡದ ವರಕವಿ ಬೇಂದ್ರೆಯವರ ಸಂಪರ್ಕ ಒದಗಿ ಬಂದಿತ್ತು. ಹಾಗಾಗಿ ಸಾಹಿತ್ಯಾಸಕ್ತರಾಗಿದ್ದ ಗೋಕಾಕರ ಸಾಹಿತ್ಯ ಕೃಷಿಗೆ ವಿದ್ಯಾರ್ಥಿ ದಿಸೆಯಲ್ಲೇ ಬೇಂದ್ರೆಯವರ ಮಾರ್ಗದರ್ಶನ ಹೆಚ್ಚಿನ ರೀತಿಯಲ್ಲಿ ದೊರೆತು ವರಕವಿಯ ಪ್ರೋತ್ಸಾಹದಿಂದ ವಿನಾಯಕರ ಸಾಹಿತ್ಯಕೃಷಿ ವಿದ್ಯಾರ್ಥಿ ಜೀವನದಲ್ಲೇ ಚಿಗುರಿ, ಅರಳಿ, ಬೆಳೆಯುತ್ತಾ ಹೋಯಿತು. ಕಾವ್ಯಗಾರುಡಿಗ ಬೇಂದ್ರೆ ಅವರು ತಮ್ಮ ಕಾವ್ಯ ಗುರುವೂ, ಮಾರ್ಗದರ್ಶಕರೂ, ಪ್ರೋತ್ಸಾಹಕರೂ ಆಗಿದ್ದರೆಂದು ಬಹಳಷ್ಟು ಕಡೆ ಗೋಕಾಕರೇ ಹೇಳಿಕೊಂಡಿದ್ದಾರೆ. ಈ ವಿಚಾರದಲ್ಲಿ ಅವರ ಗುರುಪ್ರೇಮ, ಗುರುಭಕ್ತಿ ಬಹು ದೊಡ್ಡದು. ಇಂಗ್ಲಿಷ್ ವಿಷಯದ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದ ಗೋಕಾಕರು ಕೂಡಲೇ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಉಪನ್ಯಾಸಕ ಹುದ್ದೆಗೆ ಆಯ್ಕೆಯಾಗಿದ್ದರು. ಅವರು ತಮ್ಮ ವೃತ್ತಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಹಾಗೆಯೇ ವೃತ್ತಿಯ ಜೊತೆಜೊತೆಯಲ್ಲೇ ಸಾಹಿತ್ಯ ಕೃಷಿಯನ್ನೂ ಅಷ್ಟೇ ಪ್ರೀತಿಯಿಂದ ಅಪ್ಪಿಕೊಂಡಿದ್ದರು. ವಿನಾಯಕ ಗೋಕಾಕರನ್ನು ಉಪನ್ಯಾಸಕರಾಗಿ ತಮ್ಮ ಕಾಲೇಜಿಗೆ ನೇಮಿಸಿಕೊಂಡಿದ್ದ ಫರ್ಗ್ಯೂಸನ್ ಕಾಲೇಜಿನ ಆಡಳಿತ ಮಂಡಳಿಯೇ ಅವರ ಮೇಧಾಶಕ್ತಿಗೆ ಮೆಚ್ಚಿ ಹೆಚ್ಚಿನ ಉನ್ನತ ವಿದ್ಯಾಭ್ಯಾಸಕ್ಕೆಂದು ಅವರನ್ನು ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಟ್ಟಿತು.

ವಿನಾಯಕ ಕೃಷ್ಣ ಗೋಕಾಕರು ಇಂಗ್ಲೆಂಡಿನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಬಹಳ ಆಸಕ್ತಿಯಿಂದ ಓದಿದರು. ಅಷ್ಟೇ ಅಲ್ಲ, ಬಹಳ ಆಳವಾಗಿ ತಲಸ್ಪರ್ಶಿಯಾಗಿ ಇಂಗ್ಲಿಷ್ ಸಾಹಿತ್ಯವನ್ನು ಅಧ್ಯಯನ ಮಾಡಿದರು. ಪರೀಕ್ಷೆಯನ್ನು ಮೊದಲ ದರ್ಜೆಯಲ್ಲಿ ಪಾಸು ಮಾಡಿ ಶಹಬಾಸ್‌ಗಿರಿ ಕೂಡ ಪಡೆದರು. ಹಾಗೆಯೇ ಇಂಗ್ಲೆಂಡ್‌ನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಕಲಿತು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದ ಮೊಟ್ಟ ಮೊದಲ ಭಾರತೀಯ ಎಂಬ ಕೀರ್ತಿಗೂ ಭಾಜನರಾದರು. ತಾವು ಅಂದುಕೊಂಡಿದ್ದ ಗುರಿಯನ್ನು ಸಾಧಿಸಿ ಇಂಗ್ಲೆಂಡಿನಿಂದ ಹಿಂತಿರುಗಿ ಬಂದ ಗೋಕಾಕರಿಗೆ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲರ ಹುದ್ದೆ ಅವರಿಗಾಗಿಯೇ ಕಾದಿತ್ತು. ಅದನ್ನು ಅವರು ಬಹಳ ಖುಷಿಯಿಂದಲೇ ಅಲಂಕರಿಸಿದರು. ಕಾಲೇಜಿನ ಆಡಳಿತ ಮಂಡಳಿ ಸಹ ಅವರನ್ನು ಬಹಳ ಅದ್ಧೂರಿಯಾಗಿ ಸ್ವಾಗತಿಸಿದರು. ಕ್ರಮೇಣ ಅವರು ಶಿಕ್ಷಣ ಕ್ಷೇತ್ರದಲ್ಲಿ ಆಲದ ಮರದಂತೆ ಬೆಳೆದು ಅಧ್ಯಾಪಕನಾದವನೊಬ್ಬನು ಏರಬಹುದಾದ ಅತ್ಯುನ್ನತ ಹುದ್ದೆಯಾದ ಕುಲಪತಿ ಸ್ಥಾನಕ್ಕೂ ಏರಿದರು. ಅವರು ಸಾಂಗ್ಲಿಯ ವಿಲ್ಲಿಂಗ್ಟನ್ ಕಾಲೇಜು, ಪುಣೆಯ ಫರ್ಗ್ಯೂಸನ್ ಕಾಲೇಜು, ಕೊಲ್ಹಾಪುರದ ರಾಜಾರಾಮ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್‌ನ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಕೇಂದ್ರ ಸಂಸ್ಥೆ, ಸಿಮ್ಲಾದಲ್ಲಿನ ಉನ್ನತ ಅಧ್ಯಯನ ಸಂಸ್ಥೆ ಇನ್ನೂ ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಶ್ರೀಸತ್ಯಸಾಯಿ ಉನ್ನತ ಅಧ್ಯಯನ ಸಂಸ್ಥೆಯ ಕುಲಪತಿಗಳಾಗಿದ್ದರು. ಜಪಾನ್, ಅಮೆರಿಕ, ಇಂಗ್ಲೆಂಡ್, ಬೆಲ್ಜಿಯಂ, ಗ್ರೀಸ್, ಪೂರ್ವ ಆಫ್ರಿಕ ಮೊದಲಾದ ದೇಶಗಳಿಗೆ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಹೋಗಿ ಬಂದ ಹೆಗ್ಗಳಿಕೆ ಇವರದ್ದು. ಶೈಕ್ಷಣಿಕ ಸೇವೆ ಮತ್ತು ಸಾಧನೆಯ ಜೊತೆಜೊತೆಯಲ್ಲೇ ಸಾಹಿತ್ಯ ಸೇವೆ ಮತ್ತು ಸಾಧನೆಯನ್ನು ಮಾಡುತ್ತಾ ಬಂದವರು ಅವರು. ಆದ್ದರಿಂದಾಗಿ ಅವರ ಮೌಲಿಕ ಸಾಹಿತ್ಯ ಕೃತಿಗಳು ಕೂಡ ವೇಗವಾಗಿ ಹರಿದುಬಂದವು.

ಇಂಗ್ಲೀಷ್ ಭಾಷೆಯಲ್ಲಿ ಅವರು ಬರೆದಿರುವ ಕೃತಿಗಳ ಸಂಖ್ಯೆ ಮೂವತ್ತಕ್ಕೂ ಹೆಚ್ಚು . ಇವು ಒಂದೊಂದು ಕೃತಿಗಳು ಸಾಹಿತ್ಯಾಭಿಮಾನಿಗಳ ಅಚ್ಚುಮೆಚ್ಚು. ವಿನಾಯಕ ಗೋಕಾಕರ ಮೊದಲ ಪ್ರಕಟಿತ ಕೃತಿ ಅಪರೂಪ ಎನಿಸುವ 'ಕಲೋಪಾಸಕರು' .ಅವರು ಸಮುದ್ರದ ಮೂಲಕ ಇಂಗ್ಲೆಂಡಿಗೆ ಹೋಗಿ ಬಂದ ಅನುಭವಗಳನ್ನು ಆಧರಿಸಿ ದಾಖಲಿಸಿದ ಕಾವ್ಯ ಕೃತಿ 'ಸಮುದ್ರಗೀತೆಗಳು' ಮತ್ತು 'ಸಮುದ್ರದಾಚೆಯಿಂದ' ಇವು ಮಹತ್ವಪೂರ್ಣ ಕೃತಿಗಳಾಗಿವೆ. 'ಸಮುದ್ರ ಗೀತೆಗಳು' ಕವನ ಸಂಕಲನದಲ್ಲಿರುವ 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಈ ಸಾಲು ಕನ್ನಡ ಕಾವ್ಯಲೋಕದಲ್ಲಿ ಅತ್ಯಂತ ಪ್ರಸಿದ್ಧವಾದದ್ದು. ಕನ್ನಡ ಕಾವ್ಯಲೋಕದಲ್ಲಿ 'ನವ್ಯ' ಎಂಬ ಹೊಸ ಮಾರ್ಗವು ಗೋಕಾಕರಿಂದಲೇ ಪ್ರಾರಂಭಗೊಂಡಿತೆಂಬ ಮಾತೂ ಉಂಟು. ಗೋಕಾಕರು ಕಾವ್ಯ, ನಾಟಕ, ಪ್ರಬಂಧ, ಪ್ರವಾಸ ಕಥನ, ವಿಮರ್ಶೆ, ಮಹಾಕಾವ್ಯ ಸೇರಿದಂತೆ ಬಹುತೇಕ ಸಾಹಿತ್ಯ ಪ್ರಕಾರಗಳಲ್ಲಿ ಹಲವಾರು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಮಹತ್ ಮತ್ತು ಬೃಹತ್ ಕಾದಂಬರಿಗಳಲ್ಲೊಂದಾದ 'ಸಮರಸವೇ ಜೀವನ' ಗೋಕಾಕರ ಬಹು ಮೌಲಿಕ ಕೃತಿ. 'ಜನನಾಯಕ' ಕೂಡ ಅವರ ಸುಪ್ರಸಿದ್ಧ ನಾಟಕ. 'ಭಾರತ ಸಿಂಧು ರಶ್ಮಿ' ವಿನಾಯಕರು ಸೃಷ್ಟಿಸಿದ ಮಹತ್ವಪೂರ್ಣವಾದ ಮಹಾಕಾವ್ಯ. ಹನ್ನೆರಡು ಖಂಡಗಳು, ಮೂವತ್ತೈದು ಸಾವಿರ ಸಾಲುಗಳ ಈ ಬೃಹತ್ ಮಹಾಕಾವ್ಯ ಋಗ್ವೇದ ಕಾಲದ ಜನಜೀವನದ ಚಿತ್ರಣವನ್ನು ಕುರಿತದ್ದು. ವಿಶ್ವಾಮಿತ್ರ ಈ ಮಹಾಕಾವ್ಯದ ನಾಯಕ. ಗೋಕಾಕರ ಈ ಮಹಾಕಾವ್ಯಕ್ಕೇ ಪ್ರತಿಷ್ಠಿತ 'ಜ್ಞಾನಪೀಠ ಪ್ರಶಸ್ತಿ' ಬಂದಿದೆ ಎಂದು ಬಹಳಷ್ಟು ಮಂದಿ ಭಾವಿಸಿದ್ದಾರೆ. ಆದರೆ ವಿನಾಯಕ ಗೋಕಾಕರ ಸಾಹಿತ್ಯದ ಜೀವಮಾನ ಸಾಧನೆಗಾಗಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು 1969ರಿಂದ 1984ರ ಅವಧಿಯಲ್ಲಿ ನೀಡಿದ ಅಮೋಘ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಹೇಳಿದೆ. ಸಾಮಾನ್ಯವಾಗಿ ಜ್ಞಾನಪೀಠ ಪ್ರಶಸ್ತಿಯನ್ನು ಆ ಸಂಸ್ಥೆಯ ಕೇಂದ್ರ ಸ್ಥಾನ ದೆಹಲಿಯಲ್ಲಿ ನೀಡಲಾಗುತ್ತದೆ. ಆದರೆ ಗೋಕಾಕರಿಗೆ ಈ ಪ್ರಶಸ್ತಿಯನ್ನು ನೀಡಲು ಸ್ವತಃ ದೇಶದ ಪ್ರಧಾನ ಮಂತ್ರಿಗಳೇ ಗೋಕಾಕರು ಇದ್ದ ಮುಂಬಯಿಗೆ ಆಗಮಿಸಿದ್ದರು.

1958ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಅವರು ಭಾಜನರಾಗಿದ್ದಾರೆ. 1960ರಲ್ಲಿ 'ದ್ಯಾವಾ ಪೃಥಿವೀ' ಕವನಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು 1979ರಲ್ಲಿ ಪೆಸಿಫಿಕ್ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ, ಭಾರತ ಸಿಂಧೂ ರಶ್ಮಿ ಮಹಾಕಾವ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ವಿದ್ಯಾಭವನದ ರಾಜಾಜಿ ಪ್ರಶಸ್ತಿ, ಐಬಿಎಚ್ ಪ್ರಶಸ್ತಿಗಳು ಒಳಗೊಂಡಂತೆ ನೂರಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಗೋಕಾಕರು ಭಾಜನರಾಗಿದ್ದಾರೆ. ಇಷ್ಟೇ ಅಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ ಮತ್ತು ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಪದವಿ ಇವರಿಗೆ ಸಂದಿದ್ದು, ಗೋಕಾಕರ ಮೂಲಕ ಇವೆರಡೂ ಕನ್ನಡಿಗರೊಬ್ಬರಿಗೆ ಮೊದಲ ಬಾರಿಗೆ ಸಂದ ಮಹತ್ವಪೂರ್ಣ ಮಹಾ ಗೌರವಗಳಾಗಿವೆ.

ಡಾ.ವಿನಾಯಕ ಕೃಷ್ಣ ಗೋಕಾಕರು 1992ರ ಏಪ್ರಿಲ್ 28ರಂದು ಬೆಳಗಿನ ಜಾವ ಮುಂಬೈಯಲ್ಲಿ ಅಸ್ತಮಿಸಿದರು. ಅವರು ಭೌತಿಕವಾಗಿ ನಮ್ಮೊಡನೆ ಇಲ್ಲವಾದರೂ ಕೂಡ ಅವರು ಕೊಟ್ಟಿರುವ ಸಾಹಿತ್ಯದ ಬೆಳಕು ಯಾವತ್ತೂ ನಾಡಿನಲ್ಲಿ ಶಾಶ್ವತವಾಗಿ ಬೆಳಗುತ್ತಲೇ ಇರುತ್ತದೆ.

> "ಹೋರಾಟಕ್ಕೂ ಸೈ, ಬರಹಕ್ಕೂ ಸೈ, ಭಾಷಣಕ್ಕೂ ಸೈ, ಬೋಧನೆಗೂ ಸೈ, ಸಂಶೋಧನೆಗೂ ಸೈ ಎನ್ನುವಂತಿದ್ದ ವಿನಾಯಕ ಕೃಷ್ಣ ಗೋಕಾಕರು ಕನ್ನಡಕ್ಕೆ ಐದನೆಯ ಜ್ಞಾನಪೀಠ ಪ್ರಶಸ್ತಿಯನ್ನು 1996ರಲ್ಲಿ ತಂದುಕೊಟ್ಟವರು. ತನ್ಮೂಲಕ ಕನ್ನಡದ ಹಿರಿಮೆಯನ್ನು ರಾಷ್ಟ್ರ ಮಟ್ಟದಲ್ಲಿ ಮೆರೆಸಿದವರು. ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವ ಪಡೆದಿದ್ದ ಅವರು ತಮ್ಮ ಜೀವಿತ ಕಾಲದಲ್ಲೇ ಒಬ್ಬ ಪ್ರತಿಭಾವಂತ ಸಾಹಿತಿಗೆ ದೊರಕಬೇಕಾದ ಎಲ್ಲ ಸಿದ್ಧಿ–ಪ್ರಸಿದ್ಧಿಗಳನ್ನು ಪಡೆದು ಎಲ್ಲಾ ರೀತಿಯ ಕೀರ್ತಿ ಕಳಸಗಳಿಂದ ಕನ್ನಡಮ್ಮನ ಮಡಿಲನ್ನು ತುಂಬಿದವರು ಗೋಕಾಕರು.

ಸಂಸದ ಶ್ರೀನಿವಾಸ್ ಪ್ರಸಾದ್ 77ನೇ ಜನ್ಮದಿನಾಚರಣೆ

ಮೈಸೂರು, ಆ.8(ಎಸ್‌ಪಿಎನ್)– ಹಿರಿಯ ರಾಜಕಾರಣಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ 77ನೇ ಹುಟ್ಟುಹಬ್ಬವನ್ನು ಒಡನಾಡಿ ಸೇವಾ ಸಂಸ್ಥೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನ್ ಅಂಡ್ ಕಲ್ಚರಲ್ ಟ್ರಸ್ಟ್, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನ ಸಹಯೋಗದೊಂದಿಗೆ ಸಂಸದ ಶ್ರೀನಿವಾಸ ಪ್ರಸಾದ್ ಹುಟ್ಟು ಹಬ್ಬವನ್ನು ಆಚರಿಸಲಾಯಿತು.

ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ಅವರು, ಬುದ್ಧ–ಬಸವ–ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪಾರ್ಚನೆ ನೆರವೇರಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ವಿಶ್ವ ಮೈತ್ರಿ ಬುದ್ಧವಿಹಾರದ ಶ್ರೀ ಕಲ್ಯಾಣಸಿರಿ ಬಂತೇಜಿ, ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ–ಪರಶು, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಸಮಾನತೆ ಸ್ವಾಭಿಮಾನ ಸ್ವಾವಲಂಬನೆ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಸಿ.ಬಸವರಾಜು, ಪಿ.ನಂದಕುಮಾರ್, ಸಮಾನತೆ ಪ್ರಕಾಶನದ ಭರತ್ ರಾಮಸ್ವಾಮಿ, ಎಚ್.ಜಿ.ರಮೇಶ್, ವೆಂಕಟರಾಜು, ಜಿ.ಶಿವಕುಮಾರ್, ಡಾ.ಮುಳ್ಳೂರು ನಂಜುಂಡಸ್ವಾಮಿ, ಶಾಂತರಾಮಶೆಟ್ಟಿ, ನಗರ ಪಾಲಿಕೆ ಮಾಜಿ ಉಪ ಮೇಯರ್ ಜಿ.ಲಿಂಗಯ್ಯ, ಮಾಜಿ ಸದಸ್ಯ ಎಚ್.ಕೆಅನಂತ, ಪ್ರತಿಮಾ ಪ್ರಸಾದ್, ಕೆ.ಗಿರೀಶ್, ಡಾ. ಎಲ್.ರಾಜಶೇಖರಯ್ಯ ಇತರರಿದ್ದರು.

ಸಂಸದ ವಿ.ಶ್ರೀನಿವಾಸ ಪ್ರಸಾದ್ ನಮ್ಮ ನಡುವಿನ ಅಪರೂಪದ ರಾಜಕೀಯ ಮುತ್ಸದ್ಧಿ, ಅವರು ರಾಜಕಾರಣಕ್ಕೆ ಬಂದು ಮಾರ್ಚ್ 2024ಕ್ಕೆ 50 ವರ್ಷ ಗಳು ತುಂಬುತ್ತವೆ ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮಾಜಿ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ್ ಅಭಿಪ್ರಾಯಪಟ್ಟರು.

ಈ ಹಿಂದೆ ರಾಜ ಮಹಾರಾಜರು ಹೊಗಳುಭಟ್ಟರನ್ನು ಇಟ್ಟುಕೊಳ್ಳುತ್ತಿದ್ದರು. ಈಗಿನ ರಾಜಕಾರಣಿಗಳಿಗೂ ಈ ಗೀಳು ಇದೆ. ಆದರೆ, ಶ್ರೀನಿವಾಸ ಪ್ರಸಾದ ಅವರು ಈ ವಿಷಯದಲ್ಲೂ ಒಂದು ಮಾದರಿ ಎಂದರೆ ತಪ್ಪಾಗಲಾರದು. ಹೊಗಳುಭಟ್ಟರ ಮಾತನ್ನು ಅವರು ಬಯಸುವುದಿಲ್ಲ ಮತ್ತು ಅದರತ್ತ ಅವರು ಕಿವಿಗೊಡುವುದಿಲ್ಲ ಎಂದು ತಿಳಿಸಿದರು. ಸಾಮಾನ್ಯವಾಗಿ ರಾಜಕಾರಣಿಗಳು ಅಧಿಕಾರಕ್ಕಾಗಿ ಹಪಹಪಿಸುತ್ತಿರುತ್ತಾರೆ. ಆದರೆ, ಪ್ರಸಾದ್ ಅವರಿಗೆ ಇತ್ತೀಚೆಗೆ ಎರಡು ಸಂದರ್ಭಗಳಲ್ಲಿ ಅಧಿಕಾರ ಮನೆಯ ಬಾಗಿಲಿಗೆ ಬಂದರೂ ಅದನ್ನು ಅವರು ನಿರಾಕರಿಸಿದರು. ಅಧಿಕಾರ ಇರಲಿ ಅಥವಾ ಇಲ್ಲದಿರಲಿ ಪ್ರತಿ ವರ್ಷ ಶ್ರೀನಿವಾಸ ಪ್ರಸಾದ್ ಅವರು ಒಡನಾಡಿ ಸಂಸ್ಥೆಯ ಮಕ್ಕಳ ನಡುವೆ ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವುದು ಸಾಮಾಜಿಕ ಕಳಕಳಿ, ಬದ್ಧತೆ ಮತ್ತು ಸರಳತನಕ್ಕೆ ಸಾಕ್ಷಿಯಾಗಿದೆ ಎಂದರು.

ಸಮಿತಿ ರಚನೆ

ಮೈಸೂರು,ಆ.8– ಬನ್ನೂರು ಪುರಸಭಾ ಕಾರ್ಯಾಲಯ ವ್ಯಾಪ್ತಿಯಲ್ಲಿ ಕರ್ನಾಟಕ ಬೀದಿ ವ್ಯಾಪಾರಿಗಳ ಜೀವನೋಪಾಯ ಸಂರಕ್ಷಣೆ ಮತ್ತು ವ್ಯಾಪಾರ ನಿಯಂತ್ರಣ ನಿಯಮ 2019 ರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೀದಿಬದಿ ವ್ಯಾಪಾರಿಗಳ ಕುಂದು ಕೊರತೆ ನಿವಾರಣಾ ಸಮಿತಿಯನ್ನು ನಿವೃತ್ತ ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿದೆ.

ಒಬ್ಬರು ನಿವೃತ್ತ ಸಿವಿಲ್ ನ್ಯಾಯಾಧೀಶರು(1) ಮತ್ತು ಕಳಂಕರಹಿತ ಸೇವಾ ದಾಖಲೆಯುಳ್ಳ ರಾಜ್ಯ ಸರ್ಕಾರದ ನಿವೃತ್ತ ಎ–ದರ್ಜೆ ಅಧಿಕಾರಿ(1) ಹಾಗೂ ಒಬ್ಬರು ಬೀದಿಬದಿ ವ್ಯಾಪಾರರನ್ನು ಒಳಗೊಂಡ ಅನೌಪಚಾರಿಕ ಆರ್ಥಿಕ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರು (1), ಪ್ರಕಟಣೆ ಹೊರಡಿಸಿದ ಒಂದು ವಾರದೊಳಗೆ ಬನ್ನೂರು ಪುರಸಭಾ ಕಾರ್ಯಾಲಯ ಮುಖ್ಯಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಬನ್ನೂರು ಪುರಸಭಾ ಕಾರ್ಯಾಲಯವನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಬನ್ನೂರು ಪುರಸಭಾ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾತು... ಮಾತು... ಬರೀ ಮಾತು...!

ಮಾತ್ ಮಾತಿಗೆ ಗದ್ದಲದ ಗೂಡಾದ ಮೈಸೂರು ಪಾಲಿಕೆ ಕೌನ್ಸಿಲ್ ಸಭೆ

●ಜೆಡಿಎಸ್ ಸದಸ್ಯರಿಂದ ಮೇಯರ್‌ಗೆ ಘೇರಾವ್ ●ಸಾಂಗವಾಗಿ ನಡೆದ ಸಭೆ ಅಂತಿಮವಾಗಿ ಗೊಂದಲ-ಗದ್ದಲ ●ಕೊನೆಗೆ ತಾವೇ ಸಮಾಧಾನ ತಂದುಕೊಂಡ ಘನ ಸದಸ್ಯರು ●ತಾಯಿ ಚಾಮುಂಡೇಶ್ವರಿ ಕಾಪಾಡವ್ವ...!

ಮೈಸೂರು, ಆ.8(ಎಸ್‌ಬಿಡಿ)- ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆ ಮುಕ್ತಾಯಗೊಂಡಾಗ ಜೆಡಿಎಸ್ ಸದಸ್ಯರು ಮೇಯರ್ ಶಿವಕುಮಾರ್ ಅವರಿಗೆ ಘೇರಾವ್ ಹಾಕಿ, ಸಭೆಯಲ್ಲಿ ಮಾತನಾಡಲು ಅವಕಾಶ ನೀಡಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು.

ಸಭೆ ಮುಕ್ತಾಯಗೊಳಿಸಿ ವೇದಿಕೆಯಿಂದ ಕೆಳಗಿಳಿಯುತ್ತಿದ್ದ ಮೇಯರ್ ಶಿವಕುಮಾರ್ ಅವರನ್ನು ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು ಸೇರಿದಂತೆ ಜೆಡಿಎಸ್‌ನ ಹಲವು ಸದಸ್ಯರು ತಡೆದು, ಘೇರಾವ್ ಹಾಕಿದರು. ಆಗ ಬಿಜೆಪಿ ಸದಸ್ಯರು ಮಧ್ಯ ಪ್ರವೇಶಿಸಿ, ಮೇಯರ್ ತಡೆಯುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಎಸ್‌ಬಿಎಂ ಮಂಜು ಹಾಗೂ ಬಿಜೆಪಿಯ ಎಂ.ಯು. ಸುಬ್ಬಯ್ಯ ನಡುವೆ ಮಾತಿನ ಚಕಮಕಿಯೂ ನಡೆಯಿತು. ವಾಗ್ವಾದದಿಂದಾಗಿ ಕೆಲಕಾಲ ಭಾರೀ ಗದ್ದಲವೇ ಉಂಟಾಗಿತ್ತು. ಬಳಿಕ ಜಮೇದಾರ್ ಮಧ್ಯಪ್ರವೇಶಿಸಿ, ಮೇಯರ್ ಅವರನ್ನು ಕೊಠಡಿಗೆ ಕರೆದೊಯ್ದರು.



ಗದ್ದಲವಾಗಿದ್ದೇಗೆ?: ನಗರಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮಂಗಳವಾರ ನಡೆದ ಮುಂದುವರೆದ ಕೌನ್ಸಿಲ್ ಸಭೆಯ ಆರಂಭದಲ್ಲಿ ಕೆಲ ಕಾರ್ಯಸೂಚಿಗಳನ್ನು ಮಂಡಿಸಿ, ನಿರ್ಣಯ ಕೈಗೊಳ್ಳಲಾಯಿತು. ಆದರೆ ಘನತ್ಯಾಜ್ಯ ನಿರ್ವಹಣೆ ಮತ್ತು ಸಾಗಾಣಿಕೆಗೆ ಬಳಸುವ ಟ್ರ್ಯಾಕ್ಟರ್‌ಗಳಿಗೆ ಹೆಚ್ಚುವರಿ ಲೋಡರ್ ಅಥವಾ ಸಹಾಯಕರನ್ನು ನೇಮಿಸಿಕೊಳ್ಳುವ ಸಂಬಂಧಿತ ಕಾರ್ಯಸೂಚಿಯನ್ನು ವಾಪಾಸ್ ಪಡೆದು, ನಂತರ ಮಂಡಿಸುವಂತೆ ಬಹುತೇಕ ಸದಸ್ಯರು ಒತ್ತಾಯಿಸಿದಂತೆ ಮೇಯರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಳಿಕ ಹಲವು ಸದಸ್ಯರು ತಮ್ಮ ವಾರ್ಡ್ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಸಾರ್ವತ್ರಿಕ ವಿಚಾರಗಳು ಬಂದಾಗ ಜೆಡಿಎಸ್ ಸದಸ್ಯರೂ ಎದ್ದು ನಿಂತು ಪೂರಕವಾಗಿ ಮಾತನಾಡಿದರು. ಈ ನಡುವೆ ಸಂಜೆ ಸುಮಾರು 5.30ರ ವೇಳೆಗೆ ಮತ್ತೆರಡು ಹೆಚ್ಚುವರಿ ಕಾರ್ಯಸೂಚಿಗಳ ಪ್ರತಿಯನ್ನು ಸದಸ್ಯರಿಗೆ ಹಂಚಿಕೆ ಮಾಡಲಾಯಿತು. ಆ ನಂತರವೂ ಕೆ.ವಿ.ಶ್ರೀಧರ್, ಅಯೂಬ್‌ಖಾನ್, ಶಾಂತಕುಮಾರಿ ಸೇರಿದಂತೆ ಹಲವರು ಮಾತನಾಡಿದರು.

ಅಷ್ಟರಲ್ಲಿ ಸಂಜೆ 6.50ಕ್ಕೆ ಸಮಯ ಸರಿದಿತ್ತು. ಈ ವೇಳೆ ಎರಡು ನಿಮಿಷ ಕಾಲಾವಕಾಶ ಕೇಳಿಕೊಂಡು ಮಾತು ಆರಂಭಿಸಿದ ಎಸ್‌ಬಿಎಂ ಮಂಜು ದಸರಾಗೆ ಸಜ್ಜಾಗುವ ಬಗ್ಗೆ ಅಭಿಪ್ರಾಯ ತಿಳಿಸುತ್ತಿದ್ದರು. ಇದರ ನಡುವೆ ಕೆಲ ಸದಸ್ಯರು ಕಾರ್ಯಸೂಚಿ ಮಂಡಿಸಿ ಎಂದು ಒತ್ತಾಯಿಸಿದ್ದರಿಂದ ಬೇಗ ಮಾತು ಮುಗಿಸುವಂತೆ ಮೇಯರ್ ಸೂಚಿಸಿದರು. ಇದರಿಂದ ಸಿಟ್ಟಿಗೆದ್ದ ಎಸ್‌ಬಿಎಂ ಮಂಜು, ಬಿಜೆಪಿಯವರು ದಬ್ಬಾಳಿಕೆ ಮಾಡುತ್ತೀರಾ? ಎಂದು ಸದನದ ಬಾವಿಗಿಳಿದು ಏರುಧ್ವನಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಪ್ರೇಮಾ ಶಂಕರೇಗೌಡ, ಅಶ್ವಿನಿ ಅನಂತು, ರಮೇಶ್ ಇನ್ನಿತರ ಜೆಡಿಎಸ್ ಸದಸ್ಯರು ಮಂಜು ಬೆಂಬಲಕ್ಕೆ ನಿಂತರು. ಇತ್ತ ದಬ್ಬಾಳಿಕೆ ಪದ ಪ್ರಯೋಗದಿಂದ ಸಿಟ್ಟಾದ ಬಿಜೆಪಿ ಸದಸ್ಯರೂ ಮಂಜು ವಿರುದ್ಧ ನಿಂತರು. ನಿಯಮಾನುಸಾರ ರಾತ್ರಿ 7 ಗಂಟೆಯೊಳಗೆ ಸಭೆ ಮುಕ್ತಾಯಗೊಳಿಸಬೇಕಿದ್ದ ಕಾರಣ ಮೇಯರ್ ಶಿವಕುಮಾರ್ ಗದ್ದಲದ ನಡುವೆಯೇ ಎರಡು ಕಾರ್ಯಸೂಚಿಗಳ ಸಂಖ್ಯೆಯನ್ನಷ್ಟೇ ಪ್ರಸ್ತಾಪಿಸಿ, ಒಪ್ಪಲಾಯಿತು ಎಂದು ನಿರ್ಣಯ ಪ್ರಕಟಿಸಿ, ಸಭೆ ಮುಕ್ತಾಯಗೊಳಿಸಿದರು.

ಇದರಿಂದ ಮತ್ತಷ್ಟು ಸಿಟ್ಟಿಗೆದ್ದ ಎಸ್‌ಬಿಎಂ ಮಂಜು, ಪೀಠದಿಂದ ಕೆಳಗಿಳಿಯುತ್ತಿದ್ದ ಮೇಯರ್ ಶಿವಕುಮಾರ್ ಅವರನ್ನು ಮೆಟ್ಟಿಲು ಬಳಿ ತಡೆದು ನಿಲ್ಲಿಸಿ, ಮಾತನಾಡುವುದಕ್ಕೂ ಅವಕಾಶ ನೀಡದೆ ನಿಮ್ಮಿಷ್ಟದಂತೆ ನಿರ್ಣಯ ಮಾಡಿದ್ದು ಸರಿಯೇ ಎಂದು ಪ್ರಶ್ನಿಸಿದರು. ಇನ್ನುಳಿದ ಜೆಡಿಎಸ್ ಸದಸ್ಯರೂ ಮೇಯರ್ ಸುತ್ತುವರೆದು ಘೇರಾವ್ ಹಾಕಿ, ಆಕ್ರೋಶ ವ್ಯಕ್ತಪಡಿಸಿದರು. ಕಾರ್ಯಸೂಚಿ ಮೇಲೆ ಚರ್ಚೆಯನ್ನೇ ನಡೆಸದೆ ಒಪ್ಪಲಾಯಿತು ಎಂದು ಸಭೆ ಮುಕ್ತಾಯಗೊಳಿಸಿದರೆ ಏನರ್ಥ ಎಂದು ಕೆ.ವಿ.ಶ್ರೀಧರ್ ಕೂಡ ಏರುಧ್ವನಿಯಿಂದಲೇ ಮೇಯರ್‌ಗೆ ಪ್ರಶ್ನಿಸಿದರು. ಮೇಯರ್ ಕೂಡ ಆಕ್ರೋಶದಿಂದಲೇ ಜಾಗ ಬಿಡುವಂತೆ ಎಚ್ಚರಿಕೆ ನೀಡಿದರು. ಈ ವೇಳೆ ಬಿಜೆಪಿ ಸದಸ್ಯರು ಮೇಯರ್ ಪರ ನಿಂತರು. ಎಸ್‌ಬಿಎಂ ಮಂಜು ಹಾಗೂ ಸುಬ್ಬಯ್ಯ ನಡುವೆ ಮಾತಿಗೆ ಮಾತು ಬೆಳೆಯಿತು. ಎಸ್‌ಬಿಎಂ ಮಂಜು, ಏನು ರೌಡಿಸಂ ಮಾಡುತ್ತೀರಾ ಎಂದರು. ಪರಿಸ್ಥಿತಿ ಒಂದು ಹಂತಕ್ಕೆ ವಿಕೋಪಕ್ಕೆ ತಿರುಗಿದ್ದಂತಿತ್ತು. ಕೈಕೈ ಮಿಲಾಯಿಸುವ ರೀತಿ ನಡೆದುಕೊಂಡರು. ಇತ್ತ ವಿಪಕ್ಷ ಕಾಂಗ್ರೆಸ್ ಸದಸ್ಯರು ಮೌನವಾಗಿ ಗಲಾಟೆ-ಗದ್ದಲ ನೋಡುತ್ತಿದ್ದರು. ಬಳಿಕ ಅವರವರೇ ಸಮಾಧಾನಪಡಿಸಿಕೊಂಡಂತೆ ಮೇಯರ್ ತೆರಳಲು ಜಾಗ ಬಿಟ್ಟರು. ಮೂರ್‍ನಾಲ್ಕು ನಿಮಿಷದಲ್ಲಿ ನಡೆದುಹೋದ ಈ ಘಟನೆ ಕೌನ್ಸಿಲ್ ಘನತೆಯನ್ನು ಅಣಕಿಸುವಂತಿತ್ತು.

ಹೊಗೆಯಾಡುತ್ತಿತ್ತು: ಇದಕ್ಕೂ ಮುನ್ನ ಸಭೆಯ ನಡುವೆ ಹಲವು ಬಾರಿ ಜೆಡಿಎಸ್ ಸದಸ್ಯರು ಮೇಯರ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಅದೂ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂಬ ವಿಚಾರಕ್ಕೆ ಎನ್ನುವುದು ಗಮನಾರ್ಹ. ನೀವು ತಾರತಮ್ಯ ಮಾಡುತ್ತಿದ್ದೀರಿ. ಜೆಡಿಎಸ್ ಸದಸ್ಯರಿಗೆ ಮಾತನಾಡಲು ಅವಕಾಶವನ್ನೇ ಕೊಡುವುದಿಲ್ಲ. ನಮ್ಮ ಪರಿಸ್ಥಿತಿ 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ' ಎಂಬಂತಾಗಿದೆ ಎಂದು ಪ್ರೇಮಾ ಶಂಕರೇಗೌಡ ಅಸಮಾಧಾನ ವ್ಯಕ್ತಪಡಿಸಿದ್ದರು. ಕೆ.ವಿ.ಶ್ರೀಧರ್ ಅವರು ಮಾತನಾಡುತ್ತಿದ್ದಾರಲ್ಲಾ ಎಂದು ಮೇಯರ್ ಹೇಳಿದಾಗ, ಇಲ್ಲ ಅವರು ಪಕ್ಷೇತರ ಸದಸ್ಯರು ಎಂದು ಪ್ರೇಮಾ ಶಂಕರೇಗೌಡ ಥಟ್ಟನೆ ಹೇಳಿದರು. ಇದಕ್ಕೆ ಮೇಯರ್ ಕೂಡ ತಮಾಷೆಯಾಗಿ ಕಿಚಾಯಿಸಿದರು. ಆಗ ನಾನು ಪಕ್ಷೇತರ ಸದಸ್ಯರ ಸಾಲಿನಲ್ಲಿ ಕುಳಿತಿರುವುದರಿಂದ ಪ್ರೇಮಾ ಅವರು ಹಾಗೆ ಹೇಳಿದ್ದಾರೆ ಮತ್ತೇನಿಲ್ಲ ಎಂದು ಶ್ರೀಧರ್ ಸಮಜಾಯಿಷಿ ನೀಡಿದರು. ನಂತರ ಹೆಚ್ಚುವರಿ ಕಾರ್ಯಸೂಚಿ ಪ್ರತಿಯನ್ನು ಜೆಡಿಎಸ್ ಸದಸ್ಯರಿಗೆ ನೀಡಿಲ್ಲ ಎಂದು ಅಶ್ವಿನಿ ಅನಂತು ಮೇಯರ್ ಗಮನಕ್ಕೆ ತಂದರು. ಇದರಿಂದ ಸಿಟ್ಟಾದ ಮೇಯರ್, ನಿಮಗೇನು ಪರಿಜ್ಞಾನವಿಲ್ಲವೇ ಎಂದು ಸಂಬಂಧಪಟ್ಟ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಒಟ್ಟಾರೆ ಸಭೆಯುದ್ದಕ್ಕೂ ಬೂದಿ ಮುಚ್ಚಿದ ಕೆಂಡದಂತಿದ್ದ ಅಸಮಾಧಾನ ಕೊನೆಗೆ ಮೇಯರ್‌ಗೆ ಘೇರಾವ್ ಹಾಕುವ ಮಟ್ಟಕ್ಕೆ ಸ್ಫೋಟವಾಯಿತು. ಸಭೆಯಲ್ಲಿ ಉಪಮೇಯರ್ ಡಾ.ಜಿ.ರೂಪಾ, ಪಾಲಿಕೆಯ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಹಾಜರಿದ್ದರು.

ಅಂದು ಬೆಂಬಲ, ಇಂದು ಬೇಸರ

ರಾಜ್ಯಮಟ್ಟ ಹಾಗೂ ಸ್ಥಳೀಯ ಹಂತದ ರಾಜಕೀಯ ಬೆಳವಣಿಗೆಯಿಂದಾಗಿ ಮೈಸೂರು ನಗರ ಪಾಲಿಕೆಯಲ್ಲಿದ್ದ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಕಳಚಿತ್ತು. ಮೇಯರ್ ಚುನಾವಣೆಯಲ್ಲಿ ಜೆಡಿಎಸ್ ಸದಸ್ಯರು ತಟಸ್ಥ ನಿಲುವು ತಾಳುವ ಮೂಲಕ ಪರೋಕ್ಷವಾಗಿ ಬೆಂಬಲಿಸಿದ್ದರಿಂದ ಬಿಜೆಪಿಯ ಶಿವಕುಮಾರ್ ಮೇಯರ್ ಆಗಲು ಸಾಧ್ಯವಾಯಿತು. ಒಂದು ಯಡವಟ್ಟಿನಿಂದ ಉಪಮೇಯರ್ ಸ್ಥಾನವೂ ಜೆಡಿಎಸ್ ಕೈತಪ್ಪಿ, ಬಿಜೆಪಿ ಜಿ.ರೂಪಾ ಅವರಿಗೆ ಅವಕಾಶ ಒಲಿಯಿತು. ಜೆಡಿಎಸ್‌ಗಾದ ನಷ್ಟ ಸರಿದೂಗಿಸುವ ನಿಟ್ಟಿನಲ್ಲಿ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆಯಲ್ಲಿ ಪ್ರಾಧಾನ್ಯತೆ ನೀಡಲಾಯಿತು. ಮೇಯರ್ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದ ಜೆಡಿಎಸ್ ಸದಸ್ಯರು ಇಂದು ಮೇಯರ್ ವಿರುದ್ಧವೇ ಆಕ್ರೋಶ ಹೊರಹಾಕಿದರು.

ಮೈಸೂರು ಪಾಲಿಕೆ ವ್ಯಾಪ್ತಿಯ ಚರಂಡಿಗಳ ಹೂಳೆತ್ತಲು 1.94 ಕೋಟಿ ಕಾಮಗಾರಿಗೆ ಕೌನ್ಸಿಲ್ ಅಸ್ತು

●ಗದ್ದಲದ ನಡುವೆಯೇ ಮೇಯರ್ ಶಿವಕುಮಾರ್ ನಿರ್ಣಯ ●2.70 ಕೋಟಿ ವೆಚ್ಚದಲ್ಲಿ ಪಾಲಿಕೆ ಪ್ರಧಾನ ಕಚೇರಿ ಕಟ್ಟಡಕ್ಕೆ ವಿಶಿಷ್ಟ ದೀಪಾಲಂಕಾರ

ಮೈಸೂರು, ಆ.8(ಎಸ್‌ಬಿಡಿ)- ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಚರಂಡಿಗಳಲ್ಲಿ ಹೂಳು ತೆಗೆಯುವ 1.94 ಕೋಟಿ ರೂ. ಅಂದಾಜು ಮೊತ್ತದ ಕಾಮಗಾರಿಗೆ ಕೌನ್ಸಿಲ್‌ನ ಕಡೇ ಕ್ಷಣದಲ್ಲಿ ಮೇಯರ್ ಅನುಮೋದನೆ ನೀಡಿದರು.

ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂದು ಜೆಡಿಎಸ್ ಸದಸ್ಯರು ಸದನದ ಬಾವಿಗಿಳಿದು ಆಕ್ರೋಶ ವ್ಯಕ್ತಪಡಿಸುತ್ತಿದ್ದ ಸಂದರ್ಭದಲ್ಲೇ ಹೆಚ್ಚುವರಿ ಕಾರ್ಯಸೂಚಿಯಲ್ಲಿನ ಮೂರು ವಿಷಯಗಳ ಕ್ರಮಸಂಖ್ಯೆ ಪ್ರಸ್ತಾಪಿಸಿ, ಒಪ್ಪಲಾಯಿತು ಎಂದು ಸಭೆ ಮುಕ್ತಾಯಗೊಳಿಸಿದರು.



ಮಳೆ ನೀರು ಚರಂಡಿ ನಿರ್ವಹಣೆಗೆ ಪ್ರತೀ ವಾರ್ಡ್‌ಗೆ ಮೂವರು ಸಹಾಯಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಹಿಂದಿನ ಕೌನ್ಸಿಲ್‌ನಲ್ಲಿ ಸದಸ್ಯರು ಒತ್ತಾಯಿಸಿದ್ದರಿಂದ ಈ ಸಂಬಂಧ ಕಾರ್ಯಸೂಚಿ ತರಲಾಗಿತ್ತು. ಆದರೆ ಸ್ವಚ್ಛತಾ ಕೆಲಸಕ್ಕೆ ಬಳಸುವ 68 ಟ್ರ್ಯಾಕ್ಟರ್‌ಗಳಿಗೆ ನೇರ ನೇಮಕಾತಿ ಹಾಗೂ ಹೊರಗುತ್ತಿಗೆಯಡಿ 210 ಲೋಡರ್‌ಗಳ ನೇಮಿಸಿಕೊಳ್ಳುವ ವಿಷಯವನ್ನು ಮಂಡಿಸಲಾಗಿತ್ತು. ಇದಕ್ಕೆ ಅಯೂಬ್‌ಖಾನ್, ಎಂ.ಯು.ಸುಬ್ಬಯ್ಯ, ಮಾ.ವಿ.ರಾಂಪ್ರಸಾದ್, ಸತೀಶ್, ಅಶ್ವಿನಿ ಅನಂತು, ಎಸ್‌ಬಿಎಂ ಮಂಜು, ಭಾಗ್ಯ ಮಾದೇಶ್, ಶಾಂತಮ್ಮ ಸೇರಿದಂತೆ ಹಲವು ಸದಸ್ಯರು, ಪೌರಕಾರ್ಮಿಕರ ಕೊರತೆಯಿಂದ ತಮ್ಮ ವಾರ್ಡ್‌ನಲ್ಲಿ ಉಂಟಾಗಿರುವ ಸಮಸ್ಯೆ ತಿಳಿಸುವುದರೊಂದಿಗೆ ಪರಿಷ್ಕೃತ ಕಾರ್ಯಸೂಚಿ ಮಂಡಿಸುವಂತೆ ಕೋರಿದರು.

ಈ ಹಿನ್ನೆಲೆಯಲ್ಲಿ ಮೇಯರ್ ನೀಡಿದ ಸೂಚನೆಯನ್ವಯ ಪಾಲಿಕೆ ವ್ಯಾಪ್ತಿಯಲ್ಲಿನ ಸುಮಾರು 2364 ಕಿ.ಮೀ. ಉದ್ದದ ರಸ್ತೆಬದಿ ಚರಂಡಿಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸದಿದ್ದರೆ ಮಳೆಗಾಲದಲ್ಲಿ ಹೂಳು ತುಂಬಿ ಸಂಚಾರ ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ಹಾಗಾಗಿ ಚರಂಡಿಯ ಹೂಳು ತೆಗೆಯಲು ವಾರ್ಷಿಕ ಸುಮಾರು 1.94 ಕೋಟಿ ರೂ. ಯೋಜನೆ ಸಿದ್ಧಪಡಿಸಿ, ಅನುಮೋದನೆ ಬಳಿಕ ಆರೋಗ್ಯ ಶಾಖೆಯಿಂದಲೇ ಕಾಮಗಾರಿ ನಿರ್ವಹಿಸಲು ಕೌನ್ಸಿಲ್ ಅನುಮೋದನೆಗೆ ಮಂಡಿಸಲಾಗಿತ್ತು. ಈ ಬಗ್ಗೆ ಚರ್ಚೆ ನಡೆಯಬೇಕಿತ್ತಾದರೂ ಸಭೆಯ ಕಡೇ ಕ್ಷಣದಲ್ಲಿ ಗದ್ದಲದಲ್ಲೇ ಒಪ್ಪಿಗೆ ನೀಡಲಾಯಿತು. ಇದೇ ವೇಳೆ ವಿವಿಧ ರಸ್ತೆಗಳ ಡಾಂಬರೀಕರಣಕ್ಕೆ ಈಗಾಗಲೇ ಟೆಂಡರ್ ನೀಡಿರುವುದಕ್ಕೆ ಅನುಮೋದನೆ ಪಡೆಯಲಾಯಿತು. ಮೈಸೂರು ಪಾಲಿಕೆ ಮುಖ್ಯ ಕಚೇರಿ ಕಟ್ಟಡಕ್ಕೆ 2.70 ಕೋಟಿ ರೂ.ಗಳಲ್ಲಿ ಶಾಶ್ವತ ವಿನೂತನ ಮಾದರಿ ವಿದ್ಯುತ್ ದೀಪಾಲಂಕಾರ ಅಳವಡಿಸುವ ಯೋಜನೆ ಸೇರಿದಂತೆ ಹಲವು ಕಾರ್ಯಸೂಚಿಗಳಿಗೆ ಕೌನ್ಸಿಲ್ ಅನುಮೋದನೆ ದೊರಕಿತು.

ಎಲ್ಲೆಡೆ ಗಮನಹರಿಸಿ: ಇಟ್ಟಿಗೆಗೂಡು, ಬಂಡಿಕೇರಿಯಲ್ಲಿ ಮಾತ್ರ ಬಿಡಾಡಿ ರಾಸುಗಳನ್ನು ಸೆರೆ ಹಿಡಿಯಲಾಗುತ್ತಿದೆ. ಬೇರೆ ಕಡೆಗಳಲ್ಲಿ ಏಕೆ ಕಾರ್ಯಾಚರಣೆ ನಡೆಸುತ್ತಿಲ್ಲ ಎಂದು ಕಾಂಗ್ರೆಸ್ ಸದಸ್ಯ ಗೋಪಿ ಪ್ರಶ್ನಿಸಿದರು. ಕೆ.ವಿ.ಶ್ರೀಧರ್, ಕೆಸರೆಯಿಂದ ಸಾತಗಳ್ಳಿ ಬಸ್ ಡಿಪೋವರೆಗೆ ರಿಂಗ್ ರಸ್ತೆಯಲ್ಲಿ ನೂರಾರು ಹಸು ಹಾಗೂ ಕುದುರೆಗಳಿರುತ್ತವೆ. ಮೊನ್ನೆಯಷ್ಟೇ ಅಪಘಾತವಾಗಿ ಸ್ಕೂಟರ್ ಸವಾರರು ಗಾಯಗೊಂಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲೇ ಈ ಪರಿಸ್ಥಿತಿ ಇದ್ದರೆ ಏನು ಗತಿ. ಇದರಿಂದ ಪ್ರಾಣಿಗಳು ಹಾಗೂ ಮನುಷ್ಯರ ಜೀವಕ್ಕೂ ಅಪಾಯವಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಜೆಡಿಎಸ್ ಸದಸ್ಯ ರಮೇಶ್, ಧ್ವನಿಗೂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಬಿಡಾಡಿ ಪ್ರಾಣಿಗಳ ಬಗ್ಗೆ ಎಲ್ಲಾ ಕಡೆಯಲ್ಲೂ ಗಮನಹರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಿಡಾಡಿ ದನಗಳನ್ನು ಹಿಡಿಯುವ ಕಾರ್ಯಾಚರಣೆಗೆ ಸದ್ಯ ಒಂದು ವಾಹನ ಹಾಗೂ ನಾಲ್ಕು ಸಿಬ್ಬಂದಿಗಳಿದ್ದು, ವಿಧಾನಸಭಾ ಕ್ಷೇತ್ರಕ್ಕೆ ತಲಾ ಒಂದರಂತೆ ಹಾಗೂ ರಿಂಗ್ ರೋಡ್‌ಗೆ ಪ್ರತ್ಯೇಕವಾಗಿ ಸೇರಿ ಒಟ್ಟು ನಾಲ್ಕು ವಾಹನಗಳು ಹಾಗೂ ಅಗತ್ಯ ಸಿಬ್ಬಂದಿಗಳ ಅವಶ್ಯಕತೆ ಇದೆ ಎಂದು ಇದೇ ವೇಳೆ ಅಧಿಕಾರಿಯೊಬ್ಬರು ಸಭೆಗೆ ತಿಳಿಸಿದರು.

ಟೆಂಡರ್‌ನಲ್ಲಿ ಅವ್ಯವಹಾರ?: ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಉದ್ಯಾನಗಳ ನಿರ್ವಹಣೆ ಮಾಡುತ್ತಿದ್ದ ನೂರಾರು ಗುತ್ತಿಗೆದಾರರಿಗೆ ವಂಚಿಸಿ ಕೆಲವರು ಮಾತ್ರ ಪ್ಯಾಕೇಜ್ ರೂಪದಲ್ಲಿ ಟೆಂಡರ್ ಪಡೆದಿದ್ದಾರೆ. ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಎಸ್‌ಬಿಎಂ ಮಂಜು ಇಂದಿನ ಸಭೆಯಲ್ಲೂ ಗಂಭೀರ ಆರೋಪ ಮಾಡಿದರು. ಅಶ್ವಿನಿ ಅನಂತ್, ಪ್ರೇಮಾ ಶಂಕರೇಗೌಡ ಇದಕ್ಕೆ ಧ್ವನಿಗೂಡಿಸಿದರು. ಈ ವಿಚಾರವಾಗಿ ಪ್ರತಿಕ್ರಿಯಿಸಿದ ತೋಟಗಾರಿಕೆ ವಿಭಾಗದ ಅಧಿಕಾರಿ ಮಧುಕರ್, ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 529 ಪಾರ್ಕ್‌ಗಳಿದ್ದು, ಇದರಲ್ಲಿ 267 ಪಾರ್ಕ್‌ಗಳನ್ನು ಪಾಲಿಕೆ ನೌಕರರ ಮೂಲಕವೇ ನಿರ್ವಹಣೆ ಮಾಡಲಾಗುತ್ತಿದೆ. ಇನ್ನುಳಿದ 262 ಪಾರ್ಕ್‌ಗಳ ನಿರ್ವಹಣೆಯನ್ನು 45 ಪ್ಯಾಕೇಜ್‌ಗಳಲ್ಲಿ 28 ಗುತ್ತಿಗೆದಾರರಿಗೆ ವಹಿಸಲಾಗಿದೆ. ಕಳೆದ ಬಾರಿ 6.40 ಕೋಟಿಗೆ ಟೆಂಡರ್ ನೀಡಲಾಗಿತ್ತು. ಈ ಬಾರಿ 8.40 ಕೋಟಿಗೆ ನೀಡಲಾಗಿದೆ ಎಂದು ತಿಳಿಸಿದರು. ಕಡೆಗೆ ಈ ಬಗ್ಗೆ ಸಭೆಯಲ್ಲಿ ವ್ಯಕ್ತವಾದ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು 65 ಸದಸ್ಯರಿಗೂ ತಲುಪಿಸಬೇಕು ಎಂದು ಮೇಯರ್ ಅಧಿಕಾರಿಗೆ ಸೂಚನೆ ನೀಡಿದರು.

ಬೋನಸ್ ಕೊಡದಿದ್ದರೆ ಪ್ರತಿಭಟನೆ: ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಪಾಲಿಕೆಯ ಪೌರಕಾರ್ಮಿಕರಿಗೆ 7 ಸಾವಿರ ರೂ. ಬೋನಸ್ ಹಣ ನೀಡಲು ಇನ್ನೆಷ್ಟು ದಿನ ಬೇಕು ಎಂದು ಪ್ರಶ್ನಿಸಿದ ಬಿಜೆಪಿ ಸದಸ್ಯೆ ಆರ್.ಶಾಂತಮ್ಮ, ತಾನು ಪೌರಕಾರ್ಮಿಕ ಸಮುದಾಯದಿಂದ ಬಂದಿದ್ದೇನೆ. ಒತ್ತಡ ಇದೆ. ಸಭೆ ಮುಗಿಯುವುದರೊಳಗೆ ನಿರ್ಧಾರ ತಿಳಿಸದಿದ್ದರೆ ಪೌರಕಾರ್ಮಿಕರೊಂದಿಗೆ ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದರು. ಇದೇ ಪೌರಕಾರ್ಮಿಕರ ಕೆಲಸ ಆರಂಭಿಸುವ ಅವಧಿಯನ್ನು ಸ್ವಲ್ಪ ಬದಲಿಸುವಂತೆ ಮನವಿ ಮಾಡಿದರು.

ಅಭಯಾ ವಿರುದ್ಧ ಆರೋಪ: ಅಭಯಾ ತಂಡದವರು ಸಾಮಾನ್ಯರ ಕೆಲಸ ಮಾಡುವುದಿಲ್ಲ, ಅವರು ದುಡ್ಡಿಗೆ ನಿಂತಿದ್ದಾರೆ ಎಂದು ಕಾಂಗ್ರೆಸ್ ಸದಸ್ಯ ಪ್ರದೀಪ್‌ಚಂದ್ರ ಆರೋಪಿಸಿದರು. ಎಂ.ಯು.ಸುಬ್ಬಯ್ಯ ಸೇರಿದಂತೆ ಹಲವು ಸದಸ್ಯರು ಅಭಯಾ ಸಿಬ್ಬಂದಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಕಂಬದಲ್ಲಿದ್ದ ಕೇಬಲ್‌ಗಳು ತುಂಡಾಗಿ ರಸ್ತೆಗೆ ಬಿದ್ದಿವೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಪ್ರಮೀಳಾ ಭರತ್ ಪ್ರಸ್ತಾಪಿಸಿದರಾದರೂ ಈ ಬಗ್ಗೆ ಹೆಚ್ಚು ಚರ್ಚೆಯೇ ಆಗಲಿಲ್ಲ.

ಡಸ್ಟ್, ಪ್ಲಾಸ್ಟಿಕ್ ಫ್ರೀ ಮಾಡಿ: ದಸರಾ ಸಮೀಪಿಸುತ್ತಿದ್ದು ನಗರ ಪಾಲಿಕೆಯಿಂದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅರಮನೆ ಸುತ್ತಲಿನ 1 ಕಿ.ಮೀ. ವ್ಯಾಪ್ತಿಯನ್ನು ಧೂಳು ಮುಕ್ತ ವಲಯ(ಡಸ್ಟ್ ಫ್ರೀ ಝೋನ್)ವಾಗಿ ಹಾಗೂ ಇಡೀ ನಗರವನ್ನು ಪ್ಲಾಸ್ಟಿಕ್ ಮುಕ್ತ ಎಂದು ಘೋಷಣೆ ಮಾಡಬೇಕು. ಟೌನ್‌ಹಾಲ್ ಆವರಣದಲ್ಲಿನ ಪಾರ್ಕಿಂಗ್ ಸಂಕೀರ್ಣದ ಕಾಮಗಾರಿ ಪೂರ್ಣಗೊಳಿಸಬೇಕು. ವೃತ್ತಗಳನ್ನು ನವೀಕರಣಗೊಳಿಸಬೇಕು. ರಸ್ತೆಗಳ ಗುಂಡಿ ಮುಚ್ಚಿಸಬೇಕು ಎಂದು ಮಾಜಿ ಮೇಯರ್ ಅಯೂಬ್ ಖಾನ್ ಮನವಿ ಮಾಡಿದರು.

ಶ್ವಾನ-ಹಂದಿ ಕಾಟ ತಪ್ಪಿಲ್ಲ!

ಮತ್ತೆ ಶ್ವಾನ ಮತ್ತು ಹಂದಿ ಕಾಟದ ಬಗ್ಗೆ ಅನೇಕ ಸದಸ್ಯರು ದೂರಿತ್ತರು. ಶ್ವಾನಗಳನ್ನು ಸೆರೆ ಹಿಡಿದು ಮತ್ತೊಂದೆಡೆ ಬಿಟ್ಟರೆ ಅವುಗಳ ವರ್ತನೆ ಬದಲಾಗಿ ಅಲ್ಲಿನ ಜನರಿಗೆ ತೊಂದರೆಯಾಗಬಹುದು ಎಂಬ ಕಾರಣದಿಂದ ಇದಕ್ಕೆ ನ್ಯಾಯಾಲಯ ನಿರ್ಬಂಧಿಸಿರಬೇಕು. ಆದರೆ ರಾಸುಗಳ ಮಾದರಿಯಲ್ಲಿ ಪ್ರತ್ಯೇಕವಾಗಿಟ್ಟು ಉತ್ತಮವಾಗಿ ನೋಡಿಕೊಳ್ಳುವ ಪೆಟ್ ಪಾರ್ಕ್ ಸಂಬಂಧ ಯಾವುದೇ ತೊಡಕು ಇದ್ದಂತಿಲ್ಲ. ಈ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಇನ್ನು ಸೆರೆ ಹಿಡಿದ ಹಂದಿಗಳನ್ನಿಡಲು ಶೆಡ್ ನಿರ್ಮಾಣ ಮಾಡಿ ವರ್ಷಗಳೇ ಕಳೆದಿದ್ದರೂ ಬಳಕೆ ಮಾಡಿಕೊಳ್ಳುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಕೊಡಿಸಬೇಕು ಎಂದು ಕೆ.ವಿ.ಶ್ರೀಧರ್ ಆಗ್ರಹಿಸಿದರು. ಹಂದಿ ಸಾಕಾಣಿಕೆ ಕೇಂದ್ರ ನಿರ್ಮಾಣವಾಗಿ ಒಂದೂವರೆ ವರ್ಷವಾಗಿದ್ದು, ಶ್ವಾನ ಪುನರ್ವಸತಿ ಕೇಂದ್ರದಲ್ಲಿ ಸ್ವಲ್ಪ ಕೆಲಸ ಬಾಕಿಯಿದೆ ಎಂದು ಅಧಿಕಾರಿ ತಿಳಿಸಿದರು. ಈ ವೇಳೆ ಆಯುಕ್ತರೊಂದಿಗೆ ಬುಧವಾರ ಪರಿಶೀಲನೆ ಮಾಡುವುದಾಗಿ ಮೇಯರ್ ತಿಳಿಸಿದರು.

ಗೋಲ್ಗಪ್ಪ ಪ್ರಸ್ತಾಪ...

ಪ್ರೇಮಾ ಶಂಕರೇಗೌಡ, ಪಾನಿಪುರಿ ಗೋಲ್ಗಪ್ಪಾದಲ್ಲಿ ಹುಳು ಕಾಣಿಸಿಕೊಂಡಿದ್ದಾಗಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವರದಿಯಾಗಿತ್ತು. ಹೀಗೆ ಬೀದಿಬದಿ ಮಾರಾಟ ಮಾಡುವ ತಿನಿಸುಗಳ ಬಗ್ಗೆ ಯಾರೂ ಪರಿಶೀಲಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಹವಾಲು ಸ್ವೀಕರಿಸಿದ ಶಾಸಕ ಶ್ರೀವತ್ಸ



ಮೈಸೂರು, ಆ.8-ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಮಂಗಳವಾರ ವಾರ್ಡ್ ನಂ.49ರ ವ್ಯಾಪ್ತಿಯಲ್ಲಿ ಪಾದಯಾತ್ರೆ ಮೂಲಕ ಸಾರ್ವಜನಿಕರ ಅಹವಾಲು ಆಲಿಸಿದರು.

ವಾರ್ಡ್ ನಂ 49ರ ವ್ಯಾಪ್ತಿಯ ಗುರಿಕಾರ್ ದೇವಯ್ಯ ರಸ್ತೆ, ಬಸವೇಶ್ವರ ರಸ್ತೆ, ಕುದೇರು ಮಠದ ರಸ್ತೆ, ಅಗ್ರಹಾರ, ನೂರೊಂದು ಗಣಪತಿ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪಾದಯಾತ್ರೆ ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆ ಬಗೆಹರಿಸುವಂತೆ ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಸೂಚಿಸಿದರು.

ಅಗ್ರಹಾರದ ಸುತ್ತಮುತ್ತ ಕೆಲವು ಪುಂಡ ಯುವಕರು ಬೈಕ್‌ನಲ್ಲಿ ವೇಗದ ಚಾಲನೆ ಮತ್ತು ವ್ಹೀಲಿಂಗ್‌ನಿಂದ ಸಾರ್ವಜನಿಕರಿಗೆ ಕಿರಿ-ಕಿರಿ ಉಂಟಾಗುತ್ತಿದ್ದು ಅಂತಹ ಯುವಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಪೊಲೀಸರ ಗಮನಕ್ಕೆ ತರಲಾಯಿತು.

ಬಸವೇಶ್ವರ ರಸ್ತೆ ಒಂದನೇ ಕ್ರಾಸ್‌ನಲ್ಲಿ ಕಲುಷಿತ ನೀರು ಬರುತ್ತಿದ್ದು, ಘಟನೆ ಮರುಕಳಿಸದಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಬಸವೇಶ್ವರ ರಸ್ತೆಯ ಅಡ್ಡ ರಸ್ತೆಗಳ ಕಾಮಗಾರಿಗೆ 35 ಲಕ್ಷ ರೂ., ಚಾವಡಿ ಬೀದಿ ಅಡ್ಡ ರಸ್ತೆಗೆ 25 ಲಕ್ಷ ರೂ. ಮತ್ತು ಒಳಚರಂಡಿ ವ್ಯವಸ್ಥೆಗೆ 20 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಸದ್ಯದಲ್ಲಿಯೇ ಟೆಂಡರ್ ಪ್ರಕ್ರಿಯೆ ಮುಕ್ತಾಯವಾದ ನಂತರ ಕಾಮಗಾರಿ ಆರಂಭವಾಗಲಿದೆ ಎಂದು ಸಾರ್ವಜನಿಕರಿಗೆ ತಿಳಿಸಿದರು.

ಈ ವೇಳೆ ಪಾಲಿಕೆ ಸದಸ್ಯೆ ಸೌಮ್ಯ ಉಮೇಶ್, ಅರುಣ್, ಗುರುದತ್, ಶಂಕರ್‌ಸಿಂಗ್, ದೀನಮಣಿ, ಅನ್ನಪೂರ್ಣ, ಕಿಶೋರ್, ಉಷಾ, ಶಂಕರ್, ಉಮೇಶ್, ಅಂಜು, ಅಭಿ, ರವಿನಾಯಕ್, ರವಿಕುಮಾರ್, ನಿತೀಶ್ ಕುಮಾರ್, ಮಹದೇವ ನಾಯಕ್, ಕೀರ್ತಿ, ಸೋಮು, ಲೋಕೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಆ. 8 – ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಆ. 10 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.

ಶ್ರೀ ಕಲಾನಿಕೇತನ ಕಾಲೇಜು ಆವರಣದಲ್ಲಿ ಮರಗಳ ಹನನ

ವಿದ್ಯಾರ್ಥಿಗಳು, ಸಿಬ್ಬಂದಿ ಪ್ರತಿಭಟನಾ ಧರಣಿ



ಮೈಸೂರು, ಆ. 8(ಆರ್‌ಕೆ)- ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷ್ಯುಯಲ್ ಆರ್ಟ್ಸ್ ಕಾಲೇಜು ಆವರಣದಲ್ಲಿ ಬೆಳೆದು ನಿಂತಿದ್ದ ಫಲ ನೀಡುವ 8 ಹಲಸಿನ ಮರಗಳನ್ನು ಇಂದು ಬೆಳಗ್ಗೆ ಹನನ ಮಾಡಲಾಗಿದೆ.

ಕಾಲೇಜು ಆಡಳಿತ ಮಂಡಳಿಯು ಮರಗಳನ್ನು ಕಡಿದು ಹಾಕಿದೆ ಎಂದು ಆರೋಪಿಸಿ ಇಂದು ಕಾಲೇಜು ಆವರಣದಲ್ಲಿ ತರಗತಿ ಬಹಿಷ್ಕರಿಸಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ಪ್ರತಿಭಟನಾ ಧರಣಿ ನಡೆಸಿ, ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಹತ್ತದಿನೈದು ವರ್ಷಗಳಿಂದ ಬೆಳೆಸಿರುವ 8 ಹಲಸಿನ ಮರಗಳು ಬೃಹದಾಕಾರವಾಗಿದ್ದು, ಫಲ ನೀಡುತ್ತಿದ್ದವು. ವಿದ್ಯಾರ್ಥಿಗಳೆಲ್ಲರೂ ಮರದಡಿ ನೆರಳಲ್ಲಿ ಕುಳಿತು ಊಟ, ತಿಂಡಿ ತಿನ್ನುತ್ತಿದ್ದರು. ಪಕ್ಷಿಗಳು ಬರುತ್ತಿದ್ದವು. ಅವುಗಳೊಂದಿಗೆ ಭಾವನಾತ್ಮಕ ಸಂಬಂಧ ಬೆಳೆದಿತ್ತು ಎಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ.

ಇಂದು ಬೆಳಗ್ಗೆ ನಾವು ಕಾಲೇಜಿಗೆ ಬರುವಷ್ಟರಲ್ಲಿ 7 ಮರಗಳನ್ನು ತೆರವುಗೊಳಿಸಲಾಗಿದ್ದು, ಈಗ ಕಾಲೇಜು ಆವರಣ ಬೆಂಗಾಡಿನಂತೆ ಕಾಣಿಸುತ್ತಿದೆ. ಈ ಬಗ್ಗೆ ಕೇಳಿದಾಗ ಮರಗಳ ಬೇರುಗಳು ಹರಡಿ ಕಾಲೇಜು ಕಟ್ಟಡಕ್ಕೆ ಅಪಾಯ ಉಂಟಾಗುತ್ತದೆ ಎಂಬ ಕಾರಣಕ್ಕಾಗಿ ಮರಗಳನ್ನು ತೆರವುಗೊಳಿಸಬೇಕಾಯಿತು ಎಂದು ಆಡಳಿತ ಮಂಡಳಿ ಹಾರಿಕೆ ಉತ್ತರ ನೀಡುತ್ತಿದೆ ಎಂದು ಧರಣಿ ನಿರತರು ಆರೋಪಿಸಿದ್ದಾರೆ.

ಕಾಲೇಜು ಕಟ್ಟಡದಿಂದ ಸುಮಾರು 15 ಅಡಿ ಅಂತರದಲ್ಲಿದ್ದ ಮರಗಳಿಂದ ಕಟ್ಟಡಕ್ಕೆ ಏನೂ ತೊಂದರೆಯಾಗುತ್ತಿರಲಿಲ್ಲ. ಬದಲಾಗಿ ನೆರಳಾಗುತ್ತಿದ್ದ ಮರಗಳು ಹಲಸಿನ ಹಣ್ಣು ಬಿಡುತ್ತಿದ್ದವು. ವಾತಾವರಣವೂ ತಂಪಾಗಿತ್ತು. ಈಗ ಕಾಲೇಜು ಆವರಣ ಬೆಂಗಾಡಿನಂತಾಗಿದೆ ಆಡಳಿತ ಮಂಡಳಿಯು ನಿರ್ದಯವಾಗಿ ಹಲಸಿನ ಮರಗಳನ್ನು ನೆಲಕ್ಕುರುಳಿಸಿರುವುದು ಖಂಡನೀಯ ಎಂದು ಅವರು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.



ಶ್ರೀರಂಗಪಟ್ಟಣ ತಾಲೂಕಿನ ಪಿ.ಹೊಸಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಚೆಲುವರಾಜು ಆಯ್ಕೆಯಾಗಿದ್ದಾರೆ. ಈ ವೇಳೆ ನೂತನ ಅಧ್ಯಕ್ಷರನ್ನು ಮಾಜಿ ಅಧ್ಯಕ್ಷ ವಾಸು, ವಿವೇಕ್, ವೆಂಕಟೇಶ್, ದಯಾನಂದ್, ಡಾನ್ ಹೆನ್ರಿ, ವಿಕಾಸ್ ಗೌಡ ಸೇರಿದಂತೆ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಹೊಸ ಕೋರ್ಸ್‌ಗಳ ಪರಿಚಯ



ಮೈಸೂರು, ಆ.8(ಜಿಎ)-ಬೆಂಗಳೂರಿನ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ ನೂತನ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ ಎಂದು ಪ್ರಾದೇಶಿಕ ಕೇಂದ್ರ ಹಿರಿಯ ಪ್ರಾದೇಶಿಕ ನಿರ್ದೇಶಕಿ ಡಾ.ಎಸ್.ರಾಧಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯವು ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಅಧೀನದ ಕೇಂದ್ರೀಯ ವಿವಿಯಾಗಿದ್ದು, ಉನ್ನತ ಶಿಕ್ಷಣವನ್ನು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ನೀಡುವ ದೂರದೃಷ್ಟಿಯಿಂದ ಸ್ಥಾಪಿತವಾಗಿದೆ. ಉತ್ತಮ ಸಮಾಜ ಕಟ್ಟುವ ಸತತ ಪ್ರಯತ್ನವನ್ನು ದೂರ ಶಿಕ್ಷಣದ ಮೂಲಕ ಮಾಡಲಾಗುತ್ತಿದೆ ಎಂದರು. ವಿವಿ ಮೂಲಕ 3.4 ಮಿಲಿಯನ್ ವಿದ್ಯಾರ್ಥಿಗಳ ಶೈಕ್ಷಣಿಕ ಆಕಾಂಕ್ಷೆಗಳನ್ನು ಪೂರೈಸುತ್ತಿದೆ. ಈ ವರ್ಷ ನಡೆದ ಘಟಿಕೋತ್ಸವದಲ್ಲಿ 2,79,917 ವಿದ್ಯಾರ್ಥಿಗಳು ಪದವಿ, ಡಿಪ್ಲೊಮಾ ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ ಎಂದು ವಿವರಿಸಿದರು.

ಈ ಬಾರಿಯ ಶೈಕ್ಷಣಿಕ ಸಾಲಿನಿಂದ ವಿವಿಯೂ ನೂತನ ಕೋರ್ಸ್‌ಗಳನ್ನು ಪರಿಚಯಿಸುತ್ತಿದ್ದು, ಎಂ.ಎ ಉದ್ಯಮಿ, ಸಂಸ್ಕೃತ, ಜ್ಯೋತಿಷ್ಯ, ಉರ್ದು, ಡ್ರಾಯಿಂಗ್ ಅಂಡ್ ಪೇಂಟಿಂಗ್ ಸೇರಿದಂತೆ 29 ಕೋರ್ಸ್‌ಗಳಿಗೆ ಜೊತೆಗೆ ಕೌಶಲ್ಯ ಆಧಾರಿತ ಸ್ನಾತಕೋತ್ತರ ಪದವಿಗಳಾದ ಟೂರಿಸಂ ಮ್ಯಾನೇಜ್‌ಮೆಂಟ್, ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿಗಳಿಗೆ ಚಾಲನೆ ನೀಡಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ 0821-2423374, 08029607272 ಸಂಪರ್ಕಿಸಿ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಹಾಯಕಿ ನಿರ್ದೇಶಕಿ ಡಾ.ಹೇಮಮಾಲಿನಿ, ಸಂಯೋಜಕ ಡಾ.ಹರ್ಷ ಮತ್ತು ಸಹಾಯಕ ಸಂಯೋಜಕ ಪ್ರೊ.ಸಿದ್ದರಾಜು ಉಪಸ್ಥಿತರಿದ್ದರು.

ಕಚೇರಿ ಸ್ಥಳಾಂತರ

ಮೈಸೂರು, ಆ. 8-ಮೈಸೂರು ನಗರ ತ್ಯಾಗರಾಜ ರಸ್ತೆಯ 5ನೇ ಅಡ್ಡರಸ್ತೆಯಲ್ಲಿರುವ ನಾಗರಿಕ ಸೇವಾ ಕೇಂದ್ರ ಮತ್ತು ವಲಯ ಕಚೇರಿ-01ರ ಕಚೇರಿಯನ್ನು ಆಗಸ್ಟ್ 07 ರಿಂದ ಮೈಸೂರು ನಗರದ ಕೆ.ಆರ್.ಮೊಹಲ್ಲಾದ ಉತ್ತರಾದಿಮಠ ರಸ್ತೆಯ 5ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. ಸಾರ್ವಜನಿಕರು ಕಚೇರಿ ಕೆಲಸ ಕಾರ್ಯಗಳಿಗೆ ಕೆ.ಆರ್.ಮೊಹಲ್ಲಾದ ಉತ್ತರಾದಿಮಠ ರಸ್ತೆಯ 5ನೇ ಅಡ್ಡರಸ್ತೆಯಲ್ಲಿರುವ ಹೊಸ ಕಟ್ಟಡಕ್ಕೆ ಭೇಟಿ ನೀಡಬಹುದು ಎಂದು ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ-1ರ ವಲಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವರ ವಿರುದ್ಧ ರಾಜ್ಯಪಾಲರಿಗೆ ದೂರು ಖಂಡಿಸಿ

ಮಂಡ್ಯದಲ್ಲಿ 'ಕೈ' ಕಾರ್ಯಕರ್ತರ ಬೃಹತ್ ಪ್ರತಿಭಟನೆ



ಮಂಡ್ಯ, ಆ.8– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಕೃಷಿ ಇಲಾಖೆ ಅಧಿಕಾರಿಗಳ ಹೆಸರಿನಲ್ಲಿ ನಕಲಿ ಸಹಿ ಮಾಡಿ ರಾಜ್ಯಪಾಲರಿಗೆ ಸುಳ್ಳು ದೂರು ನೀಡಲಾಗಿದೆ ಎಂದು ಆರೋಪಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಶಾಸಕ ಗಣಿಗ ರವಿಕುಮಾರ್ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಮಂಗಳವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಎಸ್ಪಿ ಎನ್.ಯತೀಶ್ ಅವರಿಗೆ ಮನವಿ ಸಲ್ಲಿಸಿದರು. ಜೊತೆಗೆ ಜೆಡಿಎಸ್ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಘೋಷಣೆ ಕೂಗಿದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಚಲುವರಾಯಸ್ವಾಮಿ ವಿರುದ್ಧ ಷಡ್ಯಂತ್ರ ಮಾಡಲಾಗುತ್ತಿದೆ. ಯಾರು ಫೇಕ್ ಲೆಟರ್ ಬರೆದಿದ್ದಾರೆ ಎಂಬುದನ್ನು ತನಿಖೆ ಮಾಡಬೇಕು. ಯಾರು ಲೆಟರ್ ಪೋಸ್ಟ್ ಮಾಡಿದ್ದಾರೆ ಎಂಬುದಕ್ಕೆ ಸಿಸಿ ಕ್ಯಾಮರಾ ಪರಿಶೀಲಿಸಿದರೆ ತಿಳಿಯಲಿದ್ದು, ಈ ಬಗ್ಗೆ ಸಮಗ್ರ ತನಿಖೆ ಆಗಬೇಕು. ಆ ನಕಲಿ ಪತ್ರದಲ್ಲಿ ಕಳೆದ ಬಾರಿ ನಮ್ಮ 7 ಶಾಸಕರು ಗೆದ್ದಿದ್ದರು. ಈ ಬಾರಿ ಕಾಂಗ್ರೆಸ್ ಶಾಸಕರು ಗೆದ್ದಿದ್ದಾರೆ ಎಂದು ಬರೆಯಲಾಗಿದೆ. ಅಲ್ಲದೇ ಪತ್ರದಲ್ಲಿ ಕುಮಾರಸ್ವಾಮಿ ಅವರೇ ನ್ಯಾಯಕೊಡಿಸಿ ಎಂದಿದ್ದಾರೆ. ಇದರಿಂದ ಇದೊಂದು ನಕಲಿ ಪತ್ರ, ಅದರಲ್ಲಿ ಜೆಡಿಎಸ್‌ನವರ ಪಾತ್ರ ಇರುವುದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದರು.

ಯಾರು ಪತ್ರ ಬರೆದಿದ್ದಾರೆ ಅವರಿಗೆ ಪೊರಕೆ ಸೇವೆ ಮಾಡಬೇಕು. ಕೂಡಲೇ ಕಿಡಿಗೇಡಿಗಳನ್ನು ಬಂಧಿಸಬೇಕು. ಆರು ಮಂದಿ ಅಧಿಕಾರಿಗಳ ಸಹಿಯನ್ನು ಒಬ್ಬನೇ ಮಾಡಿದ್ದಾನೆ. ನಕಲಿ ವಿಳಾಸ ಹಾಕಿ ಪೋಸ್ಟ್ ಮಾಡಲಾಗಿದೆ. ಈ ಬಗ್ಗೆ ಸಮಗ್ರ ತನಿಖೆ ಮಾಡುವಂತೆ ಮನವಿ ಮಾಡಿದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಕುಮಾರಸ್ವಾಮಿ ಇಷ್ಟು ದಿನ ಮಂಡ್ಯ ಜಿಲ್ಲೆ ಹಾಳು ಮಾಡಿದ್ದಾಯಿತು. ಈಗಲಾದರೂ ಗೌರವಯುತವಾಗಿ ನಡೆದುಕೊಳ್ಳಲಿ. ದೇವೇಗೌಡರ ಹೊಟ್ಟೆಯಲ್ಲಿ ಇಂತಹ ಕೆಟ್ಟ ಮಗ ಹುಟ್ಟಿದ್ದು ನಮಗೆ ಬೇಸರವಾಗಿದೆ. ಹೆಚ್‌ಡಿಕೆ ಕೇವಲ ಸಿನಿಮಾ ಮಾಡೋಕೆ ಅಷ್ಟೇ ಲಾಯಕ್ಕಾಗಿದ್ದು, ರಾಜಕೀಯಕ್ಕೆ ಅವರು ಸೂಕ್ತರಲ್ಲ ಎಂದು ವಾಗ್ದಾಳಿ ನಡೆಸಿದರು.

ಮಾಜಿ ಶಾಸಕ ಹೆಚ್.ಬಿ.ರಾಮು ಮಾತನಾಡಿ, ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಜಿಲ್ಲೆಯ 7 ತಾಲೂಕಿನ ಕೃಷಿ ಇಲಾಖೆ ಸಹಾಯಕ ನಿರ್ದೇಶಕರ ನಕಲಿ ಸಹಿ ಮಾಡಿ ರಾಜ್ಯಪಾಲರಿಗೆ ದೂರು ನೀಡಿರುವುದು ವ್ಯವಸ್ಥಿತ ಷಡ್ಯಂತ್ರವಾಗಿದ್ದು, ಸಚಿವರಿಗೆ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಕಿಡಿಗೇಡಿಗಳು ಸೃಷ್ಟಿಸಿರುವ ನಕಲಿ ಪತ್ರವಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ನಟ ಹಾಗೂ ಚಲುವರಾಯಸ್ವಾಮಿ ಪುತ್ರ ಸಚಿನ್, ಕಾಂಗ್ರೆಸ್ ಮುಖಂಡರಾದ ಬಿ.ರೇವಣ್ಣ, ಬಿ.ಎಲ್. ದೇವರಾಜು, ವಿಜಯ್ ರಾಮೇಗೌಡ, ಕೃಷ್ಣೇಗೌಡ, ಕೀಲಾರ ರಾಧಾಕೃಷ್ಣ, ಟಿ.ಎಸ್.ಸತ್ಯಾನಂದ, ಸಿ.ಎಂ.ದ್ಯಾವಪ್ಪ, ತ್ಯಾಗರಾಜು, ಮುನವರ್‌ಖಾನ್, ಡಾ.ಕೃಷ್ಣ, ಸುರೇಶ್ ಕಂಠಿ, ವಿಜಯ್‌ಕುಮಾರ್, ನವೀನ್‌ಕುಮಾರ್, ಕಿಕ್ಕೇರಿ ಸುರೇಶ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗೀಗೌಡ, ಉಪಾಧ್ಯಕ್ಷ ಹಾಲಹಳ್ಳಿ ಅಶೋಕ್, ನಗರಸಭೆ ಸದಸ್ಯರಾದ ನಹಿಮ್, ಶ್ರೀಧರ್, ಎಂ.ಸಿ.ಶಿವಪ್ರಕಾಶ್, ಪವಿತ್ರ ಬೋರೇಗೌಡ, ಪೂರ್ಣಿಮಾ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಕುಮಾರಸ್ವಾಮಿಯೇ ಅಧಿಕಾರಿಗಳ ನಕಲಿ ಸಹಿ ಮಾಡಿರಬಹುದು

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಆರೋಪ



ಮಂಡ್ಯ, ಆ.8– ಜಿಲ್ಲೆಯ ಯಾವುದೇ ಅಧಿಕಾರಿಯೂ ರಾಜ್ಯಪಾಲರಿಗೆ ನನ್ನ ವಿರುದ್ಧ ಬರೆದಿರುವ ಪತ್ರಕ್ಕೆ ಸಹಿ ಹಾಕಿರುವ ಬಗ್ಗೆ ಹೇಳಿಕೆ ನೀಡಿಲ್ಲ. ಆದರೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಟ್ವೀಟ್ ಹಾಗೂ ಆರೋಪಗಳನ್ನು ಗಮನಿಸಿದರೆ ಅವರೇ ಅಧಿಕಾರಿಗಳ ಹೆಸರಲ್ಲಿ ನಕಲಿ ಸಹಿ ಹಾಕಿ ರಾಜ್ಯಪಾಲರಿಗೆ ಕಳುಹಿಸಿರಬಹುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪಿಸಿದರು.

ನಾಗಮಂಗಲದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿಗೆ ಒಕ್ಕಲಿಗರ ಏಳ್ಗೆ ಸಹಿಸಲು ಆಗುತ್ತಿಲ್ಲ. ಜೊತೆಗೆ ಮಂಡ್ಯ ಜಿಲ್ಲೆಯನ್ನು ಅವರಿಗೆ ದತ್ತು ಕೊಟ್ಟಿಲ್ಲ. ಮಾತಿನ ಮೇಲೆ ಪ್ರಜ್ಞೆ ಇಟ್ಟು ಅವರು ಮಾತನಾಡಬೇಕು. ಅವರ ಆಳ್ವಿಕೆಯಲ್ಲಿ ಏನೇನು ನಡೆದಿದೆ ಎಂಬುದನ್ನು ಈ ರಾಜ್ಯದ ಜನ ಗಮನಿಸಿದ್ದಾರೆ. ಇಂತಹ ಹೇಳಿಕೆಗಳಿಗೆಲ್ಲಾ ಬೆಲೆ ಕೊಡುವ ಪ್ರಶ್ನೆಯೇ ಇಲ್ಲ ಎಂದರು.

ನನ್ನ ವಿರುದ್ಧದ ಪಿತೂರಿಗಳಿಗೆ ಫಲ ದೊರಕುವುದಿಲ್ಲ: ಇದಕ್ಕೂ ಮುನ್ನ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಕೃಷಿ ಪ್ರಧಾನ ದೇಶ ಭಾರತದಲ್ಲಿ ಕೃಷಿಯನ್ನೇ ನಂಬಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶೇ.70 ರಷ್ಟು ಜನರು ಜೀವನ ನಡೆಸುತ್ತಿದ್ದಾರೆ. ಇಂತಹ ಮಹತ್ವದ ಕ್ಷೇತ್ರದಲ್ಲಿ ಒಂದಷ್ಟು ಸೇವೆ ಮಾಡುವ ಅವಕಾಶ ನನಗೆ ರಾಜಕೀಯವಾಗಿ ದೊರೆತಿದೆ. ನಾನೂ ಸಹ ಕೃಷಿಕ ಕುಟುಂಬದಿಂದಲೇ ಬಂದವನಾಗಿದ್ದು, ನನಗೆ ಲಭಿಸಿರುವ ಉತ್ತಮ ಅವಕಾಶ ಬಳಸಿಕೊಂಡು ರಾಜ್ಯದ ರೈತರಿಗೆ ಕೃಷಿ ಮಂತ್ರಿಯಾಗಿ ಏನೆಲ್ಲಾ ಸೇವೆ ಮಾಡಲು ಸಾಧ್ಯವಿದೆಯೋ ಆ ಎಲ್ಲಾ ಸೇವೆ ಸಲ್ಲಿಸಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ.

ಹೇಗಾದರೂ ಮಾಡಿ ನನ್ನನ್ನು ರಾಜಕೀಯವಾಗಿ ತುಳಿಯುವ ಉದ್ದೇಶದಿಂದ ಬಹಳ ವ್ಯವಸ್ಥಿತವಾಗಿ ಷಡ್ಯಂತ್ರ ಮತ್ತು ಪಿತೂರಿ ನಡೆಯುತ್ತಿದೆ. ನನ್ನನ್ನೇ ಗುರಿಯಾಗಿಸಿಕೊಂಡು ನಡೆಯುತ್ತಿರುವ ಈ ಕುತಂತ್ರದ ಹಿಂದೆ ಯಾರಿರಬಹುದು ಎನ್ನುವ ಬಗ್ಗೆ ಹೆಸರು ಹೇಳುವ ಅವಶ್ಯಕತೆಯಿಲ್ಲ. ಜನರು ರಾಜಕೀಯವಾಗಿ ಪ್ರಬುದ್ಧರಿದ್ದು ನನ್ನ ವಿರುದ್ಧ ಷಡ್ಯಂತ್ರ ರೂಪಿಸುತ್ತಿರುವುದು ಯಾರೆಂದು ಅವರೇ ನಿರ್ಧಾರ ಮಾಡುತ್ತಾರೆ ಎಂದು ತಿಳಿಸಿದ್ದಾರೆ.

ಸರ್ಕಾರ ಬದಲಾವಣೆ ಆದಾಗ ಸರ್ಕಾರಿ ನೌಕರರ ವರ್ಗಾವಣೆ ಒಂದು ಸಾಮಾನ್ಯ ಪ್ರಕ್ರಿಯೆ. ಇದು ಎಲ್ಲಾ ಹೊಸ ಸರ್ಕಾರಗಳು ಬಂದಾಗಲೂ ಸಹಜವಾಗಿ ನಡೆದಿವೆ. ಆದರೆ ವೈಯಕ್ತಿಕವಾಗಿ ನಾನು ಮೊದಲಿನಿಂದಲೂ ಈ ಪ್ರಕ್ರಿಯೆಯಲ್ಲಿ ಈ ಬಗ್ಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ನನ್ನ ಬಗ್ಗೆ ಬಹಳ ದ್ವೇಷ ಹೊಂದಿರುವ ಜನ ಹೇಗಾದರೂ ಸರಿ ನನ್ನ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ ತರುವ ಪ್ರಯತ್ನದ ಭಾಗವಾಗಿ ನಕಲಿ ಪತ್ರಗಳನ್ನು ಸೃಷ್ಟಿಸಿ ಸದರಿ ನಕಲಿ ಪತ್ರಗಳ ಆಧಾರದ ಮೇಲೆ ನೌಕರರನ್ನು ನೆಪವಾಗಿಸಿ ಷಡ್ಯಂತ್ರ ರೂಪಿಸುತ್ತಿದ್ದಾರೆ. ಈ ಷಡ್ಯಂತ್ರದ ಹಿಂದಿರುವವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಲಿದೆ ಎಂದು ಎಚ್ಚರಿಸಿದ್ದಾರೆ.

ಈಗಾಗಲೇ ರಾಜ್ಯದ ಜನತೆಗೆ ನನ್ನ ವಿರುದ್ಧ ಯಾರೆಲ್ಲ ಏನೇನು ರಾಜಕೀಯ ಮಸಲತ್ತು ನಡೆಸಿದ್ದಾರೆಂದು ತಿಳಿದಿದೆ. ಇದು ಸಹ ಅಂತಹುದೇ ಮುಂದುವರಿದ ಭಾಗ ಅಷ್ಟೇ. ನೇರವಾಗಿ ನನ್ನನ್ನು ಎದುರಿಸಲಾಗದೆ ನನ್ನ ವಿರುದ್ಧ ಈ ರೀತಿಯ ಕ್ಷುಲ್ಲಕ ರಾಜಕೀಯ ಮಾಡಲಾಗುತ್ತಿದೆ. ಕೃಷಿ ಖಾತೆ ಸಚಿವನಾಗಿ ರಾಜ್ಯದಲ್ಲಿ ಮಾಡಬಹುದಾದ ಬಹಳಷ್ಟು ಕೆಲಸವಿದ್ದು ಆ ಬಗ್ಗೆ ನನಗೆ ನನ್ನದೇ ಆದ ಕನಸುಗಳಿವೆ. ನನ್ನ ಖಾತೆ ಇತಿಮಿತಿಯೊಳಗೆ ನಾನು ರೈತರಿಗೆ ನೆರವಾಗಬಹುದಾದ ಅನೇಕ ಕಾರ್ಯಕ್ರಮಗಳನ್ನು ಮಾಡಲು ಯೋಜಿಸಲಾಗಿದೆ. ಇಂತಹ ಸಂದರ್ಭ ನನಗೆ ಮತ್ತಷ್ಟು ಹೆಸರು ಬರುವುದೆಂಬ ಭಯ ಮತ್ತು ಹತಾಶೆಯಿಂದ ಕೆಲವರು ಈ ಷಡ್ಯಂತ್ರದ ರಾಜಕಾರಣ ನಡೆಸುತ್ತಿದ್ದಾರೆ. ಸತ್ಯಕ್ಕೆ ದೂರವಾಗಿರುವ ಅವರ ಈ ಯಾವ ಕುತಂತ್ರಗಳು ಫಲ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

ಸಂಚಾರಿ ನಿಯಮ ಉಲ್ಲಂಘನೆ: ದಂಡದಲ್ಲಿ 50% ರಿಯಾಯಿತಿ

ಮಂಡ್ಯ, ಆ.8– ಪೊಲೀಸ್ ಇಲಾಖೆ ಸಂಚಾರಿ ಇ–ಚಲನ್‌ನಲ್ಲಿ 11, ಫೆಬ್ರವರಿ 2023 ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ಸಂಚಾರಿ ಇ–ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಸರ್ಕಾರವು 5, ಜುಲೈ 2023 ರಂದು ಉಲ್ಲೇಖದಲ್ಲಿ ಆದೇಶ ಹೊರಡಿಸಿದ್ದು ಈ ರಿಯಾಯಿತಿ ಸೆ.9 ರವರೆಗೆ ಇರುತ್ತದೆ. ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಿ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ವಾಣಿ ಎ.ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನಕುರಳಿ ಗ್ರಾಪಂ: ಗಾಯತ್ರಿ ಅಧ್ಯಕ್ಷೆ, ಶ್ರೀನಿವಾಸ್ ಉಪಾಧ್ಯಕ್ಷ



ಚಿನಕುರಳಿ, ಆ.8– ಚಿನಕುರಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಗಾಯತ್ರಿ ಕುಮಾರ್, ಉಪಾಧ್ಯಕ್ಷರಾಗಿ ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 24 ಸದಸ್ಯ ಬಲದ ಗ್ರಾಪಂನಲ್ಲಿ 21 ಮಂದಿ ಜೆಡಿಎಸ್, ಮೂವರು ಕಾಂಗ್ರೆಸ್ ಬೆಂಬಲಿತ ಸದಸ್ಯರಿದ್ದಾರೆ. ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗಾಯತ್ರಿ ಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಇವರಿಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪುಟ್ಟಮಾಯಿಗೌಡ ಘೋಷಿಸಿದರು. ಇದೇ ವೇಳೆ ಗ್ರಾಪಂ ಆವರಣದಲ್ಲಿ ಜಮಾಯಿಸಿದ್ದ ಬೆಂಬಲಿಗರು ನೂತನ ಅಧ್ಯಕ್ಷೆ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಅಧ್ಯಕ್ಷೆ ಗಾಯತ್ರಿ ಕುಮಾರ್ ಮಾತನಾಡಿ, ಮಾಜಿ ಸಚಿವ, ನಮ್ಮ ನಾಯಕ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಸಿ.ಶಿವಕುಮಾರ್ ಅವರ ಆಶೀರ್ವಾದ ಹಾಗೂ ಗ್ರಾಪಂನ ಎಲ್ಲಾ ಸದಸ್ಯರ ಸಹಕಾರದಿಂದ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ ಪಡೆದು ಗ್ರಾಪಂ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ. ಅಶೋಕ್, ಗ್ರಾಪಂ ಸದಸ್ಯ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಗೋಪಾಲಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗಣ್ಣೇಗೌಡ, ನಿರ್ದೇಶಕ ಮಂಜುನಾಥ್, ಡೇರಿ ಅಧ್ಯಕ್ಷ ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಪಾಪಣ್ಣ, ಗಂಗಾಧರ್, ಕಾಳೇಗೌಡ, ಜಯರಾಮೇಗೌಡ, ಗ್ರಾಪಂ ಸದಸ್ಯ ಸಿ.ಎ.ಲೋಕೇಶ್, ಮಂಜುಳಮಹದೇವು, ಸಿ.ಎಸ್.ಪರಮೇಶ್, ಮಹಮದ್ ಇಮ್ತಿಯಾಜ್ ಪಾಷ, ಕೃಷ್ಣೇಗೌಡ, ಇಂದ್ರಾಣಿ, ಕಮಲಮ್ಮ ಧನಲಕ್ಷ್ಮಿ, ಸತೀಶ್, ಸುಶೀಲ, ನರಸಿಂಹಶೆಟ್ಟಿ, ದಿವ್ಯ, ಶ್ವೇತ, ವಸಂತೇಗೌಡ, ಎ.ಜಿ. ನಾಗೇಗೌಡ, ಶಿವಮ್ಮ, ದೇವರಾಜು, ಜಿ.ಆರ್.ಸುಮ, ಪಿಡಿಓ ಆರತಿಕುಮಾರ್, ಕಾರ್ಯದರ್ಶಿ ವಿಶ್ವನಾಥಚಾರಿ ಸೇರಿದಂತೆ ಮುಖಂಡರು, ಸಿಬ್ಬಂದಿಗಳು ಹಾಜರಿದ್ದರು.

ಪ್ರತ್ಯೇಕ ಪ್ರಕರಣ: ಇಬ್ಬರ ಸಾವು


ಶ್ರೀರಂಗಪಟ್ಟಣ, ಆ.8– ಪ್ರತ್ಯೇಕ ಪ್ರಕರಣಗಳಲ್ಲಿ ಟಿಪ್ಪರ್ ಡಿಕ್ಕಿ ಹೊಡೆದು ಇಬ್ಬರು ಸಾವನ್ನಪ್ಪಿದ್ದಾರೆ.

ಸೈಕಲ್ ಸವಾರ ಸಾವು: ಸೈಕಲ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ದೊಡ್ಡಪಾಳ್ಯ ಬಳಿ ನಡೆದಿದೆ.

ತಿ.ನರಸೀಪುರ ತಾಲೂಕಿನ ಅತ್ತಹಳ್ಳಿ ನಿವಾಸಿ ರಂಗಸ್ವಾಮಿ(45) ಸ್ಥಳದಲ್ಲೇ ಸಾವನ್ನಪ್ಪಿದವರು. ಕಾರ್ಯನಿಮಿತ್ತ ದೊಡ್ಡಪಾಳ್ಯಕ್ಕೆ ಆಗಮಿಸಿದ್ದ ಈತ ವಾಪಸ್ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಟಿಪ್ಪರ್ ಸೈಕಲ್‌ಗೆ ಡಿಕ್ಕಿ ಹೊಡೆದು ಆತನ ತಲೆ ಮೇಲೆ ಹರಿದಿದೆ. ಪರಿಣಾಮ ತೀವ್ರ ಗಾಯಗೊಂಡ ರಂಗಸ್ವಾಮಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಕೆರೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಟಿಪ್ಪರ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸ್ಕೂಟರ್ ಸವಾರ ಸಾವು: ಸ್ಕೂಟರ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೋಡಿಶೆಟ್ಟಿಪುರದ ಬಳಿ ಸೋಮವಾರ ತಡರಾತ್ರಿ ನಡೆದಿದೆ. ಬೆಂಗಳೂರಿನ ನಾಗರಬಾವಿ ನಿವಾಸಿ ನಾಸೀರ್ ಪಾಷ(32) ಸಾವನ್ನಪ್ಪಿದವರು. ಈತ ತನ್ನ ಜ್ಯುಪಿಟರ್ ಸ್ಕೂಟರ್‌ನಲ್ಲಿ ಪತ್ನಿ ರುಕ್ಸಾನರೊಂದಿಗೆ ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದರು. ಈ ವೇಳೆ ಕೋಡಿಶೆಟ್ಟಿಪುರದ ಬಳಿ ಎದುರಿನಿಂದ ಬಂದ ಟಿಪ್ಪರ್ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ನಾಸೀರ್ ಪಾಷ, ರುಕ್ಸಾನರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಾಸೀರ್‌ಪಾಷ ಸಾವನ್ನಪ್ಪಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೋರಯ್ಯ ನಿಧನ



ಕೆಆರ್.ಪೇಟೆ, ಆ.8– ತಾಲೂಕಿನ ಬಂಡಿಹೊಳೆ ಗ್ರಾಮದ ನಿವಾಸಿ, ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ಬೋರಯ್ಯ(76) ಮಂಗಳವಾರ ನಿಧನರಾದರು. ಮೃತರು ಸರ್ವೇಯರ್ ಸಾನಂದ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದ್ವೇಷದ ದಳ್ಳುರಿಯಿಂದ ದೇಶದಲ್ಲಿ ಹಿಂಸಾಚಾರ: ಎಸ್‌ಡಿಪಿಐ



ಮೈಸೂರು, ಆ.8 (ಎಸ್‌ಪಿಎನ್)– ಆರ್‌ಎಸ್‌ಎಸ್, ಬಿಜೆಪಿ ಹಬ್ಬಿಸಿದ ದ್ವೇಷದ ದಳ್ಳುರಿಗೆ ಮಣಿಪುರದಲ್ಲಿ ಜನಾಂಗೀಯ ಕಲಹ, ಹರಿಯಾಣದಲ್ಲಿ ಕೋಮುಗಲಭೆ, ಮಹಾರಾಷ್ಟ್ರದಲ್ಲಿ ಆರ್‌ಪಿಎಸ್ ಯೋಧನ ಕೋಮು ದ್ವೇಷಕ್ಕೆ ರೈಲಿನಲ್ಲಿ ಅಮಾಯಕರ ಬಲಿಯಾಗಿರುವುದನ್ನು ಖಂಡಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರು ಉದಯಗಿರಿಯ ಸಿಗ್ನಲ್ ಬಳಿ ಪ್ರತಿಭಟನೆ ನಡೆಸಿದರು.

ಬಿಜೆಪಿ ದ್ವೇಷದ ರಾಜಕೀಯಕ್ಕೆ ಕಳೆದ ಮೂರು ತಿಂಗಳಿಂದ ಮಣಿಪುರ ಹೊತ್ತಿ ಉರಿಯು ತ್ತಿದೆ. ಕೇಂದ್ರ ಸರ್ಕಾರ ಅಲ್ಲಿನ ಜನರಿಗೆ ಅಭಯ ನೀಡಿ, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ದಿಟ್ಟ ಕ್ರಮ ಕೈಗೊಳ್ಳಬೇಕಿತ್ತು. ಅದ್ಯಾವುದು ಇಲ್ಲಿಯವರೆಗೆ ಆಗಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಹರಿಯಾಣದಲ್ಲಿ ನಡೆಯುತ್ತಿರುವ ಹಿಂಸಾಚಾರ ಭುಗಿಲೆದ್ದಿದೆ. ಮಹಾರಾಷ್ಟ್ರದಲ್ಲಿ ರೈಲ್ವೆ ಸಿಬ್ಬಂದಿ ಹಾರಿಸಿದ ಗುಂಡಿಗೆ ಮೂವರು ಪ್ರಯಾಣಿಕರು ಬಲಿಯಾಗಿದ್ದಾರೆ. ದೇಶದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಈ ಕೃತ್ಯದಲ್ಲಿ ತೊಡಗಿರುವ ಆರೋಪಿಗಳ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡು ದೇಶದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವಂತೆ ಮನವಿ ಮಾಡಿದ್ದಾರೆ.

ಈ ಪ್ರತಿಭಟನೆಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ವುಲ್ಲಾ ಖಾನ್, ಅಂಜತ್‌ಖಾನ್, ಮುಖಂಡರಾದ ಎಸ್. ಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಸಫಿವುಲ್ಲಾ, ರಾಜ್ಯ ಸಮಿತಿ ಸದಸ್ಯರಾದ ಮೌಲನಾ ನೂರುದ್ದೀನ್, ಜಿಲ್ಲಾ ಕಾರ್ಯದರ್ಶಿ ಟಿ.ಎಂ.ಜಾವಿದ್, ಮಹಮ್ಮದ್ ಷಫೀವುಲ್ಲಾ, ಜಿಲ್ಲಾ ಕೋಶಾಧಿಕಾರಿ ಎಂ.ಎನ್. ಫಿರ್ದೋಸ್, ಜ್ಞಾನಪ್ರಕಾಶ್ ಉಪಸ್ಥಿತರಿದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	113.30 ಅಡಿ
ಒಳಹರಿವು	5264 ಕ್ಯುಸೆಕ್
ಹೊರಹರಿವು	5302 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಮಂಗಳವಾರ	2283.00 ಅಡಿ
ಒಳ ಹರಿವು	4000 ಕ್ಯುಸೆಕ್
ಹೊರ ಹರಿವು	5000 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2858.41 ಅಡಿ
ಒಳ ಹರಿವು	1890 ಕ್ಯುಸೆಕ್
ಹೊರ ಹರಿವು	2800 ಕ್ಯುಸೆಕ್

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



ಸಚಿವರಾದ ನಂತರ ಪ್ರಥಮ ಬಾರಿಗೆ ಮಂಗಳವಾರ ಮೈಸೂರಿಗೆ ಆಗಮಿಸಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರನ್ನು ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ "ಸಮರ್ಥ ಯುವ ನೇತಾರ" ಬಿರುದನ್ನು ನೀಡುವ ಮೂಲಕ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶಗೌಡ, ಸಾಹುಕಾರ ಚೆನ್ನಯ್ಯ ಬ್ಲಾಕ್ ಅಧ್ಯಕ್ಷ ಜಿ.ಎನ್. ಮಂಜುನಾಥ್, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಉಪಾಧ್ಯಕ್ಷೆ ಲತಾ ರಂಗನಾಥ್, ಪದ್ಮನಾಭನ್, ಚಾಮರಾಜ ಕ್ಷೇತ್ರದ ಆರ್. ಜಗದೀಶ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಯೋಗೇಶ್, ಉಮೇಶ್, ಹೇಮಂತ್‌ಕುಮಾರ್, ಸಂತೋಷ್, ಚಂದ್ರಶೇಖರ್ ಇನ್ನಿತರರು ಹಾಜರಿದ್ದರು.

ಇಂದಿನಿಂದ ಕ್ರೀಡಾ ಸಚಿವರ ಜಿಲ್ಲಾ ಪ್ರವಾಸ

ಮೈಸೂರು, ಆ. 8–ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಬಿ. ನಾಗೇಂದ್ರ ಅವರು ನಾಳೆ (ಆ.9) ಮಧ್ಯಾಹ್ನ 1:30ಕ್ಕೆ ಮೈಸೂರಿನ ಹೆಚ್.ಡಿ. ಕೋಟೆ ತಾಲೂಕಿಗೆ ಭೇಟಿ ನೀಡುವರು. ಮಧ್ಯಾಹ್ನ 2:45ಕ್ಕೆ ಹೆಚ್.ಡಿ.ಕೋಟೆ ತಾಲೂಕಿನ ಸೊಳ್ಳೆಪುರ ಗ್ರಾಮದಲ್ಲಿನ ಏಕಲವ್ಯ ಮಾದರಿ ವಸತಿ ಶಾಲೆಗೆ ಭೇಟಿ ನೀಡಿ, ಮಧ್ಯಾಹ್ನ 3 ಗಂಟೆಗೆ ವಿಶ್ವ ಬುಡಕಟ್ಟು ದಿನಾಚರಣೆ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಆಯ್ಕೆಯಾದ ವಿವಿಧ ಫಲಾನುಭವಿಗಳಿಗೆ ಹೆಚ್.ಡಿ ಕೋಟೆಯ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಸವಲತ್ತುಗಳ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 4:30ಕ್ಕೆ ಹೆಚ್.ಡಿ.ಕೋಟೆ ತಾಲೂಕಿನ ಬಸವನಗಿರಿ ಹಾಡಿಯಲ್ಲಿನ ಆಶ್ರಮ ಶಾಲೆಗಳಿಗೆ ಭೇಟಿ, ಸಂಜೆ 5:30ಕ್ಕೆ ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ ಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಬುಡಕಟ್ಟು ಆದಿವಾಸಿ ಜನರು ವಾಸಿಸುವ ಹಾಡಿಗಳಿಗೆ ಭೇಟಿ ನೀಡುವರು.

ಆ.10 ರಂದು ಬೆಳಗ್ಗೆ 6:30 ರಿಂದ 10 ಗಂಟೆಯವರೆಗೆ ಆದಿವಾಸಿ ವೀಕ್ಷಕರೊಂದಿಗೆ ಹಾಡಿಗಳಲ್ಲಿನ ಸಮಸ್ಯೆಗಳ ಕುರಿತು ವೀಕ್ಷಣೆ ನಡೆಸುವರು. ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆಯ ಗೋಳೂರು ಹಾಡಿಯಿಂದ ನಿರ್ಗಮಿಸಿ, ಮಧ್ಯಾಹ್ನ 12:30ಕ್ಕೆ ಜೆ.ಎಸ್.ಎಸ್ ಸುತ್ತೂರು ಮಠಕ್ಕೆ ಭೇಟಿ ನೀಡುವರು, ಮಧ್ಯಾಹ್ನ 2:30 ರಿಂದ ಸಂಜೆ 4 ಗಂಟೆವರೆಗೆ ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದ ವೀಕ್ಷಣೆ ಮತ್ತು ಮೈಸೂರು ದಸರಾ ಕ್ರೀಡಾಕೂಟ –2023 ಆಯೋಜನೆ ಕುರಿತು ಪೂರ್ವಸಿದ್ಧತಾ ಸಭೆಯಲ್ಲಿ ಪಾಲ್ಗೊಳ್ಳುವರು, ಸಂಜೆ 4 ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಬಿ. ದೇವೇಂದ್ರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಣಿಪುರ ದೌರ್ಜನ್ಯ, ಸೌಜನ್ಯ ಕೊಲೆ ಮರುತನಿಖೆಗೆ ಆಗ್ರಹಿಸಿ ಪ್ರತಿಭಟನೆ



ಮಡಿಕೇರಿ, ಆ.8– ಮಣಿಪುರದಲ್ಲಿ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಮತ್ತು ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಅವಮಾನಿಸಿದ ಘಟನೆಯನ್ನು ಖಂಡಿಸಿ ಹಾಗೂ ಹತ್ಯೆಯಾದ ಉಜಿರೆಯ ಸೌಜನ್ಯ ಪ್ರಕರಣವನ್ನು ಮರು ತನಿಖೆ ನಡೆಸುವಂತೆ ಆಗ್ರಹಿಸಿ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಮಿತಿಯ ಪ್ರಮುಖರು ಹಾಗೂ ಪದಾಧಿಕಾರಿಗಳು ಘೋಷಣೆಗಳನ್ನು ಕೂಗಿ ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಜಿಲ್ಲಾ ಸಂಚಾಲಕಿ ಗಾಯತ್ರಿ ನರಸಿಂಹ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಸುಮಾರು 3 ತಿಂಗಳಿನಿಂದ ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿ ಹೋಗಿರುವ ಮಣಿಪುರದಲ್ಲಿ ಕಾನೂನು, ಸುವ್ಯವಸ್ಥೆ ನಿಯಂತ್ರಿಸುವಲ್ಲಿ ವಿಫಲವಾಗಿರುವ ಮಣಿಪುರ ಬೀರೇನ್ ಸಿಂಗ್ ನೇತೃತ್ವದ ಸರ್ಕಾರವನ್ನು ತಕ್ಷಣ ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಜಾರಿ ಮಾಡಬೇಕು, ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಮತ್ತಷ್ಟು ಅಮಾಯಕ ಜೀವಗಳು ಬಲಿಯಾಗುವುದನ್ನು ತಡೆಯಬೇಕು. ದೇಶವ್ಯಾಪಿ ದ್ವೇಷದ ಕಿಚ್ಚು ಹಬ್ಬುವ ಮುನ್ನ ಪ್ರಧಾನಮಂತ್ರಿಗಳು ಎಚ್ಚೆತ್ತುಕೊಳ್ಳಬೇಕು. ದೇಶದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ವಾಸ್ತವತೆಯನ್ನು ಅರಿತು ಅಮಾಯಕರ ರಕ್ಷಣೆಗೆ ಬರಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿನಿ ಸೌಜನ್ಯಳ ಹತ್ಯೆಯಾಗಿ 11 ವರ್ಷಗಳೇ ಕಳೆದರೂ ನೈಜ ಆರೋಪಿಯನ್ನು ಬಂಧಿಸದೇ ಇರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದ ಗಾಯತ್ರಿ ನರಸಿಂಹ, ಎಸ್‌ಐಟಿ ತನಿಖೆ ಮೂಲಕ ತಪ್ಪಿತಸ್ಥರನ್ನು ಪತ್ತೆ ಮಾಡಿ ಶಿಕ್ಷೆಗೆ ಗುರಿ ಮಾಡಬೇಕು. ಆ ಮೂಲಕ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು. ಬಳಿಕ ಬೇಡಿಕೆಯ ಮನವಿ ಪತ್ರವನ್ನು ಪ್ರತಿಭಟನಾಕಾರರು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದರು.

ಜಿಲ್ಲಾ ಸಂಘಟನಾ ಸಂಚಾಲಕ ಮನೋಜ್ ಕುಮಾರ್, ಬಾವ ಮಾಲ್ದಾರೆ, ಬೋಜ, ಮಹಿಳಾ ಒಕ್ಕೂಟದ ಜಿಲ್ಲಾ ಸಂಚಾಲಕರಾದ ಶಶಿಕಲಾ, ಭಾಗ್ಯವತಿ, ವಿರಾಜಪೇಟೆ ತಾಲೂಕು ಸಂಚಾಲಕ ಮನು, ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕಿ ತೀರ್ಥ, ಸದಸ್ಯರಾದ ವೈ.ಕೆ. ಅಯ್ಯಪ್ಪ, ವಿರೇಶ್, ಭರತ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ರೈಲ್ವೆ ಯೋಜನೆ ವಿರೋಧಿಸಿ ಪ್ರತಿಭಟನೆ ಪ್ರಕರಣ

ಎಲ್ಲಾ 11 ಆರೋಪಿಗಳು ಖುಲಾಸೆ



ಮಡಿಕೇರಿ, ಆ.8– ಕೊಡಗಿನ ಮೂಲಕ ಕೇರಳ ರಾಜ್ಯಕ್ಕೆ ಹಾಗೂ ಮಡಿಕೇರಿಗೆ ರೈಲ್ವೆ ಯೋಜನೆ ರೂಪಿಸುವುದನ್ನು ವಿರೋಧಿಸಿ ಕೊಡಗು ಸಂರಕ್ಷಣಾ ವೇದಿಕೆ ನಡೆಸಿದ ಹೋರಾಟದ ಸಂದರ್ಭ ವೇದಿಕೆಯ ಪ್ರಮುಖರ ಮೇಲೆ ದಾಖಲಾಗಿದ್ದ ಪ್ರಕರಣದ ಬಗ್ಗೆ ಮಡಿಕೇರಿ ಹಿರಿಯ ಸಿವಿಲ್ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ನ್ಯಾಯಾಧೀಶರು ತೀರ್ಪು ಪ್ರಕಟಿಸಿದ್ದು ಎಲ್ಲಾ 11 ಆರೋಪಿಗಳನ್ನು ಆರೋಪದಿಂದ ಮುಕ್ತಗೊಳಿಸಿದ್ದಾರೆ.

2018ರ ಡಿಸೆಂಬರ್ 18ರಂದು ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಿಂದ ಗಾಂಧಿ ಮೈದಾನದವರೆಗೆ ರೈಲ್ವೆ ಯೋಜನೆಯನ್ನು ವಿರೋಧಿಸಿ ಕೊಡಗು ಸಂರಕ್ಷಣಾ ವೇದಿಕೆಯಿಂದ ಬೃಹತ್ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭ ಗಾಂಧಿ ಮೈದಾನಕ್ಕೆ ಜಾಥಾದ ಬೆಂಬಲಿಗರು ಆಗಮಿಸುತ್ತಿದ್ದಂತೆ ಅಲ್ಲಿಗೆ ಕೆಲವು ಜನರ ಗುಂಪು ಆಗಮಿಸಿ ವೇದಿಕೆಯ ಮುಂಭಾಗದಲ್ಲಿ ಗಲಭೆ ಎಬ್ಬಿಸಿದ್ದಲ್ಲದೇ ವೇದಿಕೆ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ್ದರು. ಈ ಹಿನ್ನಲೆಯಲ್ಲಿ ಸ್ಥಳಕ್ಕೆ ಆಗಮಿಸಿದ್ದ ಅಂದಿನ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ.ಪನ್ನೇಕರ್ ಕೊಡಗು ಸಂರಕ್ಷಣಾ ವೇದಿಕೆಯ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ್ದ ಗುಂಪನ್ನು ಅಲ್ಲಿಂದ ಹೊರಹಾಕಿ ಕಾರ್ಯಕ್ರಮ ನಡೆಸಲು ಅನುವು ಮಾಡಿದ್ದರು.

ಈ ಬಗ್ಗೆ ಕೊಡಗು ಸಂರಕ್ಷಣಾ ವೇದಿಕೆಯ ಅಧ್ಯಕ್ಷ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ ಹಾಗೂ ಸಂಚಾಲಕ ಕರ್ನಲ್ ಚೆಪ್ಪುಡೀರ ಪಿ.ಮುತ್ತಣ್ಣ ಅವರುಗಳು ಮಡಿಕೇರಿ ಟೌನ್ ಪೊಲೀಸ್ ಠಾಣೆಯಲ್ಲಿ ಅಡ್ಡಿಪಡಿಸಿದ್ದ ಗುಂಪಿನ 27 ಜನರ ವಿರುದ್ಧ ದೂರು ದಾಖಲಿಸಿದ್ದರು. ಈ ದೂರು ದಾಖಲಾಗುತ್ತಿದ್ದಂತೆ ಕೊಡಗು ಸಂರಕ್ಷಣಾ ವೇದಿಕೆಯ 11 ಪ್ರಮುಖರ ವಿರುದ್ಧ ಕೆ.ಮಧು ಬೋಪಣ್ಣ, ಬಿದ್ದಾಟಂಡ ಜಿನ್ನು ನಾಣಯ್ಯ, ನಂದಿನೆರವಂಡ ರವಿ ಬಸಪ್ಪ, ತಳೂರು ಕಿಶೋರ್ ಕುಮಾರ್ ಮತ್ತು ಇತರರು ಸೇರಿ ಪ್ರತಿ ದೂರು ಸಲ್ಲಿಸಿದ್ದರು. ಆದರೆ ಆ ನಂತರ ನಡೆದ ವಿದ್ಯಮಾನದಲ್ಲಿ ಪ್ರತಿದೂರು ನೀಡಿದ್ದ ಕೆ. ಮಧು ಬೋಪಣ್ಣ ಅವರ ಗುಂಪಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ಬಿ ರಿಪೋರ್ಟ್ ನೀಡಿತ್ತು.

ಪೊಲೀಸರು ಕೊಡಗು ಸಂರಕ್ಷಣಾ ವೇದಿಕೆಯ 11 ಪ್ರಮುಖರಾದ ವೇದಿಕೆಯ ಅಧ್ಯಕ್ಷ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ, ಸಂಚಾಲಕ ಕರ್ನಲ್ ಚೆಪ್ಪುಡೀರ ಪಿ. ಮುತ್ತಣ್ಣ, ಕಾವೇರಿ ಸೇನೆಯ ಅಧ್ಯಕ್ಷ ಕಿಮ್ಮುಡಿರ ರವಿಚಂಗಪ್ಪ, ಕೊಡಗು ಏಕೀಕರಣ ರಂಗದ ತಮ್ಮು ಪೂವಯ್ಯ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಲ್ಲಮಾಡ ಪ್ರಭು ಪೂಣಚ್ಚ, ಕೊಡಗು ಬೆಳೆಗಾರ ಒಕ್ಕೂಟದ ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಮಾಚಿಮಾಡ ಎಂ.ರವೀಂದ್ರ, ನಿವೃತ್ತ ಮೇಜರ್ ಬಿದ್ದಂಡ ನಂಜಪ್ಪ, ಯುಕೊ ಸಂಘಟನೆಯ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಕೊಡಗು ಬೆಳೆಗಾರ ಒಕ್ಕೂಟದ ತಾಂತ್ರಿಕ ಸಲಹೆಗಾರ ಚೆಪ್ಪುಡೀರ ಶೆರಿಸುಬ್ಬಯ್ಯ, ಪೊನ್ನಂಪೇಟೆ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಕೋಟೆರ ಕಿಶನ್ ಉತ್ತಪ್ಪ ಇವರುಗಳ ವಿರುದ್ಧ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದರು.

ದಾಖಲಾಗಿದ್ದ ಪ್ರಕರಣದ ಬಗ್ಗೆ ಕಳೆದ 4 ವರ್ಷಗಳಿಂದ ನಡೆದ ವಿಚಾರಣೆಯ ಅಂತಿಮ ತೀರ್ಪು ಪ್ರಕಟಿಸಿದ ನ್ಯಾಯಾಲಯ ಆರೋಪಿಗಳನ್ನು ದೋಷ ಮುಕ್ತಗೊಳಿಸಿದೆ. ಪ್ರಕರಣದ ಪರ ವಕೀಲರಾದ ಪಾಸುರ ಪ್ರೀತಮ್ ಮತ್ತು ಅಚ್ಚಾಂಡೀರ ಪವನ್ ಪೆಮ್ಮಯ್ಯ ವಾದಿಸಿದ್ದರು.

ರೈತರಿಗೆ ತೆಂಗಿನ ಗಿಡ ವಿತರಣೆ



ಕುಶಾಲನಗರ, ಆ.8– ಹಾರಂಗಿಯ ತೋಟಗಾರಿಕಾ ಕ್ಷೇತ್ರದ ಆವರಣದಲ್ಲಿ 2022–23ನೇ ಸಾಲಿನಲ್ಲಿ ತೋಟಗಾರಿಕಾ ಇಲಾಖೆಯ ವತಿಯಿಂದ ಬೆಳೆಸಲಾದ ತೆಂಗಿನ ಗಿಡಗಳನ್ನು ರೈತರಿಗೆ ಶಾಸಕ ಮಂಥರ್ ಗೌಡ ವಿತರಿಸಿದರು.

ತೋಟಗಾರಿಕಾ ಪಿತಾಮಹ ಎಂ.ಎಚ್. ಮರಿಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮಿಸುವ ಮೂಲಕ ಶಾಸಕರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭ ತೋಟಗಾರಿಕಾ ಇಲಾಖೆಯ ನಿರ್ದೇಶಕಿ ಶೋಭಾ, ಸಹಾಯಕ ನಿರ್ದೇಶಕ ವರದರಾಜ್, ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಮುಖಂಡರಾದ ನಟೇಶ್ ಗೌಡ, ಹರೀಶ ಮತ್ತಿತರರು ಇದ್ದರು.

ಆದಿವಾಸಿಗಳಿಗೆ ಮೂಲಸೌಕರ್ಯಕ್ಕೆ ಆಗ್ರಹಿಸಿ ಆ.15ರಂದು ಪೊನ್ನಂಪೇಟೆಯಲ್ಲಿ ಉಪವಾಸ



ಗೋಣಿಕೊಪ್ಪ, ಆ.8– ಆದಿವಾಸಿಗಳಿಗೆ ಮೂಲಸೌಕರ್ಯ ಒದಗಿಸಿಕೊಡುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಆ.15ರಂದು ಸ್ವಾತಂತ್ರ್ಯ ದಿನಾಚರಣೆಯಂದು ಪೊನ್ನಂಪೇಟೆಯಲ್ಲಿ ಉಪವಾಸ ಸತ್ಯಾಗ್ರಹ ಆಚರಿಸಲಾಗುವುದು ಎಂದು ದಲಿತ ಸಂಘರ್ಷ ಸಮಿತಿ ವಿಭಾಗೀಯ ಸಂಚಾಲಕ ಕೃಷ್ಣಪ್ಪ ತಿಳಿಸಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಪೊನ್ನಂಪೇಟೆ ಬಸ್ ನಿಲ್ದಾಣದಿಂದ ತಹಸೀಲ್ದಾರ್ ಕಚೇರಿವರೆಗೆ ಮೆರವಣಿಗೆ ಮೂಲಕ ತೆರಳಿ ಕಚೇರಿ ಎದುರು ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಲಿತರು, ಆದಿವಾಸಿಗಳು ಮನೆ, ಕುಡಿಯುವ ನೀರು, ವಿದ್ಯುತ್ ಮೂಲ ಸೌಕರ್ಯದಿಂದ ವಂಚಿತರಾಗಿದ್ದಾರೆ. ಈ ಬಗ್ಗೆ ಸಾಕಷ್ಟು ಬಾರಿ ಮನವಿ, ಪ್ರತಿಭಟನೆ, ಒತ್ತಾಯ ಮಾಡಿದ್ದರೂ ಕೂಡ ಸರ್ಕಾರ ಸ್ಪಂದಿಸುತ್ತಿಲ್ಲ. ಹೈಸೊಡ್ಲೂರು ಭಾಗದಲ್ಲಿರುವ 74 ಕುಟುಂಬಗಳು ಮೂಲ ಸೌಕರ್ಯದಿಂದ ವಂಚಿತರಾಗಿದ್ದಾರೆ. ಕೆ.ಬಾಡಗ ಗ್ರಾಮದಲ್ಲಿರುವ ಸರ್ವೆ ನಂಬರ್ 29/1 ಸರ್ಕಾರಿ ಜಾಗದಲ್ಲಿರುವವರಿಗೆ ಅಧಿಕಾರಿಗಳು ಐಟಿಡಿಪಿ ಇಲಾಖೆ ಮೂಲಕ ಜಾಗ ಮಂಜೂರು ಮಾಡುವ ಭರವಸೆ ಈಡೇರಿಲ್ಲ. ಸೂಕ್ತ ಸ್ಪಂದನೆಗೆ ಸತ್ಯಾಗ್ರಹ ನಡೆಸಲಾಗುತ್ತಿದೆ ಎಂದರು. ಸದಸ್ಯ ಚಂದ್ರ ಮಾತನಾಡಿ, ಹೈಸೊಡ್ಲೂರು ಪೈಸಾರಿ ಜಾಗದಲ್ಲಿ 6 ವರ್ಷಗಳಿಂದ ನೆಲೆಸಿರುವವರಿಗೆ ಕುಡಿಯುವ ನೀರು, ಶೌಚಗೃಹ ವ್ಯವಸ್ಥೆ ಕಲ್ಪಿಸಿಲ್ಲ. ಈ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ. ಜಾಗವನ್ನು ನಮಗೆ ನೀಡಲಿ ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಸಂಚಾಲಕರಾದ ಗಣೇಶ, ಕರ್ಕು, ಜವರ ಇದ್ದರು.

ಆರ್ಜಿ ಗ್ರಾಪಂ ಕಾಂಗ್ರೆಸ್, ಬಿಜೆಪಿ ಆಡಳಿತ

ವಿರಾಜಪೇಟೆ, ಆ.8– ವಿರಾಜಪೇಟೆ ಬಳಿಯ ಆರ್ಜಿ ಗ್ರಾಮ ಪಂಚಾಯತಿಯ ಎರಡನೇ ಅವಧಿಗೆ ಅಧ್ಯಕ್ಷರಾಗಿ (ಹಿಂದುಳಿದ ವರ್ಗ 'ಎ')ಕಾಂಗ್ರೆಸ್ ಬೆಂಬಲಿತ ಸದಸ್ಯೆ ಫಾತೀಮಾ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದ ಬಿ.ಜೆ.ಪಿ ಬೆಂಬಲಿತ ಅಭ್ಯರ್ಥಿ ಎಚ್.ಕೆ.ಕವಿತಾ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ವಿರಾಜಪೇಟೆ ಪುರಸಭೆ ಮುಖ್ಯಾಧಿಕಾರಿ ಎ.ಚಂದ್ರಕುಮಾರ್ ಘೋಷಿಸಿದರು. ಈ ಸಂದರ್ಭ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿ.ಮಣಿ, ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗ ಘಟಕದ ಬ್ಲಾಕ್ ಅಧ್ಯಕ್ಷ ಸಿ.ಕೆ.ಪೃಥ್ವಿನಾಥ್, ಪ್ರಮುಖರಾದ ಅಬ್ದುಲ್ ಸಲಾಂ, ಜೋಕಿಂ ರಾಡ್ರಿಗಾಸ್, ಮತ್ತಿತರರು ಉಪಸ್ಥಿತರಿದ್ದು, ಪಂಚಾಯತಿಯ 10 ಸದಸ್ಯರುಗಳು ಹಾಜರಿದ್ದರು.



ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಆ.8– ಮಡಿಕೇರಿ ಲೋಕಾಯುಕ್ತ ಅಧಿಕಾರಿಗಳು ಆ.9 ರಂದು ವಿರಾಜಪೇಟೆ ತಹಸೀಲ್ದಾರ್ ಕಚೇರಿ ಹಾಗೂ ಆ.11 ರಂದು ಮಡಿಕೇರಿ ತಹಸೀಲ್ದಾರ್ ಕಚೇರಿಯಲ್ಲಿ ಬೆಳಗ್ಗೆ 11 ರಿಂದ 1 ರವರೆಗೆ ದೂರು ಸ್ವೀಕರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿ ಸ್ವೀಕರಿಸಲಾಗುವುದು. ಕೆಲಸ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ದ ಸಾರ್ವಜನಿಕರು ದೂರುಗಳನ್ನು ನೀಡಬಹುದು. ಮಾಹಿತಿಗೆ ದೂ.ಸಂ.08272–295297 ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಜಿಂಕೆ ಬೇಟೆ: ಇಬ್ಬರು ಆರೋಪಿಗಳ ಬಂಧನ

ಹನೂರು, ಆ.8– ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹನೂರು ಶಾಖೆ ಎಲ್ಲೇಮಾಳ ಗಸ್ತಿನ ಅರಕನಹಳ್ಳ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಜಿಂಕೆ ಬೇಟೆಯಾಡಿದ್ದ ಇಬ್ಬರು ಬೇಟೆಗಾರರನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಹನೂರು ತಾಲೂಕು ಕಾಂಚಳ್ಳಿ ಗ್ರಾಮದ ನಿವಾಸಿ ನಾಗರಾಜು(38), ಹನೂರು ನಿವಾಸಿ ತೇಜಸ್(21) ಬಂಧಿತ ಆರೋಪಿಗಳು. ಇವರು ಅರಕನಹಳ್ಳ ಅರಣ್ಯ ಪ್ರದೇಶದಲ್ಲಿ ಜಿಂಕೆ ಬೇಟೆಯಾಡಿ ಮಾಂಸವನ್ನು ಕತ್ತರಿಸುತ್ತಿದ್ದ ವೇಳೆ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ.ಸಂತೋಷ್ ಕುಮಾರ್, ಹನೂರು ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಸ್.ಶಶಿಧರ್ ಮಾರ್ಗದರ್ಶನದಂತೆ ಗಸ್ತಿನಲ್ಲಿದ್ದ ಹನೂರು ಬಫರ್ ವಲಯದ ವಲಯ ಅರಣ್ಯಾಧಿಕಾರಿ ಪಿ.ಈ.ಪ್ರವೀಣ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ ಅವರಿಂದ ಜಿಂಕೆ ಮಾಂಸ ಹಾಗೂ ಕೃತ್ಯಕ್ಕೆ ಬಳಸಿದ ಆಯುಧಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಉಪವಲಯ ಅರಣ್ಯಾಧಿಕಾರಿ ಆರ್.ಸಾಲನ್, ಗಸ್ತು ಅರಣ್ಯ ಪಾಲಕ ಅನಿಲ್‌ಕುಮಾರ್, ಗಣೇಶ್.ಕೆ.ಎನ್, ಮತ್ತು ಅರಣ್ಯ ವೀಕ್ಷಕ ಪ್ರಭು.ವಿ, ವಾಹನ ಚಾಲಕರಾದ ಮುಕುಂದ ವರ್ಮ ಮತ್ತು ರಾಜೇಶ್ ಮತ್ತು ಇತರೆ ಸಿಬ್ಬಂದಿ ಭಾಗವಹಿಸಿದ್ದರು.



ರಾಷ್ಟ್ರಧ್ವಜ ಗೌರವಿಸಿ, ದೇಶಭಕ್ತಿ ಮೈಗೂಡಿಸಿಕೊಳ್ಳಿ

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸರಸ್ವತಿ ಸಲಹೆ



"ಸ್ವಾತಂತ್ರ್ಯ ದಿನಾಚರಣೆಯಂದು ಗ್ರಾಪಂಗಳಲ್ಲಿ ಧ್ವಜಾರೋಹಣ ಮಾಡುವ ವೇಳೆ ಧ್ವಜವಂದನಾ ನಿರ್ವಾಹಕರು ರಾಷ್ಟ್ರಧ್ವಜ, ರಾಷ್ಟ್ರಗೀತೆ ನಿರ್ವಹಣೆ ಸರಿಯಾಗಿ ಪಾಲಿಸಬೇಕು. ರಾಷ್ಟ್ರಧ್ವಜಕ್ಕೆ ಯಾವುದೇ ಅಪಚಾರ ವಾಗದಂತೆ ನೋಡಿಕೊಳ್ಳಬೇಕು.

- ಸರಸ್ವತಿ,
ಉಪಕಾರ್ಯದರ್ಶಿ, ಜಿಪಂ.

ಚಾಮರಾಜನಗರ, ಆ.8– ಪ್ರತಿಯೊಬ್ಬರೂ ರಾಷ್ಟ್ರಧ್ವಜವನ್ನು ಗೌರವಿಸುವ ಮೂಲಕ ದೇಶಭಕ್ತಿ ಮೈಗೂಡಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಸರಸ್ವತಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿ ಮಂಗಳವಾರ ಭಾರತ ಸೇವಾದಳ ಚಾಮರಾಜನಗರ ಜಿಲ್ಲಾ ಸಮಿತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ರಾಷ್ಟ್ರಧ್ವಜ ವಂದನಾ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ದೇಶಭಕ್ತಿ, ದೇಶಪ್ರೇಮ ಮೂಡಿಸಬೇಕು. ವಿದ್ಯಾರ್ಥಿ ದೆಸೆಯಿಂದಲೇ ರಾಷ್ಟ್ರೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತಾಗಬೇಕು. ಅಲ್ಲದೇ ರಾಷ್ಟ್ರ ಲಾಂಛನ, ರಾಷ್ಟ್ರ ಚಿಹ್ನೆ, ರಾಷ್ಟ್ರ ಪಕ್ಷಿ, ರಾಷ್ಟ್ರ ಪ್ರಾಣಿ ರಾಷ್ಟ್ರಧ್ವಜ, ರಾಷ್ಟ್ರಗೀತೆ ಬಗ್ಗೆ ಅಭಿಮಾನ, ಗೌರವ ಹೊಂದಬೇಕು ಎಂದರು.

ಸ್ವಾತಂತ್ರ್ಯ ದಿನದಂದು ಬೆಳಗ್ಗೆ 7 ಗಂಟೆಗೆ ಧ್ವಜ ಹಾರಿಸಿ ಸಂಜೆ 5 ಗಂಟೆಗೆ ಇಳಿಸಬೇಕು. ಶಾಲಾ ಮಕ್ಕಳಿಗೆ ರಾಷ್ಟ್ರ ಧ್ವಜದ ಬಗ್ಗೆ ಅರಿವು ಮೂಡಿಸಬೇಕು. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರ ಅನೇಕ ಮಹಾನ್ ವ್ಯಕ್ತಿಗಳು ದೇಶಕ್ಕೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ ಎಂದರು.

ಮಹಾತ್ಮ ಗಾಂಧೀಜಿ, ವೀರ ಸಾರ್ವಕರ್, ಹರ್ಡೀಕರ್, ಸುಭಾಷ್ ಚಂದ್ರಬೋಸ್, ಡಾ.ಬಿ.ಆರ್.ಅಂಬೇಡ್ಕರ್ ಅಂತಹ ಮಹಾನ್ ವ್ಯಕ್ತಿಗಳು ದೇಶಕ್ಕಾಗಿ ತಮ್ಮ ತನು, ಮನ ಅರ್ಪಿಸಿದ್ದಾರೆ. ಧ್ವಜ ಹಾರಿಸುವುದಲ್ಲದೇ ಅದನ್ನು ರಕ್ಷಣೆ ಮಾಡುವುದು ಎಲ್ಲರ ಕರ್ತವ್ಯ ಆ ಮೂಲಕ ಸಾಮಾಜಿಕ, ನೈತಿಕ ಮೌಲ್ಯ ದೊರಕಿಸಿ ಕೊಡಬೇಕು ಎಂದರು. ಭಾರತ ಸೇವಾದಳ ಜಿಲ್ಲಾ ಸಂಘಟಕ ಅರುಣ್ ಮಾತನಾಡಿ, 1947ರ ಜು.22 ರಂದು ರಾಷ್ಟ್ರಧ್ವಜ ಅಂಗೀಕರಿಸಲಾಯಿತು. ಭಾರತ ಸೇವಾ ದಳದ ಧ್ವಜವೂ ಕೂಡ ರಾಷ್ಟ್ರಧ್ವಜವಾಗಿದೆ ಎಂದರು.

ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆ ಬಗ್ಗೆ ಅರಿವು ಮೂಡಿಸಲು ಕಳೆದ ವರ್ಷ ಪಿಡಿಒಗಳಿಗೆ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಬಾರಿ ಗ್ರಾಪಂ ಇತರೆ ನೌಕರರಿಗೆ ಕಾರ್ಯಾಗಾರ ನಡೆಸಲಾಗುತ್ತಿದ್ದು, ಧ್ವಜದ ಆರೋಹಣ, ಅವರೋಹಣ ಮಾಡುವ ಕುರಿತು ತಿಳಿಸಿಕೊಡಲಾಗುವುದು ಎಂದು ಮಾಹಿತಿ ನೀಡಿದರು.

ಭಾರತ ಸೇವಾದಳ ಜಿಲ್ಲಾ ಉಪಾಧ್ಯಕ್ಷ ಎಸ್.ನಾಗರಾಜು ಮಾತನಾಡಿ, ರಾಷ್ಟ್ರಧ್ವಜ, ರಾಷ್ಟ್ರಗೀತೆಗೆ ಗೌರವ ಸಲ್ಲಿಸುವ ಜೊತೆಗೆ ಯಾವುದೇ ಅಪಚಾರವಾಗದಂತೆ ನೋಡಿಕೊಳ್ಳಬೇಕು. ಅಲ್ಲದೇ ಶಿಸ್ತು, ಸಂಯಮ ಕಲಿಯಲು ಭಾರತ ಸೇವಾದಳ ಸಹಕಾರಿಯಾಗಿದೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಸೇವಾದಳಕ್ಕೆ ಸೇರಿಸಬೇಕು. ಪಂಚಾಯಿತಿ ಮಟ್ಟದಲ್ಲಿ ಕಾರ್ಯಗತಗೊಳಿಸಿ ಯಶಸ್ವಿಗೊಳಿಸಬೇಕು ಎಂದರು.

ಕಾರ್ಯಾಗಾರದಲ್ಲಿ ಭಾರತ ಸೇವಾದಳ ಜಿಲ್ಲಾಧ್ಯಕ್ಷ ಬಿ.ಎ.ವೆಂಕಟನಾಗಪ್ಪ ಶೆಟ್ಟಿ, ಉಪಾಧ್ಯಕ್ಷ ಮಹೇಶ್ ಜಿ.ಬಳಿಗಾರ್, ಕೋಶಾಧ್ಯಕ್ಷ ವಿ.ಶ್ರೀನಿವಾಸಪ್ರಸಾದ್, ಸದಸ್ಯ ನಾಗೇಂದ್ರ ಪ್ರಸಾದ್, ವಲಯ ಸಂಘಟಕ ಈರಯ್ಯ, ಕಾರ್ಯದರ್ಶಿ ಮಹದೇವಯ್ಯ ಇತರರಿದ್ದರು.

1.19 ಲಕ್ಷ ರೂ. ಮೌಲ್ಯದ ಬಿಯರ್ ನಾಶ



ಚಾಮರಾಜನಗರ, ಆ.8– ಇಲ್ಲಿನ ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ರಾಜ್ಯ ಪಾನೀಯ ನಿಗಮದ ಗೋದಾಮಿನಲ್ಲಿದ್ದ ಅವಧಿ ಮೀರಿದ, ಸೇವನೆಗೆ ಯೋಗ್ಯವಲ್ಲದ 1.19 ಲಕ್ಷ ರೂ. ಮೌಲ್ಯದ 394 ಲೀ. ಬಿಯರ್ ಅನ್ನು ನಾಶಪಡಿಸಲಾಯಿತು.

ಅಬಕಾರಿ ಉಪ ಅಧೀಕ್ಷಕ ಎಂ.ಡಿ. ಮೋಹನ್ ನೇತೃತ್ವದಲ್ಲಿ ಕಸಬಾ ಹೋಬಳಿ ಕಂದಾಯ ನಿರೀಕ್ಷಕ ಬಿ. ರಾಜಶೇಖರ್ ಅವರ ಸಮಕ್ಷಮದಲ್ಲಿ ಅಬಕಾರಿ ನಿರೀಕ್ಷಕ ಗುರುನಾಥಶೆಟ್ಟಿ, ಡಿಪೋ ವ್ಯವಸ್ಥಾಪಕ ಆರ್.ಬಿ.ಬಸವರಾಜು ಅವರು ಬಿಯರ್ ಅನ್ನು ನೆಲಕ್ಕೆ ಸುರಿಯುವ ಮೂಲಕ ನಾಶಪಡಿಸಿದರು.

ಈ ವೇಳೆ ಗ್ರಾಮ ಆಡಳಿತಾಧಿಕಾರಿ ಲೋಕೇಶ್, ನಿಗಮಾಧಿಕಾರಿ ಸಿದ್ದರಾಜು, ಸಿಬ್ಬಂದಿಗಳಾದ ಎಂ.ಪಿ.ಕುಮಾರ್ ಇತರರಿದ್ದರು.

ಸಂತೇಮರಳ್ಳಿಯಲ್ಲಿ ಗುರುನಮನ ಕಾರ್ಯಕ್ರಮ

ಚಾಮರಾಜನಗರ, ಆ.8– ತಾಲೂಕಿನ ಸಂತೇಮರಳ್ಳಿ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ವೆಂಕಟಯ್ಯನಛತ್ರ ಸರ್ಕಾರಿ ಶಾಲೆಯ 1979–80ನೇ ಸಾಲಿನ ಹಳೇ ವಿದ್ಯಾರ್ಥಿಗಳಿಂದ ಗುರುನಮನ 'ಅಪೂರ್ವ ಸ್ನೇಹ ಸಮ್ಮಿಲನ' ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ನಿವೃತ್ತ ಶಿಕ್ಷಕ ವೀರೇಶ್ವರ್, ಇದೊಂದು ಅಪರೂಪದ ಕಾರ್ಯಕ್ರಮ. ಶಿಕ್ಷಕನಿಂದ ವಿದ್ಯೆ ಕಲಿತ ವಿದ್ಯಾರ್ಥಿ ಎಂದಿಗೂ ಗುರುಗಳನ್ನು ಮರೆಯುವುದಿಲ್ಲ. ಗುರುವಿಗೆ ಗೌರವ ಕೊಡುವ ವಿದ್ಯಾರ್ಥಿ ಎತ್ತರಕ್ಕೆ ಬೆಳೆಯುತ್ತಾನೆ ಎಂದರು.

ನಿವೃತ್ತ ಶಿಕ್ಷಕ ಆರ್.ಎನ್.ಸುಂದರ್ ಮಾತನಾಡಿ, ಕೆಲವು ವಿದ್ಯಾರ್ಥಿಗಳು ನಾವು ಮಾಡಿದ ಪಾಠವನ್ನು ಈಗಲೂ ಮೆಲಕು ಹಾಕುತ್ತಾರೆ. ಇದು ಸಂತಸದ ವಿಷಯ. ಶಿಕ್ಷಣ ವೃತ್ತಿ ನಮಗೆ ತೃಪ್ತಿ ತಂದಿದೆ. 13 ವರ್ಷ ವೆಂಕಟಯ್ಯನ ಛತ್ರ ಸರ್ಕಾರಿ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಲು ಸಹೋದ್ಯೋಗಿಗಳ ಸಹಕಾರ ಮುಖ್ಯ ನನ್ನ ಸೇವಾವಧಿಯಲ್ಲಿ ಎಲ್ಲರೂ ಉತ್ತಮ ರೀತಿಯಲ್ಲಿ ಸಹಕರಿಸಿದ್ದರು ಎಂದರು.

ನಿವೃತ್ತ ಶಿಕ್ಷಕ ಎಸ್.ವಂಗಶೆಟ್ಟಿ, ನಿವೃತ್ತ ಶಿಕ್ಷಕ ಸಿ.ಶ್ರೀನಿವಾಸ್, ಗುತ್ತಿಗೆದಾರ ನಂಜುಂಡಸ್ವಾಮಿ ಮಾತನಾಡಿದರು. ಈ ವೇಳೆ ಹಳೇ ವಿದ್ಯಾರ್ಥಿಗಳಾದ ಡಾ.ನಂದೀಶ್, ಜಗದೀಶ್, ಹೆಚ್.ಪಿ.ಪ್ರಸಾದ್, ನರಸಿಂಹರಾಜು, ಲಿಂಗರಾಜು, ವಿ.ವಿ.ಅನಂತ, ಕುಮಾರಸ್ವಾಮಿ, ಶಿವಕುಮಾರ್, ಪ್ರಸಾದ್, ಮಹದೇವಯ್ಯ ಹಾಗೂ 60ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಸರ್ಕಾರದ ಯೋಜನೆಗಳು ಎಲ್ಲಾ ಫಲಾನುಭವಿಗಳಿಗೆ ತಲುಪಬೇಕು

ಸೇವಾ ಕೇಂದ್ರಕ್ಕೆ ಶಾಸಕ ಭೇಟಿ, ಪರಿಶೀಲನೆ



ಚಾಮರಾಜನಗರ, ಆ.8– ನಗರದ ಗೃಹಲಕ್ಷ್ಮಿ ಯೋಜನೆ ನೋಂದಣಿ ಕೇಂದ್ರ, ಪಾಸ್‌ಪೋರ್ಟ್ ಸೇವಾ ಕೇಂದ್ರ ಹಾಗೂ ಪುಟ್ಟಮ್ಮಣ್ಣಿ ಉದ್ಯಾನವನಕ್ಕೆ ಮಂಗಳವಾರ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ಉಪ್ಪಾರ ಸಮುದಾಯ ಭವನದಲ್ಲಿ ತೆರೆದಿರುವ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ನೋಂದಣಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಪ್ರಕ್ರಿಯೆ ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಅವರು, ಫಲಾನುಭವಿಗಳ ನೋಂದಣಿ ಕಾರ್ಯ ತ್ವರಿತಗೊಳಿಸಬೇಕು. ಅರ್ಹರೆಲ್ಲರಿಗೂ ಸರ್ಕಾರದ ಯೋಜನೆ ತಲುಪಬೇಕಿದೆ. ಹೀಗಾಗಿ ನೋಂದಣಿ ಕಾರ್ಯ ಪ್ರಗತಿಯಾಗುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಪಾರದರ್ಶಕವಾಗಿ ಫಲಾನುಭವಿಗಳ ನೋಂದಣಿಯಾಗಬೇಕು. ದೂರುಗಳು ಬಾರದಂತೆ ನೋಂದಣಿ ಕೆಲಸ ನಿರ್ವಹಿಸಬೇಕು. ಯಾವುದೇ ಲೋಪಗಳಿಗೆ ಅವಕಾಶ ನೀಡಬಾರದೆಂದು ಶಾಸಕರು ತಿಳಿಸಿದರು.

ಬಳಿಕ ಪಾಸ್‌ಪೋರ್ಟ್ ಸೇವಾ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕರು ಅಲ್ಲಿನ ಸೌಲಭ್ಯಗಳನ್ನು ಪರಿಶೀಲಿಸಿದರು. ಸೇವಾ ಕೇಂದ್ರಕ್ಕೆ ಕಾಂಪೌಂಡ್ ನಿರ್ಮಾಣ ಮಾಡಲು ತಮ್ಮ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಯಡಿ 3 ಲಕ್ಷ ರೂ. ನೀಡಲಿದ್ದು, ಕೂಡಲೇ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಂತರ ಪುಟ್ಟಮ್ಮಣ್ಣಿ ಉದ್ಯಾನವನದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿದರು. ಉದ್ಯಾನವನದ ಕಾಮಗಾರಿ ಅಚ್ಚುಕಟ್ಟಾಗಿ ನಡೆಯಬೇಕು. ವಾಯುವಿಹಾರಿಗಳಿಗೆ ವಾಕಿಂಗ್ ಪಾಥ್ ಚೆನ್ನಾಗಿ ನಿರ್ಮಿಸಬೇಕು. ಉದ್ಯಾನವನದ ಎಲ್ಲಾ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಅನುಕೂಲಕ್ಕೆ ಅವಕಾಶ ಮಾಡಿಕೊಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ನಗರಸಭೆ ಆಯುಕ್ತ ಎಸ್.ವಿ. ರಾಮದಾಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಟರಾಜು, ಕಿರಿಯ ಇಂಜಿನಿಯರ್ ಆರಾಧ್ಯ ಸೇರಿದಂತೆ ಇತರರಿದ್ದರು.

ಕೆಡಿಪಿ ಸಭೆ ಮುಂದೂಡಿಕೆ

ಚಾಮರಾಜನಗರ, ಆ.8– ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ಆ.9ರಂದು ನಡೆಯಬೇಕಿದ್ದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ ಎಂದು ತಾಪಂ ಇಓ ಪೂರ್ಣಿಮಾ ತಿಳಿಸಿದ್ದಾರೆ.

ಹರದನಹಳ್ಳಿ: ಸ್ಮಶಾನ ಇಲ್ಲದೇ ಅಂತ್ಯಕ್ರಿಯೆಗೆ ಪರದಾಟ


ಒಸರುತ್ತಿದ್ದ ನೀರಿನ ನಡುವೆಯೇ ವ್ಯಕ್ತಿ ಅಂತ್ಯಕ್ರಿಯೆ

ಚಾಮರಾಜನಗರ, ಆ.8– ತಾಲೂಕಿನ ಹರದನಹಳ್ಳಿಯಲ್ಲಿ ಸ್ಮಶಾನಕ್ಕೆ ಜಾಗವಿಲ್ಲದೇ ಗುಂಡಿ ತೆಗೆದರೆ ಒಸರುತ್ತಿದ್ದ ನೀರಿನ ನಡುವೆಯೇ ಅಂತ್ಯಕ್ರಿಯೆ ನಡೆಸಿರುವ ಘಟನೆ ನಡೆದಿದೆ.

ಗ್ರಾಮದಲ್ಲಿ ಸರ್ಕಾರಿ ಜಾಗವಿದ್ದರೂ, ಅಧಿಕಾರಿಗಳು ಸ್ಮಶಾನ ಸ್ಥಳ ಗುರುತು ಮಾಡದ ಹಿನ್ನೆಲೆಯಲ್ಲಿ ಸ್ವಂತ ಜಮೀನಿಲ್ಲದ ಯಾರಾದರೂ ಮೃತಪಟ್ಟರೇ ಭಾರಿ ಪರಿತಪಿಸಬೇಕಾದ ದುಃಸ್ಥಿತಿ ಇದೆ.

ಗ್ರಾಮದಲ್ಲಿ ಸಿದ್ದಶೆಟ್ಟಿ(76) ಎಂಬುವರು ಸೋಮವಾರ ವಯೋಸಹಜವಾಗಿ ನಿಧನರಾಗಿದ್ದರು. ಮೃತರಿಗೆ ಸ್ವಂತ ಜಮೀನಿಲ್ಲದ ಕಾರಣ ಅವರ ಅಂತಿಮ ಸಂಸ್ಕಾರಕ್ಕೆ ಜಾಗವಿಲ್ಲದೇ ಗ್ರಾಮಸ್ಥರು ಪರದಾಡಿದ್ದಾರೆ. ಈ ವೇಳೆ ಸರ್ಕಾರಿ ಭೂಮಿಯೊಂದರ ಕೆಸರು ತುಂಬಿದ ಜಾಗದಲ್ಲೇ ಸಮಾಧಿಗೆ ಹಳ್ಳ ತೆಗೆದು ಅಂತ್ಯ ಸಂಸ್ಕಾರ ಮಾಡಲಾಗಿದೆ. ಗುಂಡಿ ತೆಗೆಯುವಾಗ ಹೊರ ಬರುತ್ತಿದ್ದ ನೀರನ್ನು ಹೊರಹಾಕಿ ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

ಈ ಕುರಿತು ಗ್ರಾಮದ ಮುಖಂಡ ಗಿರೀಶ್ ಮಾತನಾಡಿ, ಈ ಬಗ್ಗೆ ಜಿಲ್ಲಾಡಳಿತಕ್ಕೆ ಸಾಕಷ್ಟು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಗ್ರಾಮದಲ್ಲಿ ಸರ್ಕಾರಿ ಜಾಗವಿದ್ದರೂ, ಅಧಿಕಾರಿಗಳು ಸ್ಮಶಾನ ಗುರುತು ಮಾಡಿಲ್ಲ. ಇನ್ನಾದರೂ ಸರ್ಕಾರಿ ಜಾಗದಲ್ಲಿ ಸ್ಮಶಾನ ಗುರುತು ಮಾಡಬೇಕು ಎಂದು ಆಗ್ರಹಿಸಿದರು.



ಒಂದನೇ ಪುಟದಿಂದ

ಸರ್ಕಾರಿ ಭೂಮಿ ಸರ್ಕಾರದ ವಶಕ್ಕೆ

ಮೊದಲು ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದ ವ್ಯವಸ್ಥೆಯನ್ನು ಸಜ್ಜುಗೊಳಿಸಲು ಕಾರ್ಯಮಗ್ನನಾಗಿದ್ದೇನೆ ಎಂದು ತಿಳಿಸಿದರು. ಖಾಸಗಿಯವರ ವಶದಲ್ಲಿರುವ ಸರ್ಕಾರಿ ಭೂಮಿಯನ್ನು ವಶಕ್ಕೆ ಪಡೆಯುವ ನಿಟ್ಟಿನಲ್ಲಿ ಈಗಾಗಲೇ ಪ್ರಕ್ರಿಯೆ ಆರಂಭವಾಗಿದೆ. ಆದರೆ ಇದಕ್ಕೆ ತಡೆ ನೀಡುವಂತೆ ಯಾರಿಂದಲೂ ಒತ್ತಡಗಳು ಬಂದಿಲ್ಲ. ಒಂದು ವೇಳೆ ಒತ್ತಡಗಳು ಬಂದರೂ ನಾವು ಕೇರ್ ಮಾಡದೆ ಕಾಲ ಮಿತಿಯಲ್ಲಿ ಈ ಕೆಲಸವನ್ನು ಮಾಡಿ ಮುಗಿಸುತ್ತೇವೆ. ಈ ಮೂಲಕ ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುತ್ತೇವೆ ಎಂದು ಕೃಷ್ಣಬೈರೇಗೌಡ ಸ್ಪಷ್ಟಪಡಿಸಿದರು.

ವ್ಯಾಜ್ಯ ವಿಲೇವಾರಿಗೆ ಸಭೆ: ಕಂದಾಯ ಅದಾಲತ್‌ನಲ್ಲಿ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುತ್ತಿದೆ. ಆದರೆ ಕ್ಲಿಷ್ಟಕರವಾದ ಕೆಲವು ಸಮಸ್ಯೆ ಪರಿಹರಿಸಲು ಅಲ್ಲಿ ಸಾಧ್ಯವಿಲ್ಲ. ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಕೋರ್ಟ್‌ನಲ್ಲಿರುವ ವ್ಯಾಜ್ಯಗಳನ್ನು ಶೀಘ್ರದಲ್ಲೇ ವಿಲೇವಾರಿ ಮಾಡುವಂತೆ ಸೂಚನೆ ನೀಡಿದ್ದೇನೆ ಎಂದರು.

ಅಧಿಕಾರಿಗಳೊಂದಿಗೆ ಸಭೆ: ತರುವಾಯ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯ ಚಾಮುಂಡೇಶ್ವರಿ ಸಭಾಂಗಣದಲ್ಲಿ ಮೈಸೂರು ವಿಭಾಗದ ಎಂಟು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಕಂದಾಯ ಅಧಿಕಾರಿಗಳು, ಸಬ್ ರಿಜಿಸ್ಟ್ರಾರ್‌ಗಳು, ಭೂಮಾಪನ ಇಲಾಖೆ ಅಧಿಕಾರಿಗಳ ಸಭೆಯನ್ನು ಕೃಷ್ಣಬೈರೇಗೌಡ ನಡೆಸಿದರು.

ಕರ್ನಾಟಕದ ಜನತೆ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದಾರೆ. ಭ್ರಷ್ಟಾಚಾರ ಮುಕ್ತ ವ್ಯವಸ್ಥೆ ಆಶಿಸಿ, ಬದಲಾವಣೆ ಬಯಸಿದ್ದಾರೆ. ನಮ್ಮ ಸರ್ಕಾರದ ಅವಧಿಯಲ್ಲೂ ಅದೇ ಪರಿಸ್ಥಿತಿ ಎದುರಾದರೆ ಪ್ರಜಾಪ್ರಭುತ್ವ ವೈಫಲ್ಯವಾಗುತ್ತದೆ. ಯಾವ ಸರ್ಕಾರ ಬಂದರೂ ವ್ಯವಸ್ಥೆ ಸರಿ ಆಗುವುದಿಲ್ಲ ಎಂದು ಜನರು ನಿರಾಶೆಗೊಳ್ಳುತ್ತಾರೆ. ಆದರೆ ನಮ್ಮ ಕಾಂಗ್ರೆಸ್ ಸರ್ಕಾರ ಇದಕ್ಕೆ ಅವಕಾಶ ನೀಡುವುದಿಲ್ಲ. ಉತ್ತಮ ಆಡಳಿತ ನೀಡಿ ಜನರು ಕೊಟ್ಟಿರುವ ಭರವಸೆ ಉಳಿಸಿಕೊಳ್ಳುತ್ತೇವೆ. ಈ ಹಿನ್ನೆಲೆಯಲ್ಲಿ ನಮ್ಮ ವೇಗಕ್ಕೆ ತಕ್ಕಂತೆ ಅಧಿಕಾರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದು ಕೃಷ್ಣಬೈರೇಗೌಡ ಸಲಹೆ ನೀಡಿದರು. ಹಿಂದಿನ ಸರ್ಕಾರದ ಅವ್ಯವಸ್ಥೆಗಳನ್ನು ನಾನು ಕೆದಕಿ ಸಮಯ ವ್ಯರ್ಥ ಮಾಡುವುದಿಲ್ಲ. ಹಾಗಂತ ಅವ್ಯವಸ್ಥೆ ಜೀವಂತವಾಗಿರಲು ಬಿಡುವುದಿಲ್ಲ. ಅವಶ್ಯಕತೆ ಬಂದಾಗ ಅದಕ್ಕೆ ರಿಪೇರಿ ಮಾಡುತ್ತೇನೆ ಎಂದು ಎಚ್ಚರಿಸಿದರು. ಕಿರಿಯ ಅಧಿಕಾರಿಗಳಿಗೆ ಸೂಚನೆ ನೀಡುವ ಮೊದಲು ಹಿರಿಯ ಅಧಿಕಾರಿಗಳು ಮೊದಲು ತಮ್ಮಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಅದು ಬಿಟ್ಟು ನೀತಿ ಪಾಠ ಮಾಡಿದರೆ, ಇವನು ಹೇಳುವುದೊಂದು, ಮಾಡುವುದು ಇನ್ನೊಂದು ಅಂತ ನಗೆಪಾಟಲಗೀಡಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳು ಮೊದಲು ತಾವು ಬದಲಾಗಬೇಕು ಎಂದು ಕೃಷ್ಣಬೈರೇಗೌಡ ಕಿವಿಮಾತು ಹೇಳಿದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ನಾನು ನೀಡುವ ಆದೇಶಗಳು ಪಾಲನೆಯಾಗಬೇಕು. ಪ್ರಗತಿಯಲ್ಲಿ ಫಲಿತಾಂಶ ಸಿಗಬೇಕು. ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕು. ಚರ್ಚೆ ಆಧಾರದ ಮೇಲೆ ತೀರ್ಮಾನಗಳು ಅನುಷ್ಠಾನಕ್ಕೆ ಬರಬೇಕು. ಅಧಿಕಾರಿಗಳು ಸಹಕಾರ ನೀಡದಿದ್ದರೆ ಯಾವುದೇ ಯೋಜನೆಗಳನ್ನು ಕರಾರುವಕ್ಕಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಸಮರ್ಥ ಹಾಗೂ ಪ್ರಾಮಾಣಿಕರಾಗಿ ಕೆಲಸ ಮಾಡಬೇಕು ಎಂದು ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಟಿಪ್ಸ್ ಕೊಟ್ಟರು.

ಇತ್ಯರ್ಥಕ್ಕೆ 3 ತಿಂಗಳ ಗಡುವು

ಸಾವಿರಾರು ಪ್ರಕರಣಗಳು ನನೆಗುದಿಗೆ: ಹಾಗೆಯೇ ಎಸಿ(ಉಪ ವಿಭಾಗಾಧಿಕಾರಿ) ಹಂತದಲ್ಲಿ ಕೊಳ್ಳೆಗಾಲ 540, ಚಿಕ್ಕಮಗಳೂರು 473, ತರೀಕರೆ 952, ಮಂಗಳೂರು 3627, ಪುತ್ತೂರು 243, ಹಾಸನ 678, ಸಕಲೇಶಪುರ 189, ಮಡಿಕೇರಿ 827, ಮಂಡ್ಯ 1456, ಪಾಂಡವಪುರ 1111, ಮೈಸೂರು 1535, ಹುಣಸೂರು 751, ಮತ್ತು ಕುಂದಾಪುರದಲ್ಲಿ 2061 ಪ್ರಕರಣಗಳು ಸೇರಿದಂತೆ ಒಟ್ಟು 14,444 ಪ್ರಕರಣಗಳು ಬಾಕಿ ಉಳಿದಿದ್ದು, ಇವುಗಳನ್ನು ಕೂಡ 4 ತಿಂಗಳ ಅವಧಿಯೊಳಗೆ ಇತ್ಯರ್ಥಪಡಿಸಬೇಕು. ಅದೇ ರೀತಿ ಜಿಲ್ಲಾಧಿಕಾರಿಗಳ ಹಂತದಲ್ಲಿ ಚಿಕ್ಕಮಗಳೂರು 652, ಚಾಮರಾಜನಗರ 213, ದಕ್ಷಿಣ ಕನ್ನಡ 507, ಹಾಸನ 547, ಕೊಡಗು 140, ಮಂಡ್ಯ 320, ಮೈಸೂರು 1040, ಉಡುಪಿ 130 ಪ್ರಕರಣಗಳು ಸೇರಿದಂತೆ ಒಟ್ಟಾರೆ 3,513 ಪ್ರಕರಣಗಳು ಬಾಕಿ ಇದ್ದು, ಮುಂದಿನ ಮೂರು ತಿಂಗಳಲ್ಲಿ ಇತ್ಯರ್ಥಗೊಳಿಸಬೇಕು ಎಂದು ತಿಳಿಸಿದರು.

ವಾರದಲ್ಲಿ 2 ದಿನ ನ್ಯಾಯಾಲಯ ನಡೆಸಿ: ಪರಿಶೀಲನೆಯ ವೇಳೆ ಎಸಿ–ಡಿಸಿ ನ್ಯಾಯಾಲಯಗಳಲ್ಲೂ ಬಾಕಿ ಇರುವ ಪ್ರಕರಣಗಳ ಬಗ್ಗೆ ಅಸಮಾಧಾನ ಹೊರಹಾಕಿದ ಸಚಿವರು, ಉನ್ನತ ಅಧಿಕಾರಿಗಳೇ ತಮ್ಮ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸದಿದ್ದರೆ, ತಹಶೀಲ್ದಾರರಿಂದ ನೀವು ಹೇಗೆ ಪರಿಣಾಮಕಾರಿ ಕೆಲಸವನ್ನು ನಿರೀಕ್ಷೆ ಮಾಡಲು ಸಾಧ್ಯ. ಹೀಗಾಗಿ ನೀವು ಇತರರಿಗೆ ತಪ್ಪು ಉದಾಹರಣೆಯಾಗಬೇಡಿ ಎಂದು ಸಲಹೆ ನೀಡಿದರಲ್ಲದೆ ವಾರದಲ್ಲಿ ಕನಿಷ್ಟ 2 ದಿನ ನ್ಯಾಯಾಲಯ ನಡೆಸಿ ಪ್ರಕರಣಗಳ ವಿಲೇವಾರಿಗೆ ವೇಗ ನೀಡಬೇಕು. ಉಪವಿಭಾಗಾಧಿಕಾರಿಗಳು ವಾರದಲ್ಲಿ 3 ದಿನ ನ್ಯಾಯಾಲಯ ನಡೆಸಿ ಬಾಕಿ ಪ್ರಕರಣಗಳನ್ನು ತ್ವರಿತ ವಿಲೇವಾರಿಗೊಳಿಸಿ ಜನರಿಗೆ ಆಗುತ್ತಿರುವ ವಿಳಂಬವನ್ನು ಪರಿಹರಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳ ವಿಲೇವಾರಿ ನೆಪದಲ್ಲಿ ಗುಣಮಟ್ಟದ ಜೊತೆಗೆ ಹೊಂದಾಣಿಕೆ ಸಲ್ಲದು ಎಂದು ಸಚಿವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪೈಟಿ ಆರ್‌ಟಿಸಿಗಳು ಬಾಕಿ: ಸರ್ವೆ ವಿಭಾಗದಲ್ಲಿ ಸುಮಾರು 88,577 ಪೈಟಿ ಆರ್‌ಟಿಸಿ (ಸರ್ವೆ ನಡೆಸದೆ ಸೃಷ್ಟಿಲಾದ ಆರ್‌ಟಿಸಿಗಳು)ಗಳು ಉಳಿದಿವೆ. ಇದರಿಂದ ಎಷ್ಟೋ ಜನರಿಗೆ ತೊಂದರೆಯಾಗುತ್ತಿದೆ. ಮಂಗಳೂರು, ಕೊಡಗು ಸೇರಿದಂತೆ ಕೆಲವು ಭಾಗಗಳಲ್ಲಿ ಜಟಿಲ ಸಮಸ್ಯೆಗಳಿದ್ದು, ಉಳಿದ ಕಡೆ ಬಾಕಿ ಇರುವ ಎಲ್ಲಾ ಪೈಟಿ ಆರ್‌ಟಿಸಿ ಸಮಸ್ಯೆಗಳನ್ನು ಮುಂದಿನ ಮೂರು ತಿಂಗಳ ಅವಧಿಯೊಳಗೆ ಬಗೆಹರಿಸಬೇಕು. ಮೊದಲಿನಿಂದಲೂ ಕೆಲವು ಅನಗತ್ಯವಾದ ಪದ್ಧತಿಗಳು ನಡೆದುಕೊಂಡು ಬಂದಿವೆ. ಅವುಗಳಿಂದ ಯಾರಿಗೂ ಉಪಯೋಗವಾಗುತ್ತಿಲ್ಲ. ಆರ್‌ಟಿಸಿಯಲ್ಲಿ ಎಂಟ್ರಿ ಮಾಡಲು ಸರ್ವೆಯಲ್ಲಿ ಸ್ಕೆಚ್ ಮಾಡಿದ ಬಳಿಕ ಅದನ್ನು ತಹಸಿಲ್ದಾರ್ ಕಚೇರಿಯಲ್ಲಿ ಕುಳಿತ ಆರ್‌ಐ(ರೆವಿನ್ಯೂ ಇನ್ಸ್‌ಸ್ಪೆಕ್ಟರ್) ಆರ್ಟಿಸಿಗೆ ಎಂಟ್ರಿ ಮಾಡಬೇಕಾ? ಬೇಡವಾ? ಎಂಬುದನ್ನು ಇತ್ಯರ್ಥ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಇಂತಹ ಮೂರ್‍ನಾಲ್ಕು ಅನಗತ್ಯ ಪದ್ಧತಿಗಳನ್ನು ಆಡಳಿತದ ಹಿತದೃಷ್ಟಿಯಿಂದ ತೆಗೆದುಹಾಕಬೇಕು. ಈ ನಿಟ್ಟಿನಲ್ಲಿ ಸರ್ವೆಯರ್ ನೀಡಿದ ಮಾಹಿತಿ ಆಧಾರದ ಮೇಲೆ ಆರ್‌ಟಿಸಿಗೆ ಎಂಟ್ರಿ ಮಾಡುವ ಕೆಲವು ಕಾನೂನುಗಳಲ್ಲಿ ಬದಲಾವಣೆ ಮಾಡುವ ಚಿಂತನೆ ನಡೆಸಲಾಗಿದೆ. ಹಾಗೆಯೇ ಹಾಗೆಯೇ ಆರ್‌ಟಿಸಿ ಮಿಸ್‌ಮ್ಯಾಚ್, ನಕಲಿ ಆರ್‌ಟಿಸಿಗಳ ಬಗ್ಗೆಯೂ ಗಮನ ಹರಿಸಬೇಕು ಎಂದರು.

ಪ್ರಕೃತಿ ವಿಕೋಪದ ಪರಿಹಾರ ಬಾಕಿ: ಕಳೆದ ನಾಲ್ಕು ವರ್ಷಗಳಲ್ಲಾಗಿರುವ ಪ್ರಕೃತಿ ವಿಕೋಪ ಪ್ರಕರಣಗಳಲ್ಲಿ ರಿಪೇರಿ ಕೆಲಸಗಳಿಗೆ ಮಂಜೂರಾಗಿದ್ದ 61.34 ಕೋಟಿ ರೂ. ಕಾಮಗಾರಿ ಪೂರ್ಣಗೊಳಿಸಿಲ್ಲ. ಶಾಲೆ, ಅಂಗನವಾಡಿ, ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳಾಗಿದ್ದು, ಕೂಡಲೇ ಪೂರ್ಣಗೊಳಿಸಬೇಕು. 2 ಲಕ್ಷ ರೂ.ಗಳಿಗಿಂತ ಕಡಿಮೆ ವೆಚ್ಚದ ಕಾಮಗಾರಿಗಳು ಬಾಕಿ ಉಳಿದಿವೆ ಎಂದರೆ ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದ ಕಂದಾಯ ಸಚಿವರು, ಇನ್ನೊಂದು ತಿಂಗಳೊಳಗೆ ಹಳೇ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದರೆ ಅವುಗಳಿಗೆ ಬಾಕಿ ಹಣ ಪಾವತಿ ಮಾಡಬೇಕು. ಕೆಲಸವೇ ಆರಂಭವಾಗದಿದ್ದರೆ ಅಂತಹ ಕಾಮಗಾರಿಗಳನ್ನು ವಜಾ ಮಾಡುವಂತೆ ಸೂಚನೆ ನೀಡಿದರು.

ಮಳೆಯಿಂದ ಹಾನಿಯಾದ ಮನೆ ರಿಪೇರಿಗೆ ಸರ್ಕಾರ 50,000 ರೂ. ಹಾಗೂ ಸಂಪೂರ್ಣ ಮನೆ ಕಳೆದುಕೊಂಡವರಿಗೆ 1.3 ಲಕ್ಷ ರೂ. ಹಾಗೂ ಮನೆ ಮರು ನಿರ್ಮಾಣಕ್ಕೆ 3.7 ಲಕ್ಷ ರೂ. ಸೇರಿ ಒಟ್ಟಾರೆ 5 ಲಕ್ಷ ರೂ. ನೀಡುತ್ತೇವೆ. ಆದರೆ, ಕೆಲವು ಫಲಾನುಭವಿಗಳು ಮನೆಯನ್ನೇ ಕಟ್ಟಿಲ್ಲ. ಪರಿಹಾರ ತೆಗೆದುಕೊಂಡೂ ಕೂಡ ಮನೆ ಕಟ್ಟದೆ ಇರುವವರನ್ನು ಪರಿಶೀಲನೆ ಸೂಚನೆ ನೀಡುವುದಲ್ಲದೆ ಅನಗತ್ಯವಾಗಿರುವುದನ್ನು ಕೈಬಿಟ್ಟು, ಅವಶ್ಯ ಹಾಗೂ ಜನಪರವಾಗಿರುವುದನ್ನು ಉಳಿಸಿಕೊಳ್ಳುವಂತೆ ಹೇಳಿದರು.

ಸಚಿವರಲ್ಲಿ ಶಾಸಕ ಜಿ.ಟಿ.ದೇವೇಗೌಡರ ಮನವಿ

ಉಳುಮೆ ಮಾಡುತ್ತಾ ಬಂದಿದ್ದು, ನಗರ ಪ್ರದೇಶದಿಂದ 10 ಕಿ.ಮೀ. ಒಳಗೆ ಇರುವ ಜಮೀನುಗಳಿಗೆ ಸಾಗುವಳಿ ನೀಡುತ್ತಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದ್ದು, ಈ ರೈತರ ಅನುಕೂಲಕ್ಕಾಗಿ ರೈತರು ಉಳುಮೆ ಮಾಡುತ್ತಿರುವ ಜಮೀನಿನ ಪೈಕಿ ಅರ್ಧ ಭಾಗವನ್ನು ಸರ್ಕಾರ ವಹಿಸಿಕೊಂಡು, ಬಾಕಿ ಜಮೀನನ್ನು ರೈತರು ಉಳುಮೆ ಮಾಡುವ ಸಲುವಾಗಿ ಸಕ್ರಮ ಮಾಡಿಕೊಡುವಂತೆ ಒತ್ತಾಯಿಸಿದರು.

ರೈತರಿಗೆ ಎನ್‌ಓಸಿ ನೀಡಿ: ಮೈಸೂರು ತಾಲೂಕಿನ ಜಯಪುರ ಹೋಬಳಿ ಚಿಕ್ಕನಹಳ್ಳಿ, ಹಾರೋಹಳ್ಳಿ, ಗುಮ್ಮಚನಹಳ್ಳಿ, ಎಸ್.ಕಲ್ಲಹಳ್ಳಿ, ಅರಸನಕೆರೆ, ಮಾರ್ಬಳ್ಳಿ, ಮಾರ್ಬಳ್ಳಿ ಹುಂಡಿ, ಮಾವಿನಹಳ್ಳಿ, ಮದ್ದೂರು, ಮದ್ದೂರುಹುಂಡಿ ಗ್ರಾಮಗಳಲ್ಲಿ ರೈತರು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದು, ಅರಣ್ಯ ಇಲಾಖೆಯವರು ಎನ್‌ಓಸಿ ನೀಡದೆ, ಈ ರೈತರಿಗೆ ಸಾಗುವಳಿ ನೀಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕಂದಾಯ ಇಲಾಖೆ, ಭೂ ಮಾಪನ ಇಲಾಖೆ ಮತ್ತು ಅರಣ್ಯ ಇಲಾಖೆಯವರ ತಂಡವನ್ನು ರಚಿಸಿ, ಜಂಟಿ ಸರ್ವೆ ಮಾಡಿಸಿ, ರೈತರಿಗೆ ಎನ್‌ಓಸಿ ನೀಡುವ ಬಗ್ಗೆ ಕ್ರಮ ಕೈಗೊಳ್ಳುವಂತೆಯೂ ಮನವಿ ಮಾಡಿದರು.

ಸರ್ಕಾರಿ ಭೂಮಿ ಸ್ಮಶಾನ, ಆಶ್ರಯಕ್ಕೆ: ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿನ ಪ್ರತಿ ಗ್ರಾಮಗಳಲ್ಲಿ ಲಭ್ಯ ಇರುವ ಸರ್ಕಾರಿ ಜಮೀನುಗಳನ್ನು ಸ್ಮಶಾನಕ್ಕೆ ಕಾಯ್ದಿರಿಸುವಂತೆಯೂ, ಅಧಿಕವಾಗಿ ಸರ್ಕಾರಿ ಜಮೀನು ಇದ್ದಲ್ಲಿ ಆ ಗ್ರಾಮಗಳ ಆಶ್ರಯ ಬಡಾವಣೆಗಳನ್ನು ನಿರ್ಮಾಣ ಮಾಡಲು ಕಾಯ್ದಿರಿಸುವಂತೆಯೂ ಕೋರಿದರು.

ಕೆರೆ, ಕಾಲುವೆ ಒತ್ತುವರಿ ತೆರವು: ಮೈಸೂರು ನಗರ ಪ್ರದೇಶದಲ್ಲಿರುವ ಕೆರೆಗಳೂ ಹಾಗೂ ರಾಜ ಕಾಲುವೆಗಳನ್ನು ಒತ್ತುವರಿ ಮಾಡಿ, ಬಡಾವಣೆಗಳನ್ನು ನಿರ್ಮಾಣ ಮಾಡಲಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಟಾಸ್ಕ್ ಫೋರ್ಸ್ ರಚಿಸಿ, ಕೂಡಲೇ ಕೆರೆಗಳು ಮತ್ತು ರಾಜ ಕಾಲುವೆಗಳನ್ನು ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆಯೂ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಂದಾಯ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕಟಾರಿಯ, ಪ್ರಾದೇಶಿಕ ಆಯುಕ್ತರಾದ ಪ್ರಕಾಶ್, ಮೈಸೂರು ಜಿಲ್ಲಾಧಿಕಾರಿ ಡಾ. ರಾಜೇಂದ್ರ, ಮಂಡ್ಯ ಜಿಲ್ಲಾಧಿಕಾರಿ ಕುಮಾರ್ ಇತರರು ಹಾಜರಿದ್ದರು.

ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿ ನಿಲ್ಲಬೇಕಿಲ್ಲ ಕ್ಯೂ, ಬಂದಿದೆ ಕ್ಯೂಆರ್ ಕೋಡ್

- ಹೊರರೋಗಿಗಳ ನೋಂದಣಿಗೆ 'ಕ್ಯೂಆರ್' ಕೋಡ್ ವ್ಯವಸ್ಥೆ ಜಾರಿ
- ಆಸ್ಪತ್ರೆ ಮುಂದೆ ರೋಗಿಗಳು ಸಾಲಾಗಿ ನಿಲ್ಲುವಿಕೆ ತಡೆಗೆ ನೂತನ ವ್ಯವಸ್ಥೆ
- ರೋಗಿಗಳು ಮೊಬೈಲ್‌ನಲ್ಲೇ ಸ್ಕ್ಯಾನ್ ಮಾಡಿ ಸಂದರ್ಶನದ ಟೋಕನ್ ಪಡೆಯಬಹುದು
- ಪ್ರಾಯೋಗಿಕ ಸೇವೆ ಆರಂಭ, ರೋಗಿಗಳಲ್ಲಿ ಜಾಗೃತಿ ಮೂಡಿಸುತ್ತಿರುವ ಆಸ್ಪತ್ರೆ ಸಿಬ್ಬಂದಿ



ಹೊರರೋಗಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳುತ್ತಿರುವುದು.



ಜಿಲ್ಲಾಸ್ಪತ್ರೆಗೆ ಬಂದ ರೋಗಿಗಳು ಹೆಸರು ನೋಂದಣಿಗಾಗಿ ಸರದಿ ಸಾಲಿನಲ್ಲಿ ನಿಂತಿರುವುದು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.8– ಅನಾರೋಗ್ಯ ಪೀಡಿತ ರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ ಪಡೆದುಕೊಳ್ಳಲು ಹೆಸರು ನೋಂದಾಯಿಸಿಕೊಳ್ಳಲು ಸಾಲುಗಟ್ಟಿ ನಿಲ್ಲುವ ವ್ಯವಸ್ಥೆಗೆ ಬ್ರೇಕ್ ಹಾಕಲು ಆರೋಗ್ಯ ಇಲಾಖೆ ಮುಂದಾಗಿದ್ದು, ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿ ಹೊರರೋಗಿಗಳ ನೋಂದಣಿಗಾಗಿ 'ಕ್ಯೂಆರ್' ಕೋಡ್ ಸ್ಕ್ಯಾನ್ ವ್ಯವಸ್ಥೆ ಜಾರಿಗೊಳಿಸಲಾಗಿದೆ.

ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ನೂತನ ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ವಿವಿಧ ಅನಾರೋಗ್ಯ ಪೀಡಿತ ರೋಗಿಗಳು ತಪಾಸಣೆ ಹಾಗೂ ಚಿಕಿತ್ಸೆಗಾಗಿ ಹೆಸರು ನೋಂದಾಯಿಸಿಕೊಳ್ಳಲು ಆಸ್ಪತ್ರೆ ಮುಂದೆ ಸಾಲುಗಟ್ಟಿ ನಿಲ್ಲಬೇಕಾದ ಅನಿವಾರ್ಯತೆ ಇತ್ತು.

ಆದರೆ, ಇದೀಗ ಕೇಂದ್ರದ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಅಡಿಯಲ್ಲಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳು ಹೆಸರು ನೋಂದಣಿಗಾಗಿ ಸಾಲುಗಟ್ಟಿ ನಿಲ್ಲುವ ಪದ್ಧತಿಗೆ ತಿಲಾಂಜಲಿ ನೀಡಿ, ತಂತ್ರಜ್ಞಾನ ಬಳಸಿಕೊಂಡು ಸರಳ, ಸುಲಭ ಹಾಗೂ ಜನಸ್ನೇಹಿ ವಾತಾವರಣ ನಿರ್ಮಿಸಲು ಕಾರ್ಯಕ್ರಮ ರೂಪಿಸುವಂತೆ ಸೂಚನೆ ನೀಡಲಾಗಿದ್ದು, ಅದರ ಅಂಗವಾಗಿ ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿ 'ಕ್ಯೂಆರ್' ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳುವುದರೊಂದಿಗೆ ವೈದ್ಯರ ಸಂದರ್ಶನಕ್ಕಾಗಿ ಆನ್‌ಲೈನ್ ಮೂಲಕವೇ ಟೋಕನ್ ಪಡೆದುಕೊಳ್ಳುವ ವ್ಯವಸ್ಥೆ ಜಾರಿಗೊಳಿಸಲಾಗಿದೆ.

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಿಂದಲೂ ಅನಾರೋಗ್ಯ ಪೀಡಿತರು ಚಿಕಿತ್ಸೆ ಪಡೆದುಕೊಳ್ಳಲು ಆಗಮಿಸುತ್ತಿದ್ದು, ಹೆಸರು ನೋಂದಾಯಿಸಿಕೊಳ್ಳುವುದಕ್ಕಾಗಿಯೇ ಸಾಲುಗಟ್ಟಿ ನಿಲ್ಲಬೇಕಾದ ಅನಿವಾರ್ಯತೆ ಎದುರಾಗಿತ್ತು. ಆದರೆ, ಬಹುತೇಕ ಮಂದಿ ಬಳಿ ಆ್ಯಂಡ್ರಾಯ್ಡ್ ಮೊಬೈಲ್ ಇರುವುದರಿಂದ ಆಸ್ಪತ್ರೆಗೆ ಬರುವ ಹೊರರೋಗಿಗಳು ತಮ್ಮ ಮೊಬೈಲ್ ಮೂಲಕವೇ ಆರೋಗ್ಯ ತಪಾಸಣೆಗಾಗಿ ಹಾಗೂ ವೈದ್ಯರನ್ನು ಭೇಟಿ ಮಾಡುವುದಕ್ಕಾಗಿ ಟೋಕನ್ ಪಡೆದುಕೊಳ್ಳಬಹುದಾಗಿದೆ.

> ರೋಗಿಗಳು ಸರದಿ ಸಾಲಿನಲ್ಲಿ ನಿಲ್ಲುವುದಕ್ಕೆ ಅಸಾಧ್ಯವಾಗಿತ್ತು. ಮೊದಲೇ ಅನಾರೋಗ್ಯ ಪೀಡಿತರು ಸಾಲಿನಲ್ಲಿ ನಿಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸಾಕಷ್ಟು ಮಂದಿ ನಿಂತಿರುವಾಗಲೇ ಕುಸಿದು ಬಿದ್ದಿರುವ ನಿದರ್ಶನವಿದೆ. ಈ ಹಿನ್ನೆಲೆಯಲ್ಲಿ ಮೊಬೈಲ್ ಮೂಲಕವೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿಕೊಂಡು ಹೆಸರು ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಉತ್ತಮವಾದುದ್ದಾಗಿದೆ. ಆದರೆ ಗ್ರಾಮೀಣ ಪ್ರದೇಶದಿಂದ ಬರುವ ರೋಗಿಗಳ ಬಳಿ ಆ್ಯಂಡ್ರಾಯ್ಡ್ ಮೊಬೈಲ್ ಇಲ್ಲದಿರುವ ಕಾರಣ, ಅಂತಹವರಿಗೆ ಸಿಬ್ಬಂದಿಗಳು ಮಾರ್ಗದರ್ಶನ ನೀಡಬೇಕು.
>
> – ಪ್ರೇಮಾ ಬೋಧಿ, ಕುವೆಂಪುನಗರ

ವಿಳಂಬಕ್ಕೆ ಬ್ರೇಕ್: ಈ ಹಿಂದೆ ಸಿಬ್ಬಂದಿಗಳು ಕಂಪ್ಯೂಟರ್‌ನಲ್ಲಿ ರೋಗಿಗಳ ಮಾಹಿತಿ ದಾಖಲಿಸುವ ಪದ್ಧತಿ ಇತ್ತು. ಇದರಿಂದ ರೋಗಿಗಳ ಹೆಸರು, ವಯಸ್ಸು, ಲಿಂಗ, ಮತ್ತು ವಿಳಾಸ ಸೇರಿದಂತೆ ಇನ್ನಿತರ ಮಾಹಿತಿ ನಮೂದು ಮಾಡಬೇಕಾದ ಹಿನ್ನೆಲೆಯಲ್ಲಿ ಹೆಚ್ಚು ಸಮಯ ಬೇಕಾಗುತ್ತಿತ್ತು. ಅದರಲ್ಲೂ ವಿವಿಧ ಸೋಂಕುಳ್ಳವರು ಸರದಿ ಸಾಲಿನಲ್ಲಿ ನಿಲ್ಲುತ್ತಿದ್ದುದ್ದರಿಂದ ಇತರರಿಗೂ ಸೋಂಕು ಹರಡುವ ಸಾಧ್ಯತೆ ಇತ್ತು. ಆದರೆ, ಕ್ಯೂಆರ್ ಕೋಡ್ ಸ್ಕ್ಯಾನ್ ವ್ಯವಸ್ಥೆಯಿಂದಾಗಿ ನೋಂದಣಿ ಪ್ರಕ್ರಿಯೆ ಸುಲಭವಾಗಿದೆ.

ಉತ್ತಮ ಸೇವೆ: ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ABDM), ಮತ್ತು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಆಸ್ಪತ್ರೆಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ರೋಗಿಗಳಿಗೆ ತ್ವರಿತಗತಿಯಲ್ಲಿ ಆರೋಗ್ಯ ಸೇವೆ ಒದಗಿಸಲು ಸೂಚನೆ ನೀಡಿದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ದೇಶದ ಹಲವೆಡೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ರೋಗಿಗಳ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಆಯುಷ್ಮಾನ್ ಭಾರತ್ ಹೆಲ್ತ್ ಅಕೌಂಟ್ (ಎಬಿಹೆಚ್‌ಎಂ) ಆ್ಯಪ್ ಅಥವಾ ಆರೋಗ್ಯ ಸೇತು ಅಪ್ಲಿಕೇಶನ್‌ನಂತಹ ಆರೋಗ್ಯ ಅಪ್ಲಿಕೇಶನ್‌ನಿಂದಲೂ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ, ರೋಗಿಗಳು ಹೆಸರು, ವಯಸ್ಸು, ಲಿಂಗ ಮತ್ತು ಯುನಿಕ್ ಆರೋಗ್ಯ ಐಡಿ ಸೇರಿದಂತೆ ಅಗತ್ಯ ಮಾಹಿತಿಯನ್ನು ತ್ವರಿತವಾಗಿ ನಮೂದಿಸಬಹುದಾಗಿದೆ.

ನಮೂದಿಸಲಾದ ಮಾಹಿತಿ ಆಧಾರದ ಮೇಲೆ ಹೊರರೋಗಿಗಳಿಗೆ ಟೋಕನ್ ಸಂಖ್ಯೆ ದೊರೆಯುತ್ತದೆ. ನಂತರ ರೋಗಿಗಳ ಮೊಬೈಲ್‌ಗೆ ಟೋಕನ್ ನಂಬರ್ ಕಳುಹಿಸಲಾಗುತ್ತದೆ. ರೋಗಿಗಳು ತಾವು ಹೋಗಬೇಕಾದ ವಿಭಾಗದ ಮುಂದೆ ಕಾಯ್ದಿರಿಸಿದ ಸ್ಥಳದಲ್ಲಿ ಕುಳಿತುಕೊಂಡು ತಮಗೆ ದೊರೆತ ಟೋಕನ್ ಸಂಖ್ಯೆ ಬರುವವರೆಗೂ ಕಾಯಬೇಕು. ಆಯಾ ವಿಭಾಗದ ಮುಂದೆ ಟೋಕನ್ ಸಂಖ್ಯೆ ಪರದೆ ಮೇಲೆ ಬಿತ್ತರಗೊಳ್ಳಲಿದೆ. ಇದರಿಂದ ರೋಗಿಗಳು ಸಾಲಿನಲ್ಲಿ ನಿಲ್ಲುವುದು ತಪ್ಪಿದಂತಾಗಿದೆ. ಆ್ಯಂಡ್ರಾಯ್ಡ್ ಮೊಬೈಲ್ ಹೊಂದಿರದ ರೋಗಿಗಳು ಕೌಂಟರ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು.


ರೆಡಿ... ಲೈಟ್ಸ್... ಕ್ಯಾಮರಾ... ಆ್ಯಕ್ಷನ್.....



ಮೈಸೂರು ಅರಮನೆ ಸುತ್ತಮುತ್ತ ಕೆಲವರ 'ಪ್ರಿ ವೆಡ್ಡಿಂಗ್ ಶೂಟ್'ನಿಂದ ಹಲವರಿಗೆ ಸಂಕಟ

- ರಾಜ್ಯ–ದೇಶದ ವಿವಿಧೆಡೆಯಿಂದ ಬಂದ ಯುವ ಜೋಡಿ
- ರಸ್ತೆ, ವೃತ್ತದ ಮಧ್ಯೆ ನಿಂತು ಫೋಟೋ, ವೀಡಿಯೋಗೆ ಪೋಸು
- ವಾಹನ ಸಂಚಾರಕ್ಕೆ ಆಗಾಗ ತೀವ್ರ ಅಡಚಣೆ
- ಮುತ್ತಿಡುವ ದೃಶ್ಯಗಳಿಂದ ಜನರಲ್ಲಿ ಮುಜುಗರ







ಬಾಪುಲಿಂಗರಾಜ್ ಅರಸ್

ಮೈಸೂರು, ಆ.8(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ಅರಮನೆಯ ಚಾಮರಾಜ ಒಡೆಯರ್ ವೃತ್ತ ಪ್ರಿ ವೆಡ್ಡಿಂಗ್ ಶೂಟ್‌ಗೆ ಹಾಟ್‌ಸ್ಪಾಟ್ ಆಗಿದೆ. ಬೆಂಗಳೂರು ಸೇರಿದಂತೆ ರಾಜ್ಯ ಹಾಗೂ ದೇಶದ ಹಲವೆಡೆಯಿಂದ ಬರುವ ಯುವ ಜೋಡಿಗಳು ಅರಮನೆಯ ಸೌಂದರ್ಯದ ಬ್ಯಾಕ್ ಡ್ರಾಪ್‌ನಲ್ಲಿ ವಿವಿಧ ಭಂಗಿಯಲ್ಲಿ ಫೋಟೋ, ವಿಡಿಯೋ ತೆಗೆಸಿಕೊಳ್ಳುತ್ತಿದ್ದಾರೆ. ರಸ್ತೆ ಹಾಗೂ ವೃತ್ತದ ಮಧ್ಯೆಯೇ ನಿಂತು ಫೋಟೋಗೆ ಪೋಸು ಕೊಡುತ್ತಿರುವುದರಿಂದ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗುತ್ತಿದೆ. ರಸ್ತೆ ಮಧ್ಯೆಯೇ ಪರಸ್ಪರ ಚುಂಬನ ಸೇರಿದಂತೆ ನಾನಾ ದೃಶ್ಯಗಳಿಂದ ಜನರಿಗೆ ಒಂದು ರೀತಿಯ ಮುಜುಗರವಾಗುತ್ತಿದೆ

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಯಾವುದೇ ರಸ್ತೆ ನೋಡಿದರೂ ಟ್ರಾಫಿಕ್ ಜಾಮ್. ಅದೂ ಅಲ್ಲದೆ ಅಲ್ಲಿ ಪಾರಂಪರಿಕ ಶೈಲಿಯ ಹೆಚ್ಚು ಕಟ್ಟಡಗಳಿಲ್ಲ. ಆದರೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅರಮನೆ ಸೇರಿದಂತೆ ಮಹಾರಾಜರ ಕಾಲದ ಹತ್ತಾರು ಸುಂದರ ಪಾರಂಪರಿಕ ಕಟ್ಟಡಗಳಿವೆ. ಮೈಸೂರಿನ ರಸ್ತೆಗಳು ವಿಶಾಲವಾಗಿದ್ದು, ಜೊತೆಗೆ ಅಷ್ಟೇನೂ ವಾಹನ ದಟ್ಟಣೆ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅರಮನೆಯ ಸೌಂದರ್ಯದ ಬ್ಯಾಕ್ ಡ್ರಾಪ್‌ನಲ್ಲಿ ನಾನಾ ಭಂಗಿಯ ಫೋಟೋ, ವಿಡಿಯೋ ತೆಗೆಸಿಕೊಳ್ಳಲು ಹೇಳಿ ಮಾಡಿಸಿದ ಸ್ಥಳವಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ರಾಜ್ಯ ಹಾಗೂ ದೇಶದ ನಾನಾ ಕಡೆಯ ಯುವ ಜೋಡಿ ಪ್ರಿ ವೆಡ್ಡಿಂಗ್ ಶೂಟ್‌ಗೆ ಮೈಸೂರಿಗೆ ಬರುತ್ತಿದ್ದಾರೆ.

ಮೈಸೂರು ಅರಮನೆಯ ಉತ್ತರ ದ್ವಾರದ ಚಾಮರಾಜ ಒಡೆಯರ್ ಸರ್ಕಲ್ ಪ್ರಿ ವೆಡ್ಡಿಂಗ್ ಶೂಟ್‌ಗೆ ತುಂಬಾ ಬೇಡಿಕೆಯಲ್ಲಿದೆ. ಪ್ರತಿ ದಿನ ಮುಂಜಾನೆ 6 ಗಂಟೆಗೆ ಆರಂಭವಾಗುವ ಪ್ರಿ ವೆಡ್ಡಿಂಗ್ ಶೂಟ್ ಹಲವು ಗಂಟೆಗಳ ಕಾಲ ನಿರಂತರವಾಗಿ ನಡೆಯುತ್ತಿದೆ. ಸೂರ್ಯನ ಕಿರಣದ ಪ್ರಖರತೆ ಹೆಚ್ಚಾದಂತೆ ಮುಖದ ಮೇಲೆ ಲೈಟಿಂಗ್ ತೀಕ್ಷ್ಣತೆ ಪರಿಣಾಮ ಬೀರುವ ಕಾರಣ 9ರಿಂದ 10 ಗಂಟೆಗೆಲ್ಲಾ ಶೂಟಿಂಗ್ ಕೈಬಿಡುತ್ತಾರೆ.

ಅರಮನೆಯ ಬ್ಯಾಕ್ ಡ್ರಾಪ್‌ನಲ್ಲಿ ವೃತ್ತದ ಒಂದೊಂದು ಸ್ಥಳದಲ್ಲಿ ನಿಂತು ವಿಭಿನ್ನವಾದ ಫೋಟೋ, ವಿಡಿಯೋಗಳನ್ನು ಮಾಡಿಕೊಳ್ಳುತ್ತಾರೆ. ಶನಿವಾರ ಮತ್ತು ಭಾನುವಾರ ಮತ್ತೂ ಯುವ ಜೋಡಿಯ ದಂಡೇ ಅಲ್ಲಿರುತ್ತದೆ

ಯುವ ಜೋಡಿಯು ದೊಡ್ಡ ಗಡಿಯಾರದಿಂದ ಚಾಮರಾಜ ಒಡೆಯರ್ ಸರ್ಕಲ್‌ವರೆಗೆ ಉದ್ದಕ್ಕೂ ನಿಂತು ಫೋಟೋ, ವಿಡಿಯೋ ತೆಗೆಸಿಕೊಳ್ಳುತ್ತಿರುತ್ತಾರೆ. ಜೊತೆಗೆ ಡಾ.ರಾಜ್‌ಕುಮಾರ್ ಪಾರ್ಕ್, ಡಾ.ವಿಷ್ಣುವರ್ಧನ್ ಪಾರ್ಕ್‌ನಲ್ಲಿಯೂ ಶೂಟಿಂಗ್ ನಡೆಸುತ್ತಾರೆ.

ಇದೂವರೆಗೆ ಪ್ರಿ ವೆಡ್ಡಿಂಗ್ ಶೂಟ್ ಮಾತ್ರ ನಡೆಯುತ್ತಿತ್ತು. ಆದರೆ ಈಗ ಬೇಬಿ ಬಂಪ್ ಫೋಟೋ ಶೂಟ್(ಗರ್ಭಿಣಿ ಸ್ತ್ರೀ) ಕೂಡ ಆರಂಭವಾಗಿದೆ. ಅರಮನೆಯ ಸೌಂದರ್ಯದ ಹಿನ್ನೆಲೆಯಲ್ಲಿ ಫೋಟೋ, ವಿಡಿಯೋ ತೆಗೆಸಿಕೊಳ್ಳುವುದು ಕ್ರೇಜ್ ಆಗಿದೆ. ಈ ಮೊದಲು ಮೈಸೂರಿನ ಯುವಕ–ಯುವತಿಯರು ಮಾತ್ರ ಪ್ರಿ ವೆಡ್ಡಿಂಗ್ ಶೂಟ್ ಮಾಡಿಸಿಕೊಳ್ಳುತ್ತಿದ್ದರು. ಆದರೆ ಈಗ ಬೆಂಗಳೂರು ಸೇರಿದಂತೆ ದೇಶದ ವಿವಿಧ ಸ್ಥಳಗಳ ಯುವಕ–ಯುವತಿಯರ ಸಂಖ್ಯೆಯೇ ಹೆಚ್ಚಾಗಿದೆ.

ಸಿನಿಮಾ ಶೂಟಿಂಗ್ ರೀತಿ ಇಲ್ಲಿ ದಿನ ಬೆಳಗಾದರೆ ಚಿತ್ರೀಕರಣ ನಡೆಯುತ್ತದೆ. ಬ್ಯೂಟಿಷಿಯನ್ನರು ಜೊತೆಯಲ್ಲೇ ಇದ್ದು, ಹಾಗಾಗೆ ಮೇಕಪ್ ಕೂಡ ಮಾಡುತ್ತಿರುತ್ತಾರೆ. ಫೋಟೋ, ವಿಡಿಯೋ ಚಿತ್ರೀಕರಣ ಕೂಡ ಮಾಡಲಾಗುತ್ತದೆ.

ಫೋಟೋ ಶೂಟ್‌ಗಾಗಿ ಡ್ರೋನ್ ಕೂಡ ಬಳಸಲಾಗುತ್ತಿದೆ. ಆದರೆ ಅರಮನೆ ಸುತ್ತಮುತ್ತಲಿನ ಪ್ರದೇಶದಲ್ಲಿ ಹಳದಿ ವಲಯ ಎಂದು ಘೋಷಣೆ ಮಾಡಿರುವ ಮೈಸೂರು ಅರಮನೆ ಮಂಡಳಿ ಡ್ರೋನ್ ಚಿತ್ರೀಕರಣವನ್ನು ಸೋಮವಾರದಿಂದ ನಿಷೇಧಿಸಿದೆ.

ಚಾಮರಾಜ ಒಡೆಯರ್ ಸರ್ಕಲ್, ದೊಡ್ಡ ಗಡಿಯಾರ ಸೇರಿದಂತೆ ಕೆಲವು ಕಡೆ ರಸ್ತೆ ಹಾಗೂ ವೃತ್ತದ ಮಧ್ಯೆ ಪ್ರಿ ವೆಡ್ಡಿಂಗ್ ಫೋಟೋ ಮಾಡುತ್ತಿರುವ ಕಾರಣ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಹತ್ತಾರು ಯುವಕ ಯುವತಿಯರು ಫೋಟೋ ಶೂಟ್ ಮಾಡಿಸಿಕೊಳ್ಳುತ್ತಿರುವ ಕಾರಣ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ.

ಕೆಲವು ಯುವಕ ಯುವತಿಯರು ರಸ್ತೆ ಮಧ್ಯೆಯೇ ನಿಂತು ಮುತ್ತು ಕೊಡುವುದು ಇನ್ನಿತರ ದೃಶ್ಯಗಳಿಗೆ ಪೋಸು ಕೊಡುತ್ತಾರೆ. ಅದನ್ನು ನೋಡಿ ಸಾರ್ವಜನಿಕರಿಗೆ ಮುಜುಗರವಾಗುತ್ತಿದೆ.

ಫೋಟೋ ಶೂಟ್‌ನಲ್ಲಿ ಯುವಕ ಯುವತಿಯರು ಮೈಮರೆತಾಗ ಯಾವುದಾದರೂ ವಾಹನ ವೇಗವಾಗಿ ಬಂದು ಅಪಘಾತವಾದರೆ ಏನು ಗತಿ ಎಂಬ ಆತಂಕ ದಾರಿಹೋಕರಲ್ಲಿ ಮನೆ ಮಾಡಿದೆ.

> ಮೈಸೂರು ಅರಮನೆ ಉತ್ತರ ದ್ವಾರದ ಮುಂದೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಿ ವೆಡ್ಡಿಂಗ್ ಶೂಟ್ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಜೊತೆಗೆ ಆ ಸಂದರ್ಭ ಸಾರ್ವಜನಿಕರಿಗೂ ಕಿರಿಕಿರಿ ಉಂಟಾಗುವುದು ಸಹಜ. ಈ ನಿಟ್ಟಿನಲ್ಲಿ ನಾವು ಸಂಚಾರಿ ಪೊಲೀಸರ ಮೂಲಕ ಕಾರ್ಯಾಚರಣೆ ನಡೆಸಿ ಸಮಸ್ಯೆ ಬಗಹರಿಸುತ್ತೇವೆ.
>
> –ಬಿ.ರಮೇಶ್, ಮೈಸೂರು ಪೊಲೀಸ್ ಆಯುಕ್ತರು

> ಪ್ರಿ ವೆಡ್ಡಿಂಗ್ ಶೂಟ್‌ನಿಂದ ಅರಮನೆ ಉತ್ತರ ದ್ವಾರದಲ್ಲಿರುವ ಪಾರಿವಾಳಗಳಿಗೆ ಕೂಡ ತೊಂದರೆ ಆಗುತ್ತಿದೆ. ಆಂಜನೇಯಸ್ವಾಮಿ ದೇವಸ್ಥಾನದ ಮುಂದಿನ ಆವರಣದಲ್ಲಿ ಪಕ್ಷಿ ಪ್ರಿಯರು ಪ್ರತಿದಿನ ಬೆಳಗ್ಗೆ ಪಾರಿವಾಳಗಳಿಗಾಗಿ ಆಹಾರ ನೀಡುತ್ತಾರೆ. ಬೆಳಗ್ಗೆ 6 ಗಂಟೆಯಿಂದ 11 ಗಂಟೆ ತನಕ ಸಾವಿರಾರು ಪಾರಿವಾಳಗಳು ಬಂದು ಆಹಾರ ಸೇವಿಸುತ್ತವೆ. ಆವರಣದ ಸುತ್ತ ಬ್ಯಾರಿಕೇಡ್ ಅಳವಡಿಸಿರುವ ಪೊಲೀಸರು ಅಲ್ಲಿ ಯಾರೂ ಬರದಂತೆ ನಿರ್ಬಂಧಿಸಿದ್ದಾರೆ. ಆದರೆ ಅರಮನೆ ಸೌಂದರ್ಯದ ಬ್ಯಾಕ್ ಡ್ರಾಪ್‌ನಲ್ಲಿ ಪಾರಿವಾಳ ಹಾರಿ ಹೋಗುವುದರ ಮುಂದೆ ಫೋಟೋ ಶೂಟ್ ಮಾಡಿಸಿಕೊಳ್ಳಲು ಯುವ ಜೋಡಿಗಳು ಮುಂದಾಗುತ್ತಾರೆ. ಆಹಾರ ಸೇವಿಸುವ ಪಾರಿವಾಳಗಳನ್ನು ಫೋಟೋ ಶೂಟ್‌ಗಾಗಿ ಹಾಗಾಗೆ ಹಾರಿಸುತ್ತಾರೆ. ಪಾರಿವಾಳಗಳು ನೆಮ್ಮದಿಯಿಂದ ಆಹಾರ ಸೇವಿಸಲು ಬಿಡುತ್ತಿಲ್ಲ.



ಒಕ್ಕಲಿಗರ ಸಮುದಾಯ ಭವನಕ್ಕೆ ಜಾಗ, ಹಣದ ವ್ಯವಸ್ಥೆ

ಕೆಂಪೇಗೌಡರ ಜಯಂತಿಯಲ್ಲಿ ಸಚಿವ ಕೆ.ವೆಂಕಟೇಶ್ ಭರವಸೆ



ಹೆಚ್.ಡಿ.ಕೋಟೆ, ಆ.8– ಒಕ್ಕಲಿಗರ ಸಮುದಾಯ ಭವನ ನಿರ್ಮಾಣಕ್ಕೆ ಜಾಗದ ಜೊತೆಗೆ ಹಣವನ್ನು ನಮ್ಮ ಸರ್ಕಾರದಿಂದ ಕೊಡಿಸಲು ನಾನು ಮತ್ತು ಅನಿಲ್ ಚಿಕ್ಕಮಾದು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ ಎಂದು ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್ ತಿಳಿಸಿದ್ದಾರೆ.

ಪಟ್ಟಣದ ಬಿಜಿಎಸ್ ಸಭಾ ಭವನದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕು ಒಕ್ಕಲಿಗರ ಸಂಘದಿಂದ ಆಯೋಜಿಸಲಾಗಿದ್ದ ಕೆಂಪೇಗೌಡರ 514ನೇ ಜಯಂತಿ ಮಹೋತ್ಸವನ್ನು ಉದ್ದೇಶಿಸಿ ಅವರು ಮಾತನಾಡಿದರು. ಇಡೀ ಪ್ರಪಂಚಕ್ಕೆ ಬೆಂಗಳೂರಿನ ಬಗ್ಗೆ ಒಳ್ಳೆಯ ಮೂಡಲು ಕೆಂಪೇಗೌಡರೇ ಕಾರಣ. ಬೆಂಗಳೂರಿಗೆ ಅಡಿಗಲ್ಲನ್ನು ಹಾಕಿದ ಮಹಾನ್ ಚೇತನ ನಮ್ಮ ಕೆಂಪೇಗೌಡರು. ಸಮಾಜದ ಅಭಿವೃದ್ಧಿಗಾಗಿ, ಸಮಾಜದ ಏಳ್ಗೆಗಾಗಿ ಕೆಲಸ ಮಾಡುವವರಿಗೆ ಬೆಂಬಲಿಸಿ ಎಂದು ಸಮಾಜದವರಿಗೆ ಸಚಿವರು ಕರೆ ನೀಡಿದರು.

ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ನಾವು ಜಯಂತಿಗಳನ್ನು ಆಚರಣೆ ಮಾಡಿದರೆ ಸಾಲದು, ಅವರ ನೀತಿ ನಿಯಮಗಳನ್ನು ಅನುಸರಿಸಿ ಅವರ ದಾರಿಯಲ್ಲಿ ನಡೆದಾಗ ಮಾತ್ರ ಜಯಂತಿ ಕಾರ್ಯಕ್ರಮಗಳ ಆಚರಣೆಗೆ ಫಲ ನೀಡುತ್ತದೆ ಎಂದರು. ಮನುಷ್ಯನಾದವ ಒಳ್ಳೆಯ ಮನಸ್ಸಿನಿಂದಾಗಿ ಬದುಕಿದಾಗ ಮಾತ್ರ ಯಶಸ್ಸು ಸಾಧ್ಯ, ಕೊಳಕು ಮನಸ್ಥಿತಿಯಲ್ಲಿ ಮನುಷ್ಯ ಜೀವನ ನಡೆಸಬಾರದು ಎಂದು ತಿಳಿಸಿದ ಅವರು, ಮುಂದಿನ ದಿನಗಳಲ್ಲಿ ಎಲ್ಲಾ ಸಮುದಾಯದವರ ಜಯಂತಿಗಳಲ್ಲಿ ಎಲ್ಲಾ ಸಮಾಜದವರು ಭಾಗವಹಿಸುವಂತಾಗಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಒಕ್ಕಲಿಗ ಸಮಾಜದ ಸಹಕಾರದಿಂದ ನಾನು ಇಂದು ಶಾಸಕನಾಗಿದ್ದೇನೆ. ನಾಮಪತ್ರ ಸಲ್ಲಿಸಲು ಆದಿಚುಂಚನಗಿರಿ ಮಠಕ್ಕೆ ತೆರಳಿ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದಿದ್ದೆ ಎಂದು ಇದೇ ಸಂದರ್ಭದಲ್ಲಿ ಸ್ಮರಿಸಿದರು.

ಇದಕ್ಕೂ ಮುನ್ನ ಬೆಳಿಗ್ಗೆ 11 ಗಂಟೆಗೆ ಕೆಂಪೇಗೌಡರ ಪ್ರತಿಮೆಯನ್ನು ವಿವಿಧ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೆಳ್ಳಿರಥದಲ್ಲಿ ಮೆರವಣಿಗೆ ಮೂಲಕ ಆದಿಚುಂಚನಗಿರಿ ಕಾಲೇಜು ಆವರಣದಿಂದ ಮೆರವಣಿಗೆ ಹೊರಟು ಬಿಜಿಎಸ್ ಸಭಾಭವನದಲ್ಲಿ ಕೊನೆಗೊಂಡು ವೇದಿಕೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ, ಜಯಕರ್ನಾಟಕ ಸಂಘಟನಾ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕ ಗಂಗಾಧರ್ ಗೌಡ, ಒಕ್ಕಲಿಗ ಸಂಘದ ಜಿಲ್ಲಾಧ್ಯಕ್ಷ ಮರಿಸ್ವಾಮಿ, ತಾಲೂಕು ಅಧ್ಯಕ್ಷ ಸುರೇಂದ್ರ ಗೌಡ, ಗೌರವ ಅಧ್ಯಕ್ಷ ಕೃಷ್ಣೇಗೌಡ, ಉಪಾಧ್ಯಕ್ಷರುಗಳಾದ ಕಲ್ಲವೀರೇಗೌಡ ಕಾಳಪ್ಪ, ಮುರಳಿ, ಪ್ರಧಾನ ಕಾರ್ಯದರ್ಶಿ ಚೆಲುವರಾಜು, ಖಜಾಂಚಿ ಗೋವಿಂದೇಗೌಡ, ನಿರ್ದೇಶಕರುಗಳಾದ ವೆಂಕಟೇಶ್, ಪ್ರಕಾಶ್, ಡಿ.ಜೆ. ಶಿವಣ್ಣಗೌಡ, ಸೋಮೇಶ, ಬಸವರಾಜು, ಮಹೇಶ್, ರಾಜೇಶ್, ನಿಂಗೇಗೌಡ, ಕಾಳಿಂಗೇಗೌಡ, ಬಿ. ಸಿ. ರವಿ ಚೆಲುವರಾಜು, ಶಿವಲಿಂಗೇಗೌಡ, ನಾಗೇಂದ್ರ, ಮಹೇಶ್, ಶಿವರಾಜು, ಶ್ರೀಧರ್, ಇನ್ನು ಮುಂತಾದವರು ಹಾಜರಿದ್ದರು.

> ಒಕ್ಕಲಿಗ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್.ಡಿ.ಕೋಟೆ ಪಟ್ಟಣದ ಇಂದಿರಾ ಕ್ಯಾಂಟಿನ್ ಬಳಿ ಇರುವ 32 ಕುಂಟೆ ಜಾಗವನ್ನು ನೀಡುವೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಮಾಜದ ಮುಖಂಡರಾದ ಎಸ್.ಎಂ.ಕೃಷ್ಣ, ಕುಮಾರ ಸ್ವಾಮಿ, ದೇವೇಗೌಡ, ಡಿ.ಕೆ.ಶಿವ ಕುಮಾರ್ ಸೇರಿದಂತೆ ಹಲವರು ಶ್ರಮಿಸಿದ್ದಾರೆ.
> -ಅನಿಲ್ ಚಿಕ್ಕಮಾದು, ಶಾಸಕ

ಮರಳೂರು ಗ್ರಾಪಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ



ನಂಜನಗೂಡು, ಆ.8– ವರುಣ ಕ್ಷೇತ್ರಕ್ಕೆ ಒಳಪಡುವ ತಾಲೂಕಿನ ಮರಳೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳಾದ ಶ್ರೀಧರ್, ಉಪಾಧ್ಯಕ್ಷರಾಗಿ ಮಹದೇವಮ್ಮ ಅವಿರೋಧವಾಗಿ ಆಯ್ಕೆಯಾದರು.

18 ಸದಸ್ಯ ಬಲವನ್ನು ಹೊಂದಿರುವ ಮರಳೂರು ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನ ಎಸ್ಟಿ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾತಿ ನಿಗದಿಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಶ್ರೀಧರ್, ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಮ್ಮ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ಅಕ್ಷರ ದಾಸೋಹ ಅಧಿಕಾರಿ ಮಲ್ಲಿಕಾರ್ಜುನ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಶ್ರೀಧರ್ ಮಾತನಾಡಿ ಮರಳೂರು ಗೊದ್ದನಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲೂ ಸಹ ಸ್ವಚ್ಛತೆಗೆ ಆದ್ಯತೆ ನೀಡಿ. ಎಲ್ಲಾ ಗ್ರಾಮಗಳಿಗೂ ಚರಂಡಿ, ಕುಡಿಯುವ ನೀರು, ಬೀದಿದೀಪ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲು ಶ್ರಮಿಸುತ್ತೇನೆ ಅಲ್ಲದೆ ಸರ್ಕಾರದಿಂದ ಫಲಾನುಭವಿಗಳಿಗೆ ದೊರಕುವ ಸವಲತ್ತನ್ನು ಯಾವುದೇ ಮಧ್ಯವರ್ತಿಗಳಿಗೆ ಆಸ್ಪದ ನೀಡದೆ ಅರ್ಹ ಫಲಾನುಭವಿಗಳಿಗೆ ನೇರವಾಗಿ ತಲುಪಿಸುವ ಕೆಲಸ ಮಾಡುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಶಿವಕುಮಾರ್, ಮಂಜುಳಾ, ಶಶಿಕುಮಾರ್, ದೇವಮಣಿ, ಮಾಲೆಗೌಡ, ಸುಗಂಧರಾಜ, ಕೂಸಪ್ಪ, ಮಾಜಿ ಗ್ರಾಪಂ ಅಧ್ಯಕ್ಷೆ ಸುಕನ್ಯಾ ಉಮೇಶ್, ಮುಖಂಡರಾದ ಬಂಗಾರ ನಾಯಕ, ಗ್ರಾಪಂ ಮಾಜಿ ಸದಸ್ಯ ಶಿವಶಂಕರ್, ರಾಜೇಗೌಡ, ಚಂದ್ರು, ರಾಮರಾಜ್, ಭಾಗ್ಯ, ಸೇರಿದಂತೆ ಮರಳೂರು, ಏಚಗಳ್ಳಿ, ಹಳ್ಳಿದಿಡ್ಡಿ ಗ್ರಾಮಸ್ಥರು ಯಜಮಾನರು ಇದ್ದರು.



ನಂಜನಗೂಡು ತಾಲೂಕು ತಾಂಡವಪುರ ಗ್ರಾಮ ಪಂಚಾಯಿತಿಯಲ್ಲಿ ಎರಡನೇ ಅವಧಿಗೆ ಅಧ್ಯಕ್ಷರಾಗಿ ಶ್ರೀಮತಿ ನಾಗಮ್ಮ, ಉಪಾಧ್ಯಕ್ಷರಾಗಿ ಬಿ.ಶಿವಣ್ಣ ಆಯ್ಕೆಯಾದರು. ಈ ವೇಳೆ ಮಾಜಿ ಅಧ್ಯಕ್ಷೆ ಶ್ರೀಮತಿ ನಾಗವೇಣಿ, ಸದಸ್ಯರಾದ ಸುಧಾರಾಣಿ, ರೇವಮ್ಮ, ಸಿದ್ದಮ್ಮ, ಜಯಲಕ್ಷ್ಮಿ, ರತ್ನಮ್ಮ, ರಾಜಲಕ್ಷ್ಮಿ, ಭಾಗ್ಯ, ಶ್ರೀಕಂಠಸ್ವಾಮಿ, ಮಧು, ಪಟೇಲ್, ಚಂದ್ರು, ಬಸಪ್ಪ ಶೆಟ್ಟಿ, ಪಂಚಾಯಿತಿ ಅಧಿಕಾರಿ ಪ್ರಕಾಶ್ ಎಸ್, ಪುಟ್ಟರಾಜು, ರಾಜಣ್ಣ, ವಿಶ್ವನಾಥ್ ಇನ್ನಿತರರಿದ್ದರು.

ಸ್ಟೀಮರ್ ಪೈಪ್ ಸಿಡಿದು ನೌಕರ ಸಾವು

ನಂಜನಗೂಡು, ಆ.8– ತಾಲೂಕಿನ ಅಳಗಂಚಿ ಗ್ರಾಮದ ಬಳಿ ಇರುವ ಬಣ್ಣಾರಿಯಮ್ಮನ್ ಸಕ್ಕರೆ ಕಾರ್ಖಾನೆಯಲ್ಲಿ ಬಾಯ್ಲರ್‌ನಿಂದ ಉತ್ಪಾದನಾ ಘಟಕಕ್ಕೆ ಸರಬರಾಜು ಆಗುವ ಸ್ಟೀಮರ್ ಪೈಪ್ ಸಿಡಿದು ಗಾಯಗೊಂಡಿದ್ದ ನೌಕರ ಚಿಕಿತ್ಸೆ ಫಲಕಾರಿಯಾಗದೆ ಸಾವನಪ್ಪಿರುವ ಘಟನೆ ಜರುಗಿದೆ.

ಕಳೆದ ಜು.29ರಂದು ಬಾಯ್ಲರ್ ಸ್ಟೀಮರ್ ಪೈಪ್ ಸ್ಫೋಟಗೊಂಡು ಅಪ್ಪಾಜಿ ಎನ್ನುವ ನೌಕರನಿಗೆ ತೀವ್ರವಾಗಿ ಸುಟ್ಟ ಗಾಯಗಳಾಗಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು ಮಂಗಳವಾರ ನೌಕರ ಅಪ್ಪಾಜಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಕಾರ್ಖಾನೆಗಳು ಬಾಯ್ಲರ್‌ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ಜೊತೆಗೆ ಕೈಗಾರಿಕೆ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಯಾವುದೇ ತಪಾಸಣೆ ನಡೆಸದೆ ಬೇಜವಾಬ್ದಾರಿ ವಹಿಸಿರುವುದೇ ಘಟನೆಗೆ ಕಾರಣವಾಗಿದೆ ಎಂದು ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಘಟನೆಗೆ ಕಾರ್ಖಾನೆ ಆಡಳಿತ ಮಂಡಳಿ ಯವರು ನೇರ ಹೊಣೆಯಾಗಿರುವ ಕಾರಣ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ನೌಕರರು ಒತ್ತಾಯಿಸಿದ್ದಾರೆ. ಈ ಸಂಬಂಧ ತಾಲೂಕಿನ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಾಲ ಬಾಧೆ ತಾಳಲಾರದೆ ಶಿಕ್ಷಕ ಆತ್ಮಹತ್ಯೆ



ಹುಣಸೂರು, ಆ.8– ಸಾಲದ ಬಾಧೆಯಿಂದ ಮನನೊಂದು ಶಾಲಾ ಶಿಕ್ಷಕರೊಬ್ಬರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮೂಕನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ತಾಲೂಕಿನ ಸೋಮನಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಹಾಗೂ ತರಿಕಲ್ ಗ್ರಾಮದ ಅಜ್ಜೇಗೌಡರ ಮಗ ರೇವಣ್ಣ ಎಂಬವರೇ ಆತ್ಮಹತ್ಯೆಗೆ ಶರಣಾದ ಶಿಕ್ಷಕ.

ರೇವಣ್ಣ ಸೋಮವಾರ ರಾತ್ರಿ 10 ಗಂಟೆಗೆ ಮನೆಯಿಂದ ಹೊರ ಹೋದವರು ವಾಪಸ್ ಮನೆಗೆ ಬಂದಿರಲಿಲ್ಲ ಬೆಳಿಗ್ಗೆ ಮೂಕನಹಳ್ಳಿ ಕೆರೆಯಲ್ಲಿ ಯಾವುದೊ ಮೃತದೇಹ ತೇಲುತ್ತಿರುವುದನ್ನು ಕಂಡು ಗ್ರಾಮಸ್ಥರು ಅಗ್ನಿಶಾಮಕ ದಳಕ್ಕೆ ಮತ್ತು ಹುಣಸೂರು ನಗರ ಪೊಲೀಸರಿಗೆ ಮಾಹಿತಿ ನೀಡಿದರು.

ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಮೃತದೇಹವನ್ನು ಹೊರ ತೆಗೆದಾಗ ಸೋಮನಹಳ್ಳಿ ಶಾಲಾ ಶಿಕ್ಷಕ ಎಂದು ತಿಳಿದು ನಗರದ ನರಸಿಂಹಸ್ವಾಮಿ ಬಡಾವಣೆಯಲ್ಲಿರುವ ಮೃತರ ಮನೆಯವರಿಗೆ ವಿಷಯ ತಿಳಿಸಲಾಯಿತು. ನಗರ ಪೊಲೀಸ್ ಇನ್ಸ್‌ಪೆಕ್ಟರ್ ದೇವೇಂದ್ರ ಮತ್ತು ರಾಜೇಗೌಡ ಅವರು ಸ್ಥಳಕ್ಕೆಬಂದ ಪತ್ನಿ ಮಲ್ಲಕ್ಷಿಯವರಿಂದ ದೂರು ಪಡೆದುಕೊಂಡು ಮೃತ ದೇಹವನ್ನು ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ನೀಡಲಾಯಿತು.

ರೇವಣ್ಣ ಹಲವಾರು ಜನರಿಂದ ಸಾಕಷ್ಟು ಸಾಲ ಮಾಡಿಕೊಂಡಿದ್ದು, ಈ ವಿಚಾರವಾಗಿ ಒಂದೆರಡು ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲೇರಿದ್ದವು ಎನ್ನಲಾಗಿದೆ. ಈ ಎಲ್ಲಾ ವಿಚಾರಗಳಿಂದ ಮನನೊಂದು ನಿನ್ನೆ ರಾತ್ರಿ ಮನೆಯಿಂದ ಹೊರ ಹೋದವರು ಮೂಕನಹಳ್ಳಿ ಗ್ರಾಮದ ಪುಟ್ಟನ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ.

ಮೃತರ ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ಇಂದು ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

ಸೋಮನಾಥಪುರ ಗ್ರಾಪಂಗೆ ಪುಟ್ಟಸ್ವಾಮಿ ಅಧ್ಯಕ್ಷ

ಗೀತಾ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ



ತಿ.ನರಸೀಪುರ, ಆ.8– ತಾಲೂಕಿನ ಸೋಮನಾಥಪುರ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಕೆ.ಪಿ ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ ಗೀತಾ ಅವಿರೋಧವಾಗಿ ಆಯ್ಕೆಯಾದರು. ಒಟ್ಟು 14 ಮಂದಿ ಸದಸ್ಯ ಬಲವುಳ್ಳ ಸೋಮನಾಥಪುರ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದ ಆಯ್ಕೆ ಬಯಸಿ ಕೆ ಪಿ ಪುಟ್ಟಸ್ವಾಮಿ ,ಉಪಾಧ್ಯಕ್ಷ ಸ್ಥಾನಕ್ಕೆ ಗೀತಾ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು.

ನೀರಾವರಿ ಇಲಾಖೆಯ ಎಇಇ ಹಾಗೂ ಚುನಾವಣಾಧಿಕಾರಿ ಚೆಂಗಪ್ಪ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು. ಚುನಾವಣಾ ಸಭೆಯಲ್ಲಿ ಸದಸ್ಯರಾದ ಅರ್ಚನಾ ಸಂದೀಪ್, ಎಸ್ ಸಿದ್ದಪ್ಪ ಗೌರಮ್ಮ, ಎಸ್ ಕಾಂತರಾಜು, ನಾಗರತ್ನಮ್ಮ, ಸುಂದರಮ್ಮ ಹೇಮಾವತಿ, ರಾಜಣ್ಣ, ಕೆ ಪಿ. ಮಂಜೇಶ್ ಗೌಡ, ಪುಟ್ಟಸಿದ್ದಮ್ಮ, ಸುವರ್ಣ, ಗಿರೀಶ್ ಹಾಜರಿದ್ದು, ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿಸಿದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮಾತನಾಡಿದರು. ಜಿ. ಪಂ. ಮಾಜಿ ಸದಸ್ಯ ಜೈಪಾಲ್ ಭರಣಿ, ಗ್ರಾ.ಪಂ.ಮಾಜಿ ಅಧ್ಯಕ್ಷ ಅಶೋಕ್, ಧನಂಜಯ್, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ನ್ಯಾಯಬೆಲೆ ಅಂಗಡಿ ನಾಗೇಂದ್ರ, ತಾಲೂಕು ನಾಯಕರ ಸಂಘದ ಮಾಜಿ ಅಧ್ಯಕ್ಷ ಚಿನ್ನಸ್ವಾಮಿ, ಗುತ್ತಿಗೆದಾರ ರಾಜೇಶ್, ಉಕ್ಕಲಗೆರೆ ಬಸವಣ್ಣ, ಸಂದೀಪ್, ಉಮೇಶ, ಮನು, ಸೋಸಲೆ ರಾಜೇಶ್ ಮತ್ತಿತರರಿದ್ದರು.



ಬೆಟ್ಟದಪುರ ಸಮೀಪದ ಚಪ್ಪರದಹಳ್ಳಿ ಗ್ರಾಪಂ ಆಡಳಿತ ಜೆಡಿಎಸ್ ತೆಕ್ಕೆಗೆ ಬಂದಿದ್ದು, ಅಧ್ಯಕ್ಷೆಯಾಗಿ ಶಶಿಕಲಾ ಕುಮಾರ್, ಉಪಾಧ್ಯಕ್ಷರಾಗಿ ಸರಸ್ವತಿ ಅರುಣ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಮಾಜಿ ಅಧ್ಯಕ್ಷರಾದ ಸಿ.ಕೆ.ವೆಂಕಟೇಶ್, ಸಿ.ಪಿ.ಸುರೇಶ್, ಹೆಚ್.ಎಸ್.ದೇವೇಗೌಡ, ಸಿ.ಎಸ್.ಗಣೇಶ್, ಸದಸ್ಯರಾದ ಮೀನಾಕ್ಷಿ, ಸುನೀತಾ, ಪ್ರೇಮಮ್ಮ, ಶೋಭಾ, ಜಯಶ್ರೀ, ಶ್ರೀದೇವಿ, ಕುಮಾರ್, ರಮಣಯ್ಯ, ಮಹೇಂದ್ರ ಸೇರಿದಂತೆ ಇತರರಿದ್ದರು.



ನಂಜನಗೂಡಿನ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಶ್ರೀ ಶಂಕರಾನಂದ ಆದಿ ಕರ್ನಾಟಕ ಏಡೆಡ್ ಹಾಸ್ಟೆಲ್ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಸಿ.ಬಸವರಾಜು, ಕಾರ್ಯದರ್ಶಿ ಮುದ್ದುಮಾದಯ್ಯ ಹಾಗೂ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ನರಸೀಪುರ ಬಳಿ ತಾಳೆ ಕೃಷಿ ಪ್ರೋತ್ಸಾಹ ಅಭಿಯಾನಕ್ಕೆ ಚಾಲನೆ

ಬಹುಪಯೋಗಿ ತಾಳೆ ಬೆಳೆ ಬೆಳೆಯಲು ತೋಟಗಾರಿಕೆ ಜಂಟಿ ನಿರ್ದೇಶಕರ ಕರೆ

ತಿ.ನರಸೀಪುರ, ಆ.8– ತಾಳೆ ಬೆಳೆಗೆ ಕಾರ್ಯಸಾಧ್ಯತೆಯ ಅಂತರದ ಬೆಲೆ (viability gap price) ಘೋಷಿಸಿರುವುದರಿಂದ ರೈತರು ಕೇವಲ ಅಡಿಕೆ ಬೆಳೆಗಷ್ಟೇ ಒತ್ತು ಕೊಡದೇ ಬಹುಪಯೋಗಿ ತಾಳೆ ಬೆಳೆಯುವಂತೆ ಮೈಸೂರು ವಿಭಾಗದ ತೋಟಗಾರರಿಗೆ ಜಂಟಿ ನಿರ್ದೇಶಕ ಎಚ್.ಎಂ.ನಾಗರಾಜು ಕರೆ ನೀಡಿದರು.

ತಾಲೂಕಿನ ಸೇನಾಪತಿಹಳ್ಳಿ ಗ್ರಾಮದ ಎ.ಎಂ. ಮಂಜುನಾಥ್ ಅವರ ಜಮೀನಿನಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಪತಂಜಲಿ ಫುಡ್ ಲಿ.ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಳೆ ಬೆಳೆ ಕೃಷಿ ಪ್ರೋತ್ಸಾಹ ಅಭಿಯಾನ ಕಾರ್ಯಕ್ರಮಕ್ಕೆ ತಾಳೆ ಗಿಡ ನೆಡುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.



ಭಾರತದಲ್ಲಿ ಖಾದ್ಯ ತೈಲದ ವಾರ್ಷಿಕ ಬೇಡಿಕೆಯನ್ನು ಸ್ಥಳೀಯ ಉತ್ಪಾದನೆಯಿಂದ ಪೂರೈಸಲು ಸಾಧ್ಯವಾಗದ ಕಾರಣ ಕೋಟ್ಯಾಂತರ ರೂ. ಮೌಲ್ಯದ ಖಾದ್ಯ ತೈಲವನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.ಖಾದ್ಯ ತೈಲದ ಆಮದು ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಲ್ಲಿ ತೈಲ ಬೆಳೆಗಳ ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕೆಂದು ಕೇಂದ್ರ ಸರ್ಕಾರವು ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಕಾರ್ಯಕ್ರಮವನ್ನು ಪ್ರಾರಂಭಿಸಿದೆ ಎಂದು ತಿಳಿಸಿದರು.


ತಾಳೆ ಬೆಳೆಯು ಪ್ರತಿ ಹೆಕ್ಟೇರಿಗೆ ಅತ್ಯಧಿಕ ಖಾದ್ಯ ತೈಲ ನೀಡುವುದಲ್ಲದೇ ಇದನ್ನು ಇತರೆ ಉಪ ಉತ್ಪನ್ನಗಳಾದ ಕೆಲವು ಆಹಾರ ಸಂಸ್ಕರಣಾ ಉದ್ಯಮಗಳಲ್ಲಿ ಸೌಂದರ್ಯ ವರ್ಧಕ ಉತ್ಪನ್ನಗಳಲ್ಲಿ, ಜೈವಿಕ ಇಂಧನಗಳ ಮಿಶ್ರಣದಲ್ಲೂ ಕೂಡ ಬಳಸಲಾಗುತ್ತಿದೆ. ಬಹುಪಯೋಗಿ ತಾಳೆ ಎಣ್ಣೆಯನ್ನು ಹೆಚ್ಚಾಗಿ ಉತ್ಪಾದಿಸುವ ನಿಟ್ಟಿನಲ್ಲಿ ತಾಳೆ ಬೆಳೆ ವಿಸ್ತೀರ್ಣವನ್ನು ಹೆಚ್ಚು ಮಾಡುವ ಅವಶ್ಯಕತೆ ಇರುವುದರಿಂದ ರೈತರಿಗೆ ತಾಳೆ ಬೆಳೆಯಲು ಪ್ರೋತ್ಸಾಹ ನೀಡಿ, ತಾಳೆ ಬೆಳೆ ಕೃಷಿ ಅಭಿಯಾನ ಹಮ್ಮಿಕೊಳ್ಳಲಾಗಿರುತ್ತದೆ ಎಂದರು.

ಪತಂಜಲಿ ಫುಡ್‌ನ ಉಪ ಪ್ರಧಾನ ವ್ಯವಸ್ಥಾಪಕ ಎ.ಎಸ್.ಪ್ರಸಾದ್ ಬಾಬು ಮಾತನಾಡಿ, ಕಂಪನಿಯು ತಾಳೆ ಬೆಳೆಯನ್ನು ಖರೀದಿಸುವುದರಿಂದ ಹಾಗೂ ಹಣವನ್ನು ನೇರವಾಗಿ ರೈತರ ಖಾತೆಗಳಿಗೆ ಜಮಾ ಮಾಡುವುದರಿಂದ ಮಾರುಕಟ್ಟೆ ಸಮಸ್ಯೆ ಅಥವಾ ಮಧ್ಯವರ್ತಿಗಳ ಕಾಟ ಇಲ್ಲದಿರುವುದರಿಂದ ರೈತರು ಹೆಚ್ಚಾಗಿ ತಾಳೆ ಬೆಳೆ ಬೆಳೆದು ಆರ್ಥಿಕವಾಗಿ ಸಬಲರಾಗಬೇಕೆಂದು ತಿಳಿಸಿದರು.

ಪ್ರಗತಿ ಪರ ರೈತ ಕಳ್ಳೀಪುರ ಮಹದೇವಸ್ವಾಮಿ ಮಾತನಾಡಿ, ತಾನು ತಾಳೆ ಕೃಷಿಯನ್ನು10 ವರ್ಷಗಳಿಂದ ಮಾಡುತ್ತಿದ್ದು ಇದರಿಂದ ತಮಗೆ ಯಾವುದೇ ನಷ್ಟವಾಗಿಲ್ಲ, ಕಳ್ಳರ ಹಾಗೂ ಮಾರುಕಟ್ಟೆಯ ಗೊಂದಲವೂ ಇಲ್ಲವೆಂದು ತಮ್ಮ ತಾಳೆ ಕೃಷಿ ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಸೇನಾಪತಿಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಸುಧಾ, ಹಿರಿಯ ತೋಟಗಾರಿಕೆ ನಿರ್ದೇಶಕಿ ಹೆಚ್.ಸಿ.ಶಶಿಕಲಾ, ತಾಳೆ ಬೆಳೆ ಯೋಜನೆ ಸಹಾಯಕ ನಿರ್ದೇಶಕ ಸಿ.ಎಂ.ಪ್ರದೀಪ್ ಕುಮಾರ್, ಕ್ಷೇತ್ರ ಸಹಾಯಕ ಇಂಡವಾಳು ಬಸವರಾಜು ಹಾಗು ತಾಳೆ ಬೆಳೆ ಪ್ರಗತಿ ಪರ ರೈತರು, ಪತಂಜಲಿ ಫುಡ್ಸ್ ಲಿ. ಕ್ಷೇತ್ರಾಧಿಕಾರಿಗಳು, ತೋಟಗಾರಿಕೆ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಶ್ರೀಗಂಧ ಮಾರಾಟಕ್ಕೆ ಯತ್ನ: ಐವರ ಬಂಧನ



ಹೆಚ್.ಡಿ.ಕೋಟೆ, ಆ.8– ಅಕ್ರಮವಾಗಿ ಶ್ರೀಗಂಧದ ತುಂಡುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ 5 ಮಂದಿಯನ್ನು ಅರಣ್ಯ ಇಲಾಖೆ ಬಂಧಿಸಿದೆ ಎಂದು ಆರ್‌ಎಫ್‌ಓ ಪ್ರಸನ್ನ ಕುಮಾರ್ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ಪ್ರಾದೇಶಿಕ ವಲಯ ವ್ಯಾಪ್ತಿಯ ಅಂತರಸಂತೆ ಹೋಬಳಿ, ಬೀಚನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ರಾಮೇನಹಳ್ಳಿ ಗ್ರಾಮದ ತಾರಕ ನಾಲಾ ಭಾಗದಲ್ಲಿ ಅಕ್ರಮವಾಗಿ ಶ್ರೀಗಂಧದ ತುಂಡುಗಳನ್ನು ಶೇಖರಿಸಿ ಮಾರಾಟ ಮಾಡಲು ಯತ್ನಿಸಿದ್ದ ಬಗ್ಗೆ ಖಚಿತ ಮಾಹಿತಿ ಪಡೆದು, ಡಿಸಿಎಫ್ ಬಸವರಾಜು ಹಾಗೂ ಎಸಿಎಫ್ ಎನ್. ಲಕ್ಷ್ಮೀಕಾಂತ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿ ಸುಮಾರು 24.470 ಕೆ.ಜಿ ಶ್ರೀಗಂಧ ಮರದ ತುಂಡುಗಳನ್ನು ವಶಪಡಿಸಿಕೊಳ್ಳಲಾಯಿತು. ಈ ವೇಳೆ ಆರೋಪಿಗಳಾದ ರಾಮೇನಹಳ್ಳಿ ಹಾಡಿಯ ರಾಜಣ್ಣ, ಸುರೇಶ್, ಬಸವನಗಿರಿ ಹಾಡಿಯ ಶಿವಣ್ಣ, ಹಿರೇಹಳ್ಳಿ ಗ್ರಾಮದ ಯೋಗೇಶ್, ಹೊಸಹಳ್ಳಿ ಹಾಡಿಯ ಗಿರೀಶ್ ಅವರುಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓಗಳಾದ ಚಂದನ್, ವಿನೋದ್, ಪೆಮ್ಮಯ್ಯ, ಬೀಟ್ ಫಾರೆಸ್ಟರ್ ಸುರೇಂದ್ರ ಪ್ರಸಾದ್, ವಾಚರ್‌ಗಳಾದ ಮಹಮದ್, ಸಿಬ್ಬಂದಿಗಳಾದ ಚೆನ್ನೇಗೌಡ, ಜನಾರ್ಧನ್, ವಸಂತ, ದೀಪಕ್, ಪಾಲ್ಗೊಂಡಿದ್ದರು.

ಪತ್ರಿಕಾ ಪ್ರತಿನಿಧಿ ಆಲಗೂಡು ಪ್ರಕಾಶ್ ನಿಧನ



ತಿ.ನರಸೀಪುರ, ಆ.8 –ಪತ್ರಿಕಾ ಪ್ರತಿನಿಧಿ ಹಾಗೂ ವಿತರಕ ಆಲಗೂಡು ಪ್ರಕಾಶ್(58) ನಿಧನರಾಗಿದ್ದಾರೆ. ಪಟ್ಟಣದ ಹಳೇ ಖಾಸಗೀ ಬಸ್ ನಿಲ್ದಾಣದಲ್ಲಿ ಕಳೆದ ಹಲವಾರು ವರ್ಷಗಳಿಂದ ಪತ್ರಿಕೆ ಮಾರಾಟ ಮಾಡುತ್ತಿದ್ದ ಆಲಗೂಡು ಗ್ರಾಮದ ದಿ.ವೆಂಕಟರಮಣ ಶೆಟ್ಟಿಯವರ ಪುತ್ರ ಪ್ರಕಾಶ್ ಮಂಗಳವಾರ ಬೆಳಿಗ್ಗೆ ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ. ತಂದೆ ವೆಂಕಟರಮಣ ಶೆಟ್ಟಿ ನಿಧನರಾದ ನಂತರ ಪ್ರಕಾಶ್ ಪತ್ರಿಕಾ ವಿತರಕರಾಗಿ ಹಾಗೂ ಏಜೆಂಟರಾಗಿ ಕೆಲಸ ಮಾಡುತ್ತಿದ್ದರು.

ಮೃತರು ಪತ್ನಿ, ಓರ್ವ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದು, ಆಲಗೂಡು ಗ್ರಾಮದ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು. ಸಾಕ್ಷ್ಯಚಿತ್ರ ನಿರ್ದೇಶಕ ಪೂರ್ಣಚಂದ್ರ ಸೇರಿದಂತೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಚೆನ್ನಬಸವಣ್ಣ, ಪತ್ರಕರ್ತರಾದ ಮಾಧು, ಎಸ್.ಕುಮಾರ್, ಎಂ.ನಾರಾಯಣ್ ಮೃತರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಲೋಕಸಭಾ ಸದಸ್ಯತ್ವ ಮರುಸ್ಥಾಪನೆ; ಅಧಿಕೃತ ಸರ್ಕಾರಿ ಬಂಗಲೆಯನ್ನು ಮರಳಿ ಪಡೆದ ರಾಹುಲ್ ಗಾಂಧಿ



ನವದೆಹಲಿ, ಆ.8– ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೆ ದೆಹಲಿಯ ಅಧಿಕೃತ ಸರ್ಕಾರಿ ಬಂಗಲೆಯನ್ನು ಮರು ಹಂಚಿಕೆ ಮಾಡಲಾಗಿದೆ. ಅವರ ಲೋಕಸಭೆ ಸದಸ್ಯತ್ವ ಅನರ್ಹತೆಯನ್ನು ಸೋಮವಾರ ರದ್ದುಪಡಿಸಲಾಗಿದ್ದು, ಅದಾದ ಒಂದು ದಿನದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ದೆಹಲಿಯ ಲುಟೆನ್ಸ್‌ನಲ್ಲಿರುವ ನಂ.12, ತುಘಲಕ್ ಲೇನ್‌ನಲ್ಲಿನ ಸರ್ಕಾರಿ ಬಂಗಲೆಯನ್ನು ಲೋಕಸಭೆಯ ಸದನ ಸಮಿತಿಯು ರಾಹುಲ್ ಗಾಂಧಿ ಅವರಿಗೆ ನೀಡಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ. ಅವರು ಈ ಹಿಂದೆ ಅಲ್ಲಿಯೇ ತಂಗಿದ್ದರು.

2019ರಲ್ಲಿ ಕರ್ನಾಟಕದ ಕೋಲಾರದಲ್ಲಿ ಮಾಡಿದ ಮೋದಿ ಉಪನಾಮ ಕುರಿತಾದ ಟೀಕೆಗಳಿಗೆ ಸಂಬಂಧಿಸಿದ ಮಾನನಷ್ಟ ಪ್ರಕರಣದಲ್ಲಿ ರಾಹುಲ್ ಗಾಂಧಿಯನ್ನು ತಪ್ಪಿತಸ್ಥ ಎಂದು ಆದೇಶಿಸಿದ್ದ ಗುಜರಾತ್‌ನ ಸೂರತ್ ನ್ಯಾಯಾಲಯ, ಮಾರ್ಚ್ 23 ರಂದು ಎರಡು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಇದಾದ ಮರುದಿನವೇ ಅವರನ್ನು ಲೋಕಸಭೆಯ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿತ್ತು. ಸೂರತ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ರಾಹುಲ್ ಗಾಂಧಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಶುಕ್ರವಾರ (ಆ. 4) ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ಸೂರತ್ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಗೆ ತಡೆ ನೀಡಿತ್ತು. ನಂತರ ಸೋಮವಾರ ರಾಹುಲ್ ಗಾಂಧಿಯವರ ಲೋಕಸಭಾ ಸದಸ್ಯತ್ವವನ್ನು ಮರು ಸ್ಥಾಪಿಸಲಾಗಿದೆ.

ಸಂಸತ್ ಸ್ಥಾನದಿಂದ ಅನರ್ಹಗೊಂಡ ಬಳಿಕ ಸರ್ಕಾರ ನೀಡಿದ್ದ ಬಂಗಲೆಯನ್ನು ಏಪ್ರಿಲ್ 22ರೊಳಗೆ ತೊರೆಯುವಂತೆ ರಾಹುಲ್ ಗಾಂಧಿಗೆ ನೋಟಿಸ್ ನೀಡಲಾಗಿತ್ತು. ಹೀಗಾಗಿ, ಅವರು ಕಳೆದ ಏಪ್ರಿಲ್‌ನಲ್ಲಿ ಈ ಬಂಗಲೆಯನ್ನು ಖಾಲಿ ಮಾಡಿ ತಾಯಿ ಸೋನಿಯಾ ಗಾಂಧಿ ನಿವಾಸಕ್ಕೆ ತೆರಳಿದ್ದರು. ಸತ್ಯವನ್ನು ಮಾತನಾಡಿದ್ದಕ್ಕಾಗಿ ನಾನು ಈ ಬೆಲೆ ತೆರುತ್ತಿದ್ದೇನೆ ಮತ್ತು ಜನರ ಸಮಸ್ಯೆಗಳ ಪರ ಧ್ವನಿ ಎತ್ತುವುದನ್ನು ಮುಂದುವರಿಸುವುದಾಗಿ ರಾಹುಲ್ ಗಾಂಧಿ ಹೇಳಿದ್ದರು.

ಬಾಕಿ ಪಾವತಿಗೆ ಹಣ ಕೇಳಿಲ್ಲ ಎಂದರೆ ಅಜ್ಜಯ್ಯನ ಮಠಕ್ಕೆ ಬಂದು ಪ್ರಮಾಣ ಮಾಡಲಿ

●ಬಿಬಿಎಂಪಿ ಗುತ್ತಿಗೆದಾರರ ಸವಾಲು ●ಗುತ್ತಿಗೆದಾರರ ಸವಾಲಿಗೆ ಡಿಕೆಶಿ ಖಡಕ್ ಎದಿರೇಟು


ಬೆಂಗಳೂರು, ಆ.8– ಬಿಬಿಎಂಪಿ ಗುತ್ತಿಗೆದಾರರ ಬಳಿ ಡಿಸಿಎಂ ಡಿಕೆ ಶಿವಕುಮಾರ್ ಹಣಕ್ಕೆ ಬೇಡಿಕೆಯಿಡುತ್ತಿದ್ದಾರೆ. ಹಣ ಕೇಳಿಲ್ಲ ಎಂದರೆ ಅಜ್ಜಯ್ಯನ ಮಠಕ್ಕೆ ಬಂದು ಪ್ರಮಾಣ ಮಾಡಲಿ ಎಂದು ಬಿಬಿಎಂಪಿ ಗುತ್ತಿಗೆದಾರರು ಸವಾಲು ಹಾಕಿದ್ದಾರೆ. ನಿನ್ನೆಯಷ್ಟೇ ಬಿಬಿಎಂಪಿ ಗುತ್ತಿಗೆದಾರರ ಸಂಘ ಸುದ್ದಿಗೋಷ್ಠಿ ನಡೆಸಿತ್ತು. ಈ ವೇಳೆ ಗುತ್ತಿಗೆದಾರರು ಡಿ.ಕೆ.ಶಿವಕುಮಾರ್ ವಿರುದ್ಧ ಮಾತನಾಡಿರಲಿಲ್ಲ. ಆದರೆ ಗುತ್ತಿಗೆದಾರರ ಸಂಘದ ಅಧ್ಯಕ್ಷರ ಜೊತೆಗೆ ವಾಗ್ವಾದ ನಡೆಸಲಾಗಿತ್ತು. ಆಗ ಗುತ್ತಿಗೆದಾರ ಹೇಮಂತ್ ಎಂಬುವರು ಬಾಕಿ ಬಿಲ್ ಪಾವತಿಗೆ ಹಣ ಕೇಳಿದ್ದಾರೆ. ಹಣ ಕೇಳಿಲ್ಲ ಎನ್ನುವುದಾದರೆ ಅವರು ನಂಬುವ ಅಜ್ಜಯ್ಯನ ಮಠಕ್ಕೆ ಬಂದು ಪ್ರಮಾಣ ಮಾಡಲಿ. ಹಣ ಕೇಳಿದ್ದಾರೆ ಎಂದು ನಾನು ಪ್ರಮಾಣ ಮಾಡುತ್ತೇನೆ ಎಂದು ಡಿಕೆಶಿ ವಿರುದ್ಧ ಮಾತನಾಡಿದರು.

ನ್ಯಾಯಯುತವಾಗಿ ಕೆಲಸ ಮಾಡಿದ್ದೇವೆ. ಕಮಿಷನ್ ಮೇಲೆ ಯಾಕೆ ಆರೋಪ ಮಾಡ್ತಿರಾ, ಇಷ್ಟು ದಿನ ಅವರೇ ಅಲ್ವಾ ಬಿಲ್ ಪಾವತಿ ಮಾಡ್ತಿರೋದು, ಈಗ ಯಾಕೆ ಅವರು ಬಿಲ್ ತಡೆಯುತ್ತಾರೆ. ಅವರಿಗೆ ಬಿಲ್ ತಡೆ ಹಿಡಿಯುವಂತೆ ಹೇಳಿರೋದು ಯಾರು, ಅವರ ಬಗ್ಗೆ ಮಾತನಾಡಿ. ಈಗ ಸಮಿತಿ ಮಾಡಿದ್ದಾರೆ, ಬಿಲ್ ಸ್ಯಾಂಕ್ಷನ್ ಮಾಡಿಸಿಕೊಳ್ಳುತ್ತೀರಾ?, ನಾವೇನು ಕಳ್ಳತನ ಮಾಡಿಲ್ಲ, ಕೋರ್ಟ್‌ಗೆ ಹೋಗೋಣ. ನಾನು ಕೂಡ ಕಾಂಗ್ರೆಸ್‌ಗೆ ಓಟ್ ಹಾಕಿದವನು, 94 ಕೋಟಿ ಬಾಕಿ ಬಿಲ್ ಬರಬೇಕಿದೆ'' ಎಂದು ಹೇಮಂತ್ ಆಕ್ರೋಶ ವ್ಯಕ್ತಪಡಿಸಿದ್ದರು.

ಡಿ.ಕೆ ಶಿವಕುಮಾರ್ ಹೇಳಿದ್ದೇನು?: ಬಾಕಿ ಬಿಲ್ ಪಾವತಿಗೆ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎನ್ನುವ ಗುತ್ತಿಗೆದಾರರ ಆರೋಪಕ್ಕೆ ಸಂಬಂಧಿಸಿದಂತೆ ಸ್ವತಃ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದು, ಯಾವ ಬಿಲ್ ವಿಚಾರವೂ ಗೊತ್ತಿಲ್ಲ. ಯಾರಿಗೂ ಉತ್ತರ ಕೊಡಲ್ಲ. ನನಗೂ ಪ್ರಜ್ಞೆ ಇದೆ. ನನಗೂ ರಾಜಕಾರಣ ಗೊತ್ತಿದೆ. ಯಾವ ಗುತ್ತಿಗೆದಾರನ ಹಿಂದೆ ಯಾರಿದ್ದಾರೆಂದು ನನಗೂ ಗೊತ್ತಿದೆ.

ಯಾವ ಬ್ಲ್ಯಾಕ್‌ಮೇಲ್ ಕೂಡ ನನ್ನ ಮುಂದೆ ನಡೆಯುವುದಿಲ್ಲ. ನಾವು ವಿಪಕ್ಷದಲ್ಲಿದ್ದಾಗ ನಮ್ಮ ಬಳಿ ಹುಡುಕಿಕೊಂಡು ಬರುತ್ತಿರಲಿಲ್ವಾ? ನಾನು ಯಾರಿಗೂ ಪ್ರಮಾಣ ಮಾಡಬೇಕಾದ ಅವಶ್ಯಕತೆ ಇಲ್ಲ. ಕೆಲಸ ಮಾಡಿದ್ರೆ ಹಣ ಬಿಡುಗಡೆ ಆಗುತ್ತೆ ಇಲ್ಲದಿದ್ದರೆ ಆಗುವುದಿಲ್ಲ ಯಾರಿಗೋ ಬ್ಲ್ಯಾಕ್‌ಮೇಲ್ ಮಾಡಿದಂತೆ ನನಗೆ ಮಾಡಲು ಬರಬೇಡಿ ಎಂದು ಖಡಕ್ ಆಗಿ ತಿರುಗೇಟು ನೀಡಿದರು.

ಕಾಣೆಯಾಗಿದ್ದಾರೆ



ನನ್ನ ಅಣ್ಣ ನಾಗೇಂದ್ರ ಕುಮಾರ್ ಪಿ S/o ಲೇಟ್ ಪುಟ್ಟಸ್ವಾಮಿ ಪಿ, ವಯಸ್ಸು 47 ವರ್ಷ, ದೇವರಾಜ ಮೊಹಲ್ಲಾ, ಮೈಸೂರು. ಇವರು ಕಳೆದ 2 ವರ್ಷಗಳ ಹಿಂದೆ ಕೆಲಸಕ್ಕೆಂದು ಹೋದವರು ವಾಪಸ್ಸು ಮನೆಗೆ ಬಂದಿರುವುದಿಲ್ಲ. ಯಾರಾದರು ಕಂಡಲ್ಲಿ ಹತ್ತಿರದ ಪೋಲೀಸ್ ಠಾಣೆಯನ್ನು ಸಂಪರ್ಕಿಸಿ ಅಥವಾ ಈ ನಂಬರ್‌ಗೆ ಸಂಪರ್ಕಿಸಿ


ನಾಗೇಂದ್ರ ಕುಮಾರ್ ಪಿ 7259115525

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಬೇಕಾಗಿದ್ದಾರೆ

ಮೈಸೂರಿನಲ್ಲಿರುವ ಮ್ಯಾಟ್ರೆಸ್ ಕಂಪನಿಗೆ ಚಾಲಕರು
(4 ಚಕ್ರಗಳು ಮತ್ತು 6 ಚಕ್ರಗಳ ವಾಹನ, ಡಿಎಲ್ ಹೊಂದಿರಬೇಕು) ಬೇಕಾಗಿದ್ದಾರೆ.
ಮೆ॥ ಕಂಫರ್ಟ್ ಸ್ಲೀಪ್
ಇಲವಾಲ, ಮೈಸೂರು
ನಿಮ್ಮ ಸ್ವ-ವಿವರಗಳನ್ನು ಇ-ಮೇಲ್ ಕಳುಹಿಸಿ:
comfortsleepmysuru@gmail.com
9686868912,9591200764

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಇವರು ದಿ: 30.07.23 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಕೋರುವ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 08.08.23 ಬುಧವಾರ ...

ತಮ್ಮಯ್ಯ ಎಂ

3ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪುಷ್ಪಲತಾ.ಜಿ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಲಕ್ಷ್ಮಣ.ವಿ

ಮೊದಲನೇ ವರ್ಷದ ಸವಿನೆನಪು



ಎಂ.ಪುಟ್ಟಸ್ವಾಮಿ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವಾಗಿವೆ ಎಂದು ಪತ್ರಿಕೆ ಭಾವಿಸುತ್ತದೆ ... ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ದಿನಾಂಕ : 02/08/2023
ಪಿ.ಎಸ್.ಶ್ರೀಧರ್ ಬಿ.ಎಸ್.ಸಿ
ವಕೀಲರು
ಕೊಠಡಿ ಸಂಖ್ಯೆ 21, ಜೆ.ಪಿ.ಟ್ರಸ್ಟ್ ಕಟ್ಟಡ, ಗ್ರಾಮೀಣ ಬಸ್ ನಿಲ್ದಾಣದ ಎದುರು, ಹುಣಸೂರು

ಕರ್ನಾಟಕ ಸರ್ಕಾರ
ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ
ಪೊನ್ನಂಪೇಟೆ, ವಿರಾಜಪೇಟೆ ತಾ॥
(ತಾಲ್ಲೂಕು ಪಂಚಾಯತ್ ಆವರಣ.)
ದೂ: 08274-261261, ಇ-ಮೇಲ್ ವಿಳಾಸ: ttwoppet@gmail.com

ಸಂ:ತಾಪವಕ:ಪೊಪೇ:ಹೊ.ಗು.ವಾಹನ ಟೆಂಡರ್ : 2023-24 ದಿನಾಂಕ: 07.08.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಪೊನ್ನಂಪೇಟೆ, ವಿರಾಜಪೇಟೆ ತಾಲ್ಲೂಕು ಇಲ್ಲಿಗೆ ಕಛೇರಿ ಉಪಯೋಗಕ್ಕಾಗಿ ಮಹೀಂದ್ರ ಬೊಲೆರೋ (Model 2016) ವಾಹನವನ್ನು ವಾಹನದ ಮಾಲೀಕರು ಅಥವಾ ಟ್ರಾವೆಲ್ ಏಜೆನ್ಸಿ ಸಂಸ್ಥೆಯ ಮುಖಾಂತರ ಮಾಸಿಕ ಗುತ್ತಿಗೆ ಆಧಾರದ ಮೇಲೆ ಪಡೆಯಲು ಆಹ್ವಾನಿಸಲಾಗಿದ್ದು, ಆಸಕ್ತ ವಾಹನಗಳ ಮಾಲೀಕರು/ಟ್ರಾವೆಲ್ ಏಜೆನ್ಸಿ ದಿನಾಂಕ : 08.08.2023 ರಿಂದ ದಿನಾಂಕ: 18.08.2023 ರವರೆಗೆ ಕಛೇರಿ ಅವಧಿಯಲ್ಲಿ ಕಛೇರಿಗೆ ಭೇಟಿ ನೀಡಿ ಟೆಂಡರ್ ಅರ್ಜಿಯನ್ನು ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿ, ಷರತ್ತು ಹಾಗೂ ನಿಬಂಧನೆಗಳಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 08274- 261261ರ ಮೂಲಕ ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– (ಡಿ.ಜಿ.ಗುರುಶಾಂತಪ್ಪ) ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ವಿರಾಜಪೇಟೆ ತಾಲ್ಲೂಕು, ಪೊನ್ನಂಪೇಟೆ.

ತಿ.ನರಸೀಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ನಿ), ತಿ.ನರಸೀಪುರ.

2022–23ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಬಂಧುಗಳೇ, ಮೇಲಂಡ ಸಂಘದ 2022-2023ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ದಿನಾಂಕ: 11-08-2023ರ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ ಸಂಘದ ಆವರಣದಲ್ಲಿ ... ಕರೆಯಲಾಗಿದೆ.

ಕಾರ್ಯನಿರ್ವಾಹಕ ಮಂಡಳಿ ಆಜ್ಞೆಯ ಮೇರೆಗೆ ಸಹಿ/ ... ಮೊ.ನಂ: 9036840738

ಕರ್ನಾಟಕ ಸರ್ಕಾರ
ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ.)
ಜಿಲ್ಲಾ ಪಂಚಾಯತ್, ಹಾಸನ

ದೂರವಾಣಿ ಸಂಖ್ಯೆ: 9482370363 Mail ID : eomdmhassan91@gmail.com
ಸಂಖ್ಯೆ:ಜಿ.ಪಂ.ಹಾ/ಶಿ.ಇ.ಹೊ.ಗು.ಟೆ.31/2023–24 ದಿನಾಂಕ:07-08-2023

ಇ–ಪ್ರೊಕ್ಯೂರ್‌ಮೆಂಟ್ ಇ–ಟೆಂಡರ್ ಪ್ರಕಟಣೆ

... ದಿನಾಂಕ: 22–08–2023 E Procurement ... ದಿನಾಂಕ: 23/08/2023 ಸಂಜೆ 5.00 ... ದಿನಾಂಕ: 28/08/2023 ರಂದು ಬೆಳಿಗ್ಗೆ 11:00 ಗಂಟೆಗೆ ... 9482370363 ...

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ವಾಸಾಸಂಇ/ಪಿಸಿಸಿ/ಹಾಸನ/194/ಕೆಎಸ್‌ಪಿಸಿಎ/199/2023–24 ಹಾಸನ.

ಪಟ್ಟಣ ಪಂಚಾಯಿತಿ ಕಾರ್ಯಾಲಯ
ಶ್ರೀರಾಂಪುರ, ಮೈಸೂರು ಜಿಲ್ಲೆ – 570008
ದೂರವಾಣಿ: 0821-2330109 ಇಮೇಲ್: itstaff_ulb_srirampura@yahoo.com

ಶ್ರೀ.ಪ.ಪ./ಕೆ.ಆ.ನಿ/ಪಿಎಚ್/ಘತ್ಯಾನಿ/ಬೆಳಗಿನ ಉಪಹಾರ/ ಟೆ.ಪ್ರ./02/2023-24 ದಿನಾಂಕ :07-08-2023

ವಿಸ್ತರಿಸಲಾದ ಟೆಂಡರ್ ಪ್ರಕಟಣೆ

ಶ್ರೀರಾಂಪುರ ಪಟ್ಟಣ ಪಂಚಾಯಿತಿ ವತಿಯಿಂದ ಹೊರಡಿಸಲಾಗಿದ್ದ ಪೌರಕಾರ್ಮಿಕರ ಬೆಳಗಿನ ಉಪಹಾರ ಸಂಬಂಧಿತ ಟೆಂಡರ್ ಪ್ರಕಟಣೆ ಸಂಖ್ಯೆ: ಶ್ರೀ.ಪ.ಪ./ಕೆ.ಆ.ನಿ/ಪಿಎಚ್./ಘತ್ಯಾನಿ/ಬೆಳಗಿನ ಉಪಹಾರ/ ಟೆ.ಪ್ರ./01/ 2023-24, ದಿನಾಂಕ:28-07-2023ರ ಬಾಬ್ತು ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವನ್ನು ದಿ:18.08.2023ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದ್ದು, ಉಳಿದ ವಿವರಗಳು ಹಿಂದಿನ ಟೆಂಡರ್ ಪ್ರಕಟಣೆಯಂತೆಯೇ ಇರುತ್ತವೆ. ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಕಡೆಯ ದಿನಾಂಕ: 17.08.2023 ಸಂಜೆ 5.30. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಭೇಟಿ ನೀಡಿ ತಿಳಿದುಕೊಳ್ಳತಕ್ಕದ್ದು.

ಸಹಿ/– (ಗಿರೀಶ್ ಜಿ.ಎನ್.) ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಸಹಿ/– (ಎ.ಎಮ್. ಶ್ರೀಧರ್) ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಶ್ರೀರಾಂಪುರ



ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನಿಯರ್ ರವರ ಕಚೇರಿ, ಕಬಿನಿ ನಾಲೆಗಳ ವಿಭಾಗ, ನಂಜನಗೂಡು
ಪ್ರಕಟಣೆ ಸಂಖ್ಯೆ : 2/2023–24 ದಿನಾಂಕ: 07–08–2023

2023ರ ಖಾರೀಫ್ ಬೆಳೆಗಳಿಗೆ ನುಗು ಜಲಾಶಯ ಯೋಜನೆಯ ಕೆಳಗೆ ನುಗು ಮೇಲ್ದಂಡೆ, ನುಗು ಬಲದಂಡೆ ಮತ್ತು ನುಗು ಎಡದಂಡೆ ನಾಲೆಗಳ ಅಚ್ಚುಕಟ್ಟಿನ ಜಮೀನುಗಳಿಗೆ ಬಿಡುವ ಕಟ್ಟುನೀರಿನ ವಿವರ.

1) ನೀರಾವರಿಗೆ ನೀರನ್ನು ಬಿಡುವ ದಿನ : ದಿನಾಂಕ 10–08–2023
2) ಸರಬರಾಜಿನ ಅವಧಿ : ದಿನಾಂಕ: 10–08–2023 ರಿಂದ 5–12–2023 ರವರೆಗೆ ಕಟ್ಟು ನೀರು
3) ನೀರು ಸರಬರಾಜು ಮಾಡುವ ವಿಸ್ತೀರ್ಣ : ನುಗು ಮೇಲ್ದಂಡೆ ನಾಲೆ 13000 ಎಕರೆಗಳು (5261 ಹೆಕ್ಟೇರ್).
4) ಬೆಳೆ : ಅರೆ ನೀರಾವರಿ ಬೆಳೆ.
5) ನೀರು ಸರಬರಾಜು ಮಾಡುವ ವಿಸ್ತೀರ್ಣ : 1) ನುಗು ಬಲದಂಡೆ ನಾಲೆ 3153 ಎಕರೆಗಳು (1276 ಹೆಕ್ಟೇರ್)
2) ನುಗು ಎಡದಂಡೆ ನಾಲೆ 1958 ಎಕರೆಗಳು (792 ಹೆಕ್ಟೇರ್)
6) ಬೆಳೆ : ಅಲ್ಪಾವಧಿ ಭತ್ತದ ಬೆಳೆ.

ಕ್ರ.ಸಂ	ನೀರು ಬಿಡುವ ಅವಧಿ (ದಿನಾಂಕ)	ಒಟ್ಟು ದಿನಗಳು	ನೀರು ನಿಲ್ಲಿಸುವ ಅವಧಿ (ದಿನಾಂಕ)	ಒಟ್ಟು ದಿನಗಳು
1	10.08.2023 ರಿಂದ 13.09.2023	35	14.09.2023 ರಿಂದ 20.09.2023	7
2	21.09.2023 ರಿಂದ 05.10.2023	15	06.10.2023 ರಿಂದ 12.10.2023	7
3	13.10.2023 ರಿಂದ 27.10.2023	15	28.10.2023 ರಿಂದ 03.11.2023	7
4	04.11.2023 ರಿಂದ 18.11.2023	15	19.11.2023 ರಿಂದ 25.11.2023	7
5	26.11.2023 ರಿಂದ 05.12.2023	10	06.12.2023 ರಿಂದ ನೀರು ಸರಬರಾಜನ್ನು ಸಂಪೂರ್ಣವಾಗಿ ನಿಲ್ಲಿಸಲಾಗುವುದು	

ಸಹಿ/– ಸದಸ್ಯ ಕಾರ್ಯದರ್ಶಿಗಳು, ನುಗು ನೀರಾವರಿ ಸಲಹಾ ಸಮಿತಿ ಹಾಗೂ ಕಾರ್ಯಪಾಲಕ ಇಂಜನಿಯರ್, ಕಬಿನಿ ನಾಲೆಗಳ ವಿಭಾಗ, ನಂಜನಗೂಡು